8. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ಮೈಸೂರು ವಿಶ್ವವಿದ್ಯಾನಿಲಯ ಸಿಬ್ಬಂದಿಗಳ ಆಯ್ಕೆಯಲ್ಲಿ ಆಗಿರುವ ಅಕ್ರಮಗಳ ಬಗ್ಗೆ

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ಸಿಬ್ಬಂದಿ ಆಯ್ಕೆ, ಲೆಕ್ಚರರ್‌ಗಳ ಆಯ್ಕೆ, ರೀಡರ್ ಆಯ್ಕೆ, ಪ್ರೊಫೆಸರ್‌ಗಳ ಆಯ್ಕೆಯಾಗಿದೆ. ಈ ಆಯ್ಕೆಯಲ್ಲಿ ಬಹಳ ಅಕ್ರಮಗಳು ನಡೆದಿದೆ. ಕಾನೂನಿಗೆ ವಿರುದ್ಧವಾಗಿ ಎಲ್ಲಾ ತೀರ್ಮಾನಗಳನ್ನು ಮೀರಿ, ಆ ವಿಶ್ವವಿದ್ಯಾನಿಲಯದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಕಡೆ ಸ್ವಜನ ಪಕ್ಷಪಾತವಾಗುತ್ತಿದೆ. ಅವರಿಗೆ ಇಷ್ಟ ಬಂದಂಥ ರೀತಿಯಲ್ಲಿ

ಇವತ್ತು ಕಾನೂನು ಅನ್ನು, ಸುಪ್ರೀಂ ಕೋರ್ಟ್ ತೀರ್ಮಾನವನ್ನು, University statutes ಅನ್ನು ಬದಿಗಿಟ್ಟು ಇವತ್ತು ಅವರಿಗೆ ಬೇಕಾದವರಿಗೆ ಕೆಲಸವನ್ನು ಕೊಡಬೇಕೆಂದು ಹೇಳಿ, ಈ ಬಗ್ಗೆ 2,3 ಸಲ recruitment ಆಗಿದೆ, ಅದನ್ನು ತಮ್ಮ ಗಮನಕ್ಕೆ ತರಬಯಸಿ, ಆ ಬಗ್ಗೆ ನಾನು ಮಾತನಾಡಬೇಕಾಗಿದೆ. ಮೊದಲನೆಯದಾಗಿ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ 10 ವರ್ಷ ತುಂಬಿದವರನ್ನು, continues ಆಗಿ ಕೆಲಸ ಮಾಡಿದವರನ್ನು, ಖಾಯಂ ಮಾಡಿಕೊಳ್ಳಬೇಕೆನ್ನುವ ನಿಯಮದ ಕೆಳಗೆ, ಅಲ್ಲಿ ಒಂದು sub-committeeಯನ್ನು ನೇಮಕ ಮಾಡಿದರು. ಆ ಕಮಿಟಿಯ ಶಿಫಾರಸ್ಸನ್ನು ಕೆಲವರಿಗೆ ಕೊಟ್ಟರು. ಇಷ್ಟು ಜನರು eligible candidates ಇರುತ್ತಾರೆ, ಇಷ್ಟು ಜನರನ್ನು ಮಾತ್ರ ಮಾಡಬೇಕೆಂದು ಹೇಳಿ, ಇದರ ಜೊತೆಗೆ ಇನ್ನೊಂದು ಶಿಫಾರಸ್ಸನ್ನು ಅವರು ಕೊಟ್ಟರು. ಅವರ ಜೊತೆಗೆ ಮಾನವೀಯ ದೃಷ್ಟಿಯಿಂದ ನಾವು ಕೆಲವರನ್ನು consider ಮಾಡಬೇಕೆಂದು ಹೇಳಿದರು. ಇಲ್ಲಿ ಸುಪ್ರೀಂ ಕೋರ್ಟ್ ತೀರ್ಮಾನ ಸ್ಪಷ್ಟವಾಗಿದೆ. Against vacancy, eligible candidates who have completed the tenure of 10 years, ಅಂಥವರನ್ನು ಮಾತ್ರ ಮಾಡಬೇಕೆಂದು ಇದೆ. ಇಲ್ಲಿ ಎರಡು ದುಷ್ಕೃತ್ಯಗಳು ನಡೆದಿವೆ. ಮೊದಲನೆಯದು 10 years ಆಗದೇ ಇರುವವರನ್ನು ತೆಗೆದುಕೊಂಡಿರುವುದು. ಎರಡನೆಯದು, eligible candidates ಇದ್ದರೂ, eligible candidates ಇಲ್ಲವೆಂದು ಹೇಳಿ, ಅವರನ್ನು wait list ಮಾಡಿ, ಬೇರೆಯವರಿಗೆ appointment ಕೊಟ್ಟರು. ಈ ರೀತಿ University ಗಳು ಆಗಿ ಬಿಟ್ಟರೆ ಈ ರಾಜ್ಯದ ಗತಿ ಏನು? ಯಾರು ಏನು

ಮಾಡಬೇಕು? ಗೊತ್ತಿಲ್ಲ. ಇನ್ನೊಂದು High Court ಮುಂದೆ ಅರ್ಜಿ ಹಾಕಿ, High Court ನವರು ಸೂಚನೆ ಕೊಟ್ಟು ಇವರನ್ನು ನೀವು consider ಮಾಡಬೇಕೆಂದರು. ಅವರನ್ನು consider ಮಾಡದೇ ಇರುವುದು. ಇವತ್ತು 9 ಜನ ಕೋರ್ಟ್ ಮುಂದೆ ಇರುವವರನ್ನು ವಿನಾಕಾರಣ ಆಚೆ ಇಟ್ಟಿದಾರೆ. ಆ statement ಇವತ್ತು ನಮ್ಮ ಮುಂದೆ ಇದೆ. ನಾನು ಅದಕ್ಕೆ ಹೇಳಿದ್ದು ಇದರ ಬಗ್ಗೆ ವ್ಯಾಪಕವಾಗಿ ಮಾತನಾಡಬೇಕಾದ ವಿಷಯವಾಗಿದ್ದು, ತಾವು ನಿರ್ಬಂಧ ಮಾಡಿ ಬಿಟ್ಟಿರಿ, ಹಾಗಾಗಿ ನಮಗೆ ಈಗ ಸ್ವಲ್ಪ ತೊಂದರೆ ಆಗುತ್ತದೆ. ಈಗ recruitment ಮಾಡಬೇಕಾದರೆ, ಅವರು advertisement ಅನ್ನು ಮಾಡಿದ್ದರು. ಈ advertisement ನಲ್ಲಿ ಏನು ಮಾಡಿದ್ದರು. ಇವರು ಅದನ್ನು ಯಾವುದನ್ನು follow ಮಾಡಿಲ್ಲ. ಇವರು advertisement ವಿರುದ್ಧವಾಗಿ ಇವತ್ತು postಗಳನ್ನು fill up ಮಾಡುವ ಕೆಲಸವನ್ನು ಮಾಡಿದ್ದಾರೆ. ನಾನು ಅದನ್ನು ಹೇಳುತ್ತೇನೆ. Number of posts reserved for OBC as per 2006 notification ಇದರಲ್ಲಿ category-1ನಲ್ಲಿ Professor ಹುದ್ದೆ 1 ಇತ್ತು, category-2Aನಲ್ಲಿ Professor ಹುದ್ದೆ 2 ಇತ್ತು. category-2Bಯಲ್ಲಿ Professor ಹುದ್ದೆ 1 ಇದೆ. category-3Bಯಲ್ಲಿ Professor ಹುದ್ದೆ 1 ಇತ್ತು. category-3Aನಲ್ಲಿ 1 ಇತ್ತು, ಒಟ್ಟು 6 ಹುದ್ದೆಗಳು ಇತ್ತು ಅದನ್ನು convert ಮಾಡಿಬಿಟ್ಟರು. Posts were converted from OBC to GM. ಈ Post ಗಳನ್ನೆಲ್ಲಾ GMಗೆ convert ಮಾಡುತ್ತಾರೆ. ಏಕೆ? ಅವರದೇ ಹಿಂದೆ ಒಂದು provision ಇತ್ತು. ಹಿಂದೆ ಅವರದೇ ಒಂದು provision ಇತ್ತು. ಅಕಸ್ಮಾತ್ ಈ ಸಲ interview ಮಾಡಿದಾಗ eligible candidates ಇಲ್ಲದೆ ಹೋದರೆ ಆ ಪೋಸ್ಟನ್ನು ಅದರ next interviewನಲ್ಲಿ ನಾವು ಕೊಡುತ್ತೇವೆ ಎಂದು reserve ಮಾಡಬಹುದು ಎಂದು ಇತ್ತು. ಇಲ್ಲಿ ಏನಾಗಿದೆ ಎಂದರೆ GMಗೆ number of posts notified in 2007, ಈ recruitment ನಲ್ಲಿ GM-4 ಇತ್ತು. ಕೆಟಗೆರಿ 2A-2 ಇತ್ತು, ಕೆಟಗೆರಿ 1-1 ಇತ್ತು, ಕೆಟಗೆರಿ 2B-1ಇತ್ತು .S.C-1 ಇತ್ತು ಇದನ್ನು ಕೂಡ ಅವರು convert ಮಾಡಿಕೊಂಡುಬಿಟ್ಟರು. converted Post to be carried farroward, ಇದರಲ್ಲಿ six posts were reservesd and the same would be deducted from G.M. in 2007 ಎಂದು notification ಮಾಡಿದರು. ಅದಾದ ನಂತರವೂ advertisement ಮಾಡಿದರು. ಅದನ್ನು ಮಾಡಬೇಕಾದರೆ ಅಲ್ಲಿ ಇಬ್ಬರು Professors ಇದ್ದರು. one was Mr.D.S.Guru another one was Mr. Venkateshan. ಇಬ್ಬರು ವ್ಯಕ್ತಿಗಳಿದ್ದರೂ ಕೂಡ ಅವರಿಗೆ ಕೆಲಸ ಕೊಡಲಿಲ್ಲ. Postಅನ್ನು next

recruitmentಗೆ carry forward ಮಾಡಿಕೊಂಡುಬಿಟ್ಟರು. O.B.Cದು, Scheduled Casteದು ಇದೆರಡದೂ carry forward ಮಾಡಿ, ವೇಕೆನ್ಸಿಗಳನ್ನು ತುಂಬಬೇಕಾದುದರಲ್ಲಿ 90% ವೇಕೆನ್ಸಗಳನ್ನು General Candidateಗಳಿಂದ ತುಂಬಿದರು. ಇವುಗಳನ್ನು General Candidateಗಳಿಂದ ತುಂಬಿದ ಮೇಲೆ, ಇವರಿಗೆ ಮುಂದಿನ ಸಾರಿಯಾದರೂ ಕೊಡಬೇಕಾಗಿತ್ತು. ಆದರೆ ಮುಂದಿನ ಸಾರಿ Advertisement ಮಾಡಿದಾಗಲೂ ಕೂಡ ಅವರಿಗೆ ಕೊಡಲಿಲ್ಲ. 18 ಪೋಸ್ಟ್‌ಗಳಲ್ಲಿ 6 ಪೋಸ್ಟ್‌ಗಳು reserve ಆಗಿತ್ತು. Women reserve, handicapped quota reseve ಹೀಗೆ reserve ಆಗಿತ್ತು. ಇವುಗಳೆಲ್ಲವನ್ನೂ fill up ಮಾಡುವ ಕಡೆ 30 ಪೋಸ್ಟ್‌ಗಳನ್ನು fill up ಮಾಡಿದರು. ಸುಮಾರು 50–52 ಪೋಸ್ಟ್‌ಗಳನ್ನು fill ಮಾಡಲು permission ಇದ್ದ ಕಡೆ ಇವತ್ತು ಒಟ್ಟು 150 ವೇಕೆನ್ಸಿಗಳನ್ನು fill up ಮಾಡಿದ್ದಾರೆ. ನಾನು ಈಗ ಭಾರಿ ತರಾತುರಿಯಲ್ಲಿ ಹೇಳಬೇಕಾಗಿರುವುದರಿಂದ ಎಲ್ಲವನ್ನೂ ವಿವರವಾಗಿ ಹೇಳುವುದಕ್ಕಾಗುವುದಿಲ್ಲ. ನೇಮಕ ಮಾಡಿರುವ ಎಷ್ಟೋ ಕೇಸ್‌ಗಳಲ್ಲಿ ಅವರಿಗೆ eligibility ಇಲ್ಲ. ಅವರು 10 ವರ್ಷ serviceಅನ್ನು complete ಮಾಡಿಲ್ಲ. ಅವರು qualified degree ಯನ್ನೂ ಮಾಡಿಲ್ಲ. qualified ಇದ್ದವರನ್ನು reserve ಗೆ ಇಟ್ಟು qualification ಇಲ್ಲದವರನ್ನು select ಮಾಡಿಬಿಟ್ಟರು. Computer Science ನಿಂದ ಹಿಡಿದು ಎಲ್ಲದಕ್ಕೂ ಇವರು recommend ಮಾಡುತ್ತಾರೆ. Advertised G.M-6 posts, converted from OBC to GM.-5 posts, appointed for 11 posts. On 2-1-2007 interveiwed applicants as required. ಅವರಿಗೆ ಅಧಿಕಾರವಿದ್ದದ್ದು ಮತ್ತು Advertised posts G.M, ನಲ್ಲಿ. 6 ಪೋಸ್ಟ್‌ಗಳನ್ನು appoint ಮಾಡಲಿಕ್ಕೆ. ಆದರೆ ಅವರು 11 ಪೋಸ್ಟ್‌ಗಳಿಗೆ appointment ಮಾಡಿದ್ದಾರೆ. ಉಳಿದ ಐದನ್ನು ಬೇರೆ ಕೆಟಗೆರಿಯಿಂದ convert ಮಾಡಿದ್ದಾರೆ. ಅವತ್ತು ಬೇರೆ eligible candidates ಇದ್ದರೂ ಕೂಡ ಅದನ್ನು GMಗೆ convert ಮಾಡಿದರು. ಅಲ್ಲಿ ಏನಾದರೂ ಯಾರೂ ಏನು ಮಾತನಾಡುವ ಹಾಗಿಲ್ಲ. ಯಾರು ಉಸಿರು ಬಿಡುವ ಆಗಿಲ್ಲ. ಅಲ್ಲಿ ಆ ರೀತಿಯ ಪರಿಸ್ಥಿತಿ ಇದೆ. ಅದಾದ ಮೇಲೆ Lecturers advertised in University. ಇಲ್ಲೂ ಕೂಡ, Computer Science, Botony, Social work, Law, Commerce, Bio-Chemistry ಗಳಲ್ಲೂ waiting list ಮಾಡುತ್ತಾ ಹೋಗುತ್ತಾರೆ. ಯಾರು eligible candidate ಇದ್ದಾರೆ ಅವರನ್ನು appoint ಮಾಡಿಲ್ಲ.. ಯಾರೂ eligible ಆಗಿಲ್ಲ ಅಂಥವರನ್ನು ತುಂಬಿಬಿಟ್ಟಿದ್ದಾರೆ. Second advertisement was done on

19-04-2007. ಕನಿಷ್ಟ ಸೌಜನ್ಯಕ್ಕಾದರೂ, ಇಲ್ಲಾದರೂ ಅವರಿಗೆ accommodate ಮಾಡಬೇಕಾಗಿತ್ತು. 2–1–2007ರಂದು ಯಾರನ್ನು appoint ಮಾಡಲಿಲ್ಲವೋ ಅವರನ್ನು April, May ತಿಂಗಳಲ್ಲಿ advertise ಮಾಡಿದಾಗಲಾದರೂ accommodate ಮಾಡಬೇಕಾಗಿತ್ತು. ಆದರೆ, ಇಲ್ಲಿ ಕೂಡ ಮಾಡಲಿಲ್ಲ. Professor-4.G.M-2, Category-I-1, Category 2B – 1, S.C.-1 ಮಾಡಬೇಕಾಗಿತ್ತು. ಅದೇ ರೀತಿ Readers, G.M-5, Rural and Women-2, S.C-2 Category-I-1 ಮಾಡಬೇಕಾಗಿತ್ತು. ಇಲ್ಲಿ ಬಂದಾಗ ಏನು ಮಾಡಿದರೆಂದರೆ, Number of posts 11ಮಾಡಿಕೊಂಡರು. ಇಲ್ಲಿ ಕೂಡ qualificationಅನ್ನು violate ಮಾಡಿದರು. Reservation has been made as per Government order ಎಂದು ತಪ್ಪು ಹೇಳಿದರು. ಇದನ್ನು ಮಾಡಬೇಕಾದರೂ ಇನ್ನೊಂದು ಅನ್ಯಾಯ ಏನಾಗಿದೆ ಎಂದರೆ, Professor cadreಗೆ ಅಥವಾ ಮೇಲುಗಡೆಯ cadre ಗೆ ಹೋಗಬೇಕಾದರೆ, lower cadre ನಲ್ಲಿ ಇಷ್ಟು ವರ್ಷ service ಆಗಿರಬೇಕು ಎಂದು ಒಂದು ಸರ್ಕಾರಿ ಆದೇಶವಿದೆ. ಕ್ರೀಮಿ ಲೇಯರ್ ಕೆಳಗೆ ಬರತಕ್ಕಂಥವರ ವಾರ್ಷಿಕ ವರಮಾನ 2 ಲಕ್ಷರೂಪಾಯಿಗಳ ಒಳಗಿರಬೇಕು ಎಂದು ಇದೆ, ಅಂದರೆ, ಅವರು service enter ಆದಾಗ ಏನಿತ್ತೋ ಅದನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ಸರ್ಕಾರಿ ಆದೇಶ ಇದೆ. ನಾನು lecturer ಆಗಿದ್ದರೆ ನನ್ನ ವಾರ್ಷಿಕ ವರಮಾನ 2 ಲಕ್ಷ ರೂಪಾಯಿಗಳನ್ನು ದಾಟಿಬಿಟ್ಟಿರುತ್ತದೆ. ಪ್ರೊಫೆಸರ್‌ಗೆ ಯಾರೂ direct ಆಗಿ ಬರುವುದಕ್ಕಾಗುವುದಿಲ್ಲ. Professor category ಗೆ ಬರಬೇಕಾದರೆ income ಎಷ್ಟಿರಬೇಕೆಂಬ ಬಗ್ಗೆ ಸರ್ಕಾರಿ ಆದೇಶ ಸ್ಪಷ್ಟವಾಗಿದೆ. ಅವತ್ತಿನ income ಅನ್ನು calculate ಮಾಡಬಾರದು.University basic service ಗೆ enter ಆಗುವ ದಿವಸ ಏನು qualification ಇತ್ತೋ, ಅದೇ qualification ಅನ್ನು maintain ಮಾಡಬೇಕು ಎಂದು ಇದೆ. ಉದಾಹರಣೆಗೆ, ನಾನು Schedule Caste ಇದ್ದರೂ ಕೂಡ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿಗೆ General ಆಗಿ ಗೆದ್ದಿದ್ದರೂ ಕೂಡ, I am entitled and eligible to contest the Presedint's post ,which is reserved for S.C. ಇಲ್ಲೂ ಹಾಗೆಯೇ ಆಗಬೇಕು. ನನಗೆ 2 ಲಕ್ಷ ರೂಪಾಯಿಗಳ ವರಮಾನ ದಾಟಿದರೂ ಕೂಡ, service ಗೆ ಸೇರಬೇಕಾದರೆ ನನಗೆ ಏನು eligibility ಇತ್ತು eligibility criteria ನೇ ಮುಂದುವರಿಯಬೇಕಾಗಿತ್ತು. ಇಬ್ಬರು lecturers ಗೆ, ನೀವು eligibility ಯಲ್ಲಿ ಬರುವುದಿಲ್ಲ ಎಂದು ಹೇಳಿ ಅವರನ್ನು Professor ಮಾಡುವುದನ್ನು ಕೈಬಿಟ್ಟುಬಿಡುತ್ತಾರೆ. ನಾನು charge ಮಾಡುತ್ತಿದ್ದೇನೆ, ವೈಸ್

ಚಾನ್ಸೆಲರ್‌ರವರ ಹತ್ತಿರದ ಸಂಬಂಧಿ, ಸುಮಾರು ಆರು ತಿಂಗಳಲ್ಲಿ lecturer ಆಗಿ, Assistant Professor ಆಗಿ, Professor ಆಗಿ ಬಿಡುತ್ತಾರೆ. ಅವರು ಎಲ್ಲಿ ಕೆಲಸ ಮಾಡುತ್ತಿದ್ದರು, ಏನು ಕೆಲಸ ಮಾಡುತ್ತಿದ್ದರು ಎನ್ನುವುದು ವಿಚಾರಣೆಯಾಗಬೇಕು. ಅವರು ಅಕಸ್ಮಾತ್ ಯೂನಿವರ್ಸಿಟಿಯಲ್ಲಿ lecturer ಎಂದು recruit ಆಗಿ, ಅವರನ್ನು Bangalore University ಗೆ ಕಳುಹಿಸಿ ನೀವು ಅಲ್ಲಿಗೆ ಹೋಗಿ Reader ಅಥವಾ, Assistant Professor ಎಂದು ಅಲ್ಲಿ appointment ತೆಗೆದುಕೊಳ್ಳಿ ಎಂದು ಕಳುಹಿಸಿದರೆಂದುಕೊಳ್ಳಿ. ಇಲ್ಲಿ appoint ಆದ ತಕ್ಷಣ ಇನ್ನೊಂದು notification ಮಾಡಿ ಅವರನ್ನು Professor of a Department in Mysore, i.e., Physics Department ಗೆ ನೇಮಕ ಮಾಡಿದರು. ಇದಕ್ಕೆ ಏನು ಆಧಾರ Sir? ಇಲ್ಲಿ ಮತ್ತೊಂದು ಏನಾಗಿದೆ ಎಂದರೆ, ಇಷ್ಟು ವರ್ಷ lower cadre ನಲ್ಲಿ ಕೆಲಸ ಮಾಡಿರಬೇಕು or Highly reputed, foreign returned ಅಂಥವರು ಯಾರಾದರೂ ಇದ್ದರೆ ಕೊಡಬಹುದು ಎಂದು ಇದೆ. ನಾನು foreign returned ಎಂದು ಹೇಳಿ ಅವರು ಒಂದು certificate ತಂದು ಕೊಟ್ಟಿದ್ದಾರೆ. ಅವರು ಯಾವ ವಿಷಯದಲ್ಲಿ expert ಎನ್ನುವುದು ಗೊತ್ತಿಲ್ಲ. Just because he said that he is foreign returned, he is appointed. ಇವತ್ತು ಇದು ತನಿಖೆಯಾಗಲೇಬೇಕು. ಇದು University. It is a public organization, institution. University ಯಲ್ಲಿ ಒಬ್ಬ ಮನುಷ್ಯ Professor ಆಗಬೇಕಾದರೆ, 20–22–23 ವರ್ಷಗಳಾಗುತ್ತವೆ. ಆದರೆ, ಒಬ್ಬ ಮನುಷ್ಯ ದಿಢೀರ್ ಎಂದು ಎಲ್ಲ Hurdles ಅನ್ನು ದಾಟಿಕೊಂಡು ಹೋಗುವಂಥ ಸ್ಥಿತಿ ನಿರ್ಮಾಣವಾಗಿ ಬಿಟ್ಟರೆ University ಗಳ ಗತಿ ಏನು ಇದನ್ನು ಇವತ್ತು ನಾವು ನಿಮಗೆ ಏಕೆ ಹೇಳುತ್ತಿದ್ದೇವೆ ಎಂದರೆ ವಿಶ್ವವಿದ್ಯಾಲಯಗಳೆಲ್ಲ ಏನಾಗಿವೆ ಎಂದರೆ, ಕೆಲಸ ಕೊಡುವುದು, ನಮ್ಮ ಕಾಲದಲ್ಲಿ ಕೆಲಸಕ್ಕೆ ತುಂಬಿಬಿಡುವುದು, ಆಮೇಲೆ ಯಾರು ಏನಾದರು ಮಾಡಿಕೊಳ್ಳಿ ಎಂದು ಹೇಳಿ ಹೋಗುವಂತಹ ಸ್ಥಿತಿ ನಿರ್ಮಾಣವಾಗಿಬಿಟ್ಟಿದೆ. ಸರ್ಕಾರದ ಮೀಸಲಾತಿ ಸೌಲಭ್ಯ ಮಾಡುವ ಕಡೆ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಯಾರು ಕ್ರೀಮಿ ಲೇಯರ್‌ಗೆ ಬರುತ್ತಾರೆ, ಯಾರು ಬರುವುದಿಲ್ಲ ಎಂದು ಹೇಳಿದ್ದಾರೆ. ಅದು ಇದ್ದೂ ಕೂಡ violate ಮಾಡಿದ್ದಾರೆ. ಇದರ ಜೊತೆಗೆ, 38 Reader ಹುದ್ದೆಗಳನ್ನು ನೇರ ನೇಮಕಾತಿಯಲ್ಲಿ ನೇಮಕ ಮಾಡಿದ್ದಾರೆ. 100 point roster ಅನ್ವಯ ಹಿಂದುಳಿದ ವರ್ಗದವರಿಗೆ ಕೇಟಗರಿ–I ಗೆ 2, ಕೇಟಗರಿ–2A ಗೆ 6, ಕೇಟಗರಿ–2B ಗೆ 2, gradation ಪಟ್ಟಿಯಲ್ಲಿ ಕೊಡಬೇಕಾಗಿದ್ದುದ್ದನ್ನು complete violate ಮಾಡಿದ್ದಾರೆ. ಸರ್ಕಾರಿ ಆದೇಶದ

ಸಂಖ್ಯೆ 225/BCU 2000 ದಲ್ಲಿ ಹಿಂದಿನ ಸೇವೆಯ ಅನುಭವ ಪಡೆದಿದ್ದರೆ... ಎಂದು ಇದೆ ಅದನ್ನು ನಾನು ನಿಮಗೆ ಈಗಾಗಲೇ ಹೇಳಿದ್ದೇನೆ. ಇದರ ಪ್ರಕಾರ 19-4-2007 ರಂದು ಭೌತಶಾಸ್ತ್ರ ವಿಭಾಗಕ್ಕೆ ನಿಗದಿಗೊಳಿಸಿದ್ದ ಎರಡು ಪ್ರಾಧ್ಯಾಪಕ ಹುದ್ದೆಗಳಿಗೆ ಆಯ್ಕೆಗೊಂಡಿರುವ ಡಾ: ಶ್ರೀಧರ್ ಮತ್ತು ಎನ್.ಕೆ. ಲೋಕನಾಥ್, ಇವರಿಬ್ಬರಿಗೂ U.G.C ನಿಗದಿ ಪಡಿಸಿದ 10 ವರ್ಷಗಳ P.G ಸೇವೆ ಇರುವುದಿಲ್ಲ. ಲೋಕನಾಥ್ ಎನ್ನುವವರಿಗೆ 10 ವರ್ಷಗಳ P.G ಸೇವೆಯಾಗಲೀ ಅಥವಾ 15 ವರ್ಷಗಳ U.G. ಸೇವೆಯಾಗಲಿ, ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಿದ ಅನುಭವವಿರುವುದಿಲ್ಲ. ಕುಲಪತಿಗಳ ಹತ್ತಿರದ ಸಂಬಂಧಿ ಅನ್ನುವ ಒಂದೇ ಕಾರಣದಿಂದ ಕೇವಲ 3 ತಿಂಗಳ ಅವಧಿಯಲ್ಲಿ ಉಪನ್ಯಾಸಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಆಯ್ಕೆ ಮಾಡುವುದು ಸಹ ಸಂವಿಧಾನ ಬಾಹಿರ. ಬರಿ ಮೂರು ತಿಂಗಳಲ್ಲಿ Lecturer, Professor ಆಗಿ ಬಿಡುತ್ತಾರೆ. Mysore University ಯಲ್ಲಿ , Professor ಆಗಲಿಕ್ಕೆ ಎಷ್ಟೋ ವರ್ಷ ತೆಗೆದುಕೊಳ್ಳುತ್ತದೆ ಎಂದು ತಮಗೆ ಗೊತ್ತು. ನಾನು ಹೆಚ್ಚಿಗೆ ಹೇಳುವುದಿಲ್ಲ. ಯಾರಾದರು ಆಗಲಿ 10 ವರ್ಷಗಳ ಅಲ್ಲದಿದ್ದರೂ minimum 5 ವರ್ಷಗಳ ಸೇವೆಯೋ ಆಗದಿದ್ದಂಥವರನ್ನು ತೆಗೆದುಕೊಂಡು ಹೋಗಿ Professor ಎಂದು ಕೂರಿಸಿ ಬಿಟ್ಟರೆ University ಯ ಗತಿ ಏನು? ಅವರಿಗೆ ಏನು ಅರ್ಹತೆ ಇರಬೇಕಾಗಿತ್ತು ಎಂದರೆ, 55% ಶೈಕ್ಷಣಿಕ marks ಇರಬೇಕಾಗಿತ್ತು. ಆಮೇಲೆ M-Phil ಇರಬೇಕಾಗಿತ್ತು. Ph.D ಇರಬೇಕಾಗಿತ್ತು. ಅಥವಾ NET ಅಥವಾ SLET ನಲ್ಲಿ exam ಬರೆದಿರಬೇಕಾಗಿತ್ತು. ಇದಕ್ಕೆ ಕೊಡಬೇಕಾದ ಅಂಶ ಬರೀ 5. ಅದಾದ ನಂತರ ಪ್ರತಿ ವರ್ಷಕ್ಕೆ ಒಂದು ಅಂಕದಂತೆ ಗರಿಷ್ಟ 15 ವರ್ಷಗಳಿಗೆ 15 marks ಕೊಡಬೇಕಾಗಿತ್ತು. ಲೇಖನ, ಅಂತರರಾಷ್ಟ್ರೀಯ ನಿಯತಕಾಲಿಕಗಳಲ್ಲಿ ಪ್ರಕಟಣೆ, ಪುಸ್ತಕ ಪ್ರಕಟಣೆ, ಅಂತರರಾಷ್ಟ್ರೀಯ ವಿಚಾರಗೋಷ್ಟಿಯಲ್ಲಿ ಪಾಲ್ಗೊಂಡಿದ್ದರೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವೃತ್ತಿಪರ ಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಿದ್ದರೆ 15 marks ಕೊಡಬೇಕಾಗಿತ್ತು. ಇದೆಲ್ಲವನ್ನು quote ಮಾಡಿ ಇವರಿಗೆ ಬೇಕಾದವರನ್ನು ತುಂಬಿದ್ದಾರೆ. ಇದರಲ್ಲಿ ಯಾರೋ lecturers ಅನ್ನು appoint ಮಾಡಿರುತ್ತಾರೆ, ಅವರಿಗೆ eligibility ಇರುವುದಿಲ್ಲ. Mechanic ಎಂದು appointment order ಕೊಡುತ್ತಾರೆ. ಇನ್ಯಾರೋ mechanic course ಆಗಿರುವವರನ್ನು Lecturer ಎಂದು ಮಾಡುತ್ತಾರೆ. Complete Supreme Court ನ ತೀರ್ಮಾನಕ್ಕೆ ತದ್ವಿರುದ್ಧವಾಗಿದೆ. Appointment ಹೇಗೆ ಆಗುತ್ತದೆ? Syndicate ನಿಂದ ಒಂದು sub committee ನೇಮಕವಾಗುತ್ತದೆ. ಆ sub-committee ಯವರು ಶಿಫಾರಸ್ಸು

ಮಾಡುತ್ತಾರೆ. ಈ sub-committee ಯಲ್ಲಿ ಅವರಿಗೆ ಬೇಕಾದ 3-4 ಜನರನ್ನು ಇಟ್ಟುಕೊಂಡು ಆ sub-committee ಯ ತೀರ್ಮಾನವೇ final ಆಗುತ್ತದೆ. ಅದಕ್ಕೆ appeal ಹೋಗುವ ಹಾಗೆ ಇಲ್ಲ ಏತಕ್ಕೆ ಕೊಟ್ಟಿರಿ ಸ್ವಾಮಿ? ನಮಗೆ ಏಕೆ ಅನ್ಯಾಯ ಮಾಡಿದ್ದೀರಿ ಎಂದು ಕೇಳುವ ಹಾಗಿಲ್ಲ. ಆ University ಯಲ್ಲಿ ಈ ರೀತಿ dictatorship ನಡೆಯುತ್ತಿದೆ. ಯಾರೂ ಉಸಿರು ಬಿಡುವ ಹಾಗಿಲ್ಲ . ಉಸಿರು ಬಿಟ್ಟರೆ ನಿಮ್ಮನ್ನು ಮಟ್ಟ ಮಾಡಿಬಿಡುತ್ತಾರೆ. ನಮಗೆ ಈ ಮಾಹಿತಿ ಕೊಡುತ್ತಾರೆಂದು ಗೊತ್ತಾದರೆ ಅಂಥವರನ್ನು ಮಟ್ಟ ಮಾಡುತ್ತಾರೆ. ಅದು ಇವತ್ತು University ಆಗಿ ಉಳಿದಿಲ್ಲ. Court Order ಪ್ರಕಾರ 9 ಜನ ಹುಡುಗರು ಇದ್ದಾರೆ. Supreme Court ನ ತೀರ್ಮಾನದ ಪ್ರಕಾರ ಆ 9 ಜನಕ್ಕೂ eligibility ಇದೆ. ಅವರು ಹೋಗಿ application ಕೊಡುತ್ತಾರೆ, ಸರ್, ನಾವು eligible ಇದ್ದೆವು, ನಮ್ಮನ್ನು ಏಕೆ confirm ಮಾಡಲಿಲ್ಲ ಎಂದು ಕೇಳದರೆ, ಇಲ್ಲ ನಮ್ಮದು mistake ಆಗಿಬಿಟ್ಟಿದೆ, next time ನಲ್ಲಿ confirm ಮಾಡುತ್ತೇವೆಂದು endorsement ಕೊಡುತ್ತಾರೆ. Next ಹೋದರೆ, ಇಲ್ಲ, court ನಲ್ಲಿ ನಿಮಗೆ ಏನೂ direction ಇಲ್ಲವೆಂದು ಹೇಳುತ್ತಾರೆ. Court ಮುಂದೆ ತೆಗೆದುಕೊಂಡು ಹೋಗಿ contempt case ಹಾಕುವ stage ಗೆ ಆ University ಬಂದಿದೆ. ಇವೆಲ್ಲವನ್ನು ನಾವು ಇವತ್ತು ಇಲ್ಲಿ ಸಮಗ್ರವಾಗಿ ಚರ್ಚೆ ಮಾಡಬೇಕಾಗಿದೆ. ಈಗಾಗಲೇ ಇದು ಚರ್ಚೆಯಾಗಬೇಕೆಂದು ನಾವೇಕೆ ಹೇಳುತ್ತಿದ್ದೇವೆಂದರೆ, 15 ದಿವಸಗಳ ಹಿಂದೆ ಬಿಜಾಪುರದ ವಿಷಯ ಬಂದಾಗ University of Mysore ಬಗ್ಗೆ ಚರ್ಚೆಗೆ ತೆಗೆದುಕೊಳ್ಳಿ ಎಂದು ನಾನು ಇಲ್ಲಿ ಒಂದು ಮಾತನ್ನು ಹೇಳಿದ್ದೆ. ನಮ್ಮ ಗ್ರಹಚಾರಕ್ಕೆ ಇವೆಲ್ಲ councilನಲ್ಲಿ ಚರ್ಚೆಯಾಗುತ್ತಿದೆ. ಶಾಸನಸಭೆಯಲ್ಲಿ ಯಾರಿಗೂ ಆಸಕ್ತಿ ಇಲ್ಲ, ಶಾಸನ ಸಭೆ ಕಲಾಪಗಳು ಬರುತ್ತಿಲ್ಲ, ಇಂಥ ಒಂದು ಹಗರಣಗಳು ಸಹ ಶಾಸನ ಸಭೆಯಲ್ಲಿ ಚರ್ಚೆಯಾಗುವುದಿಲ್ಲವೆಂದರೆ ಇಲ್ಲಿ ಕೆಲಸ ಮಾಡಲಿಕ್ಕೆ ನಮಗೂ ಸಹ ಸ್ವಲ್ಪ ತೊಂದರೆಯಾಗುತ್ತದೆ. ಅದಕ್ಕಾಗಿ ನಿಮಗೆ ಒತ್ತಾಯ ಮಾಡುತ್ತಿದ್ದೇನೆ. ಈ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿಯನ್ನು ನಾನು ಕಳುಹಿಸಿಕೊಡುತ್ತಿದ್ದೇನೆ. ಇದರ ಜೊತೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ SC/ST ಕೋಟಾವನ್ನು 100% ಕೈಬಿಟ್ಟಿದ್ದಾರೆ. ಏಕೆಂದರೆ, carry forward ಮಾಡುತ್ತೇವೆಂದು ಹೇಳಿ ಮುಂದಕ್ಕೆ ಹಾಕಿಕೊಂಡು ಹೋಗುತ್ತಿದ್ದಾರೆ. ನೀವು ಈ ತರಹ ಮಾಡುತ್ತಿದ್ದೀರಿ, it cannot be allowed ಎಂದು court notice ಸಹ ಅವರಿಗೆ ಇದೆ. ಆದರೂ ಕೂಡ ಏನೂ ಆಗುತ್ತಿಲ್ಲ. Vice Chancellor ರವರು ಬಹುಶ: ಸೆಪ್ಟೆಂಬರ್ ತಿಂಗಳಲ್ಲಿ ನಿವೃತ್ತಿಯಾಗುತ್ತಿದ್ದಾರೆ. ನಿವೃತ್ತಿ ಆದ

'ಮೇಲೆ ನಾವು ಅವರನ್ನು ಏನೂ ಕೇಳುವುದುಕ್ಕಾಗುವುದಿಲ್ಲ. He is completing his tenure. ಅದಕ್ಕೆ ಮೊದಲೇ ಏನಾದರೊಂದು ಇಲ್ಲಿ ಆಗಬೇಕಾಗಿದೆ. ಇಡೀ backward community quota ವನ್ನು ಮತ್ತು senior ಆಗಿ lecturers ಇದ್ದಾರೆ ಅವರ ಕೋಟಾವನ್ನು ಇವರಿಗೆ ಇಷ್ಟ ಬಂದ ಹಾಗೆ ಕೊಟ್ಟಿದ್ದಾರೆ. ಅದನ್ನು ಏತಕ್ಕೆ ಕೊಟ್ಟಿದ್ದಾರೆಂದು ಸರ್ಕಾರ ಒಂದು ತನಿಖೆಯನ್ನು ಮಾಡಲೇಬೇಕಾಗಿದೆ ಮತ್ತು ಯಾರ್‍ಯಾರಿಗೆ ಕೊಟ್ಟಿದ್ದಾರೆ? ಹುಡುಗರಿಗೆ ಹೊಟ್ಟೆಗಿಲ್ಲದೆ 10-12 ವರ್ಷ daily wages ಮಾಡಿದ vacancy ಅನ್ನು ತೆಗೆದು ಯಾರೋ ಜಿಲ್ಲಾಧಿಕಾರಿಯವರ ಮನೆಯವರಿಗೆ, S.P.ಮನೆಯವರಿಗೆ, ಇಂಥವರಿಗೆಲ್ಲ ಕೊಟ್ಟುಕೊಂಡು ಹೋಗುತ್ತಿರುವ ಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಈ ಪಟ್ಟಿಯನ್ನು ನಾನು ಕೊಡುತ್ತೇನೆ. ಏಕೋ ಈ ಬಗ್ಗೆ ಹೆಚ್ಚಿಗೆ ಚರ್ಚೆಯಾಗುವುದಕ್ಕೆ ತಾವು ಅವಕಾಶ ಕೊಡುತ್ತಿಲ್ಲವೆನ್ನುವ ನೋವು ನನಗಿದೆ. ಈ ಬಗ್ಗೆ ಬಹಳ details ಹೇಳಬೇಕಾಗಿತ್ತು. ಆದರೂ ಕೂಡ ನಾನು ಈ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ತಾವು ಇದರ ಬಗ್ಗೆ ಒಂದು ಸಮಗ್ರವಾದ ತನಿಖೆಗೆ ಆದೇಶ ಮಾಡಲೇಬೇಕು. Universityಗಳು ಇವತ್ತು job ಕೊಡುವ ಕೇಂದ್ರಗಳಾಗಿವೆ. Mysore University ಒಂದೇ ಅಲ್ಲ, ಯಾವುದೇ Vice Chancellor ಯಾವುದೇ Administrator ಅನ್ನು University ಗೆ ನೇಮಕ ಮಾಡಿದ ಕೂಡಲೇ appointment ಮಾಡುವುದಷ್ಟೇ ಅವರ ಉದ್ದೇಶವಾಗಿದೆ. ಬೇರೆ ಏನೂ ಇಲ್ಲ. ಯಾರಿಗೆ appointment ಮಾಡುತ್ತಾರೆಂದರೆ, ತಮಗೆ ಬೇಕಾದವರಿಗೆ, ತನ್ನ ಸುತ್ತಮುತ್ತ ಇರುವವರಿಗೆ ತನ್ನ ಸಂಬಂಧಿಗಳಿಗೆ, ಆ ಒಂದು ಕೋಟೆಯನ್ನು ನಿರ್ಮಾಣ ಮಾಡಿಕೊಂಡು ಇಂಥ ಕೆಲಸ ಮಾಡುತ್ತಿವೆ ಎಂದು ಎಲ್ಲಾ Universityಗಳ ಮೇಲೆ ಇವತ್ತು charge ಇದೆ. University ಗಳನ್ನು ಮಾಡುತ್ತಿರುವುದು ಜನಗಳ ಕಲ್ಯಾಣಕ್ಕೆ, ವಿದ್ಯಾರ್ಥಿಗಳ ಕಲ್ಯಾಣಕ್ಕೆ ಎಂದು ಇಲ್ಲಿ ಕುಳಿತವರಿಗೆ ನಮಗನ್ನಿಸುತ್ತಿಲ್ಲ. Just to make some appointments. ನೂರೋ, ಇನ್ನೂರೋ, ಮುನ್ನೂರೋ appointment ಮಾಡಲಿಕ್ಕೆ ಈ ವಿಶ್ವವಿದ್ಯಾಲಯಗಳನ್ನು ತೆಗೆದುಕೊಂಡು ಹೋಗಿ Employment Exchange ಗಳನ್ನಾಗಿ ಮಾಡುತ್ತಿದ್ದೀರಿ. ಅಲ್ಲೂ ಕೂಡ ಯಾವುದೇ ಕಾನೂನು ಇಲ್ಲ. Vice Chancellor ಎಂದರೆ ನನ್ನನ್ನು ಯಾರೂ ಪ್ರಶ್ನೆಯೇ ಮಾಡುವ ಹಾಗಿಲ್ಲ ಎನ್ನುವ ಸ್ಥಿತಿ ಇದೆ. ಇದರ ಜೊತೆ ಆಡಳಿತ ಕೂಡ ಇವತ್ತು Mysore University ಯಲ್ಲಿ ಕಲುಷಿತವಾಗಿದೆ. ಯಾರೂ ಕೇಳುವ ಹಾಗಿಲ್ಲ. ಅವರು ಹೇಳಿದ್ದೇ ತೀರ್ಮಾನವಾಗಿಬಿಟ್ಟಿದೆ. ಅವರು ಮಾಡಿದ್ದೆ order. ಈ University ಗೆ ಇಬ್ಬರು syndicate members ಅನ್ನು nominate ಮಾಡುವ ಯೋಗ್ಯತೆ

ಈ ಸರ್ಕಾರಕ್ಕಿಲ್ಲ. Because syndicate members ಏನಾದರೂ ಇಲ್ಲಿಂದ ಬಂದರೆ ನಮ್ಮ voice ಅನ್ನು cut ಮಾಡುತ್ತಾರೆಂದು ಅವರು ಬಂದು ಇವತ್ತು avoid ಮಾಡುತ್ತಿದ್ದಾರೆ. ನಿಮಗೆ ಅವಕಾಶವಿದ್ದರೂ ಕೂಡ ಅಂಥ University ಗಳಿಗೆ ನೀವು syndicate members ಅನ್ನು ನೇಮಕ ಮಾಡುವುದಿಲ್ಲ. Academic Council Members ಮಾಡುತ್ತೀರಿ. ಅದಲ್ಲದೆ ಅವರು ಹೇಳಿದವರನ್ನೇ ನೀವು ಮಾಡಿಕೊಳ್ಳುತ್ತೀರಿ. ಅವರೇ Academic Council Members ಮಾಡಿಕೊಳ್ಳುವುದರಿಂದ ಅವರು ಕೈ ಎತ್ತು ಎಂದರೆ ಎತ್ತಬೇಕು, ಕೈ ಇಳಿಸು ಎಂದರೆ ಇಳಿಸಬೇಕು. Mysore University ಈಗ ಈ ಸ್ಥಿತಿಗೆ ತಲುಪಿದೆ. ಅವರು ಹೇಳಿದ್ದೇ syndicate ತೀರ್ಮಾನ, ಅವರು ಯಾರಿಗೆ ಏನು ಬೇಕಾದರೂ ಮಾಡಬಹುದು. ಯಾರನ್ನು ಬೇಕಾದರೂ suspend ಮಾಡಬಹುದು, ಯಾರನ್ನು ಬೇಕಾದರೂ dismiss ಮಾಡಬಹುದು, ಯಾರಿಗೂ charge ಮಾಡಬೇಕಾಗಿಲ್ಲ, ಯಾರಿಗೂ ಕಾರಣ ಹೇಳಬೇಕಾಗಿಲ್ಲ ಎನ್ನುವ ಸ್ಥಿತಿಗೆ University ಬಂದಿದೆ. ನಿಮ್ಮ ಮುಂದೆ ಒಂದು ಮಾತನ್ನು ನೊಂದು ಹೇಳುತ್ತಿದ್ದೇನೆ. ಅಕಸ್ಮಾತ್ ಬೆಳ್ಳಿಯಪ್ಪ ಎನ್ನುವ ವ್ಯಕ್ತಿ ಇಲ್ಲಿಂದ ಅರುಣಾಚಲ ಪ್ರದೇಶದ Central University ಗೆ Vice Chancellor ಆಗಿ ಹೋಗುತ್ತಾರೆ. ಏನೇ ತಪ್ಪು ಮಾಡಿರಬಹುದು ಸರ್, ಕರ್ನಾಟಕದಲ್ಲಿ ತಪ್ಪು ಮಾಡಿದ್ದರೋ ಸರಿ ಮಾಡಿದ್ದರೋ ನನಗೆ ಗೊತ್ತಿಲ್ಲ, subject to correction. English Profesor ಆಗಿದ್ದು Arunachala University ಗೆ ಹೋಗುವವರಿಗೆ CTC ಕಳುಹಿಸುವುದಿಲ್ಲ ಸರ್. ಅಲ್ಲಿ ಅವರಿಗೆ ಸಂಬಳ ತೆಗೆದುಕೊಳ್ಳುವುದಕ್ಕೆ ಬಿಡುತ್ತಿಲ್ಲ. ಇಷ್ಟೊಂದು vindictive ಆಗಿ ಒಬ್ಬ ಮನುಷ್ಯ ಬದುಕಬೇಕೇ? He is suffering in Arunachala University ಏತಕ್ಕೆ ಈ ದ್ವೇಷ? ಏತಕ್ಕೆ ಈ ತರಹ ಮತ್ಸರ ಇಟ್ಟುಕೊಂಡು ಇವರು ಆಡಳಿತ ಮಾಡುತ್ತಾರೋ ನನಗೆ ಗೊತ್ತಿಲ್ಲ. ಇಲ್ಲಿ ಯಾವ enquiry ಇದೆಯೋ ಅದನ್ನು ಮುಗಿಸಿ. Close ಮಾಡಿ. ಇಲ್ಲಿಂದ ಬಿಟ್ಟು ಹೋಗುತ್ತೇವೆಂದರೂ ಬಿಡುವುದಿಲ್ಲವಲ್ಲ! ಮೈಸೂರು ಆ ಭಾಗದ ಜನ ಇವತ್ತು ಏನಾಗಬೇಕಿದೆ? ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ, ಈ entire recruitment and the entire episode ಇವತ್ತು ಚರ್ಚೆಗೆ ಒಳಪಡಿಸಲೇಬೇಕು. ಯಾರಿಗೆ ಕೆಲಸ ಕೊಟ್ಟಿದಾರೆ? ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ? ಕೊಡಲಿಕ್ಕೆ ಇವರಿಗಿದ್ದ advantage ಏನು? ಯಾರಿಗೆ ಅರ್ಹತೆ ಇದೆಯೋ ಅವರಿಗೆ ಕೊಟ್ಟಿಲ್ಲ. ಅಂಥವರ ಭವಿಷ್ಯವೇನು? Court Order ಉಲ್ಲಂಘನೆ ಮಾಡಿದ್ದೀರಿ. 9 ಜನರಿಗೆ appoint ಮಾಡಬೇಕಾಗಿರುವುದನ್ನು

ಅವರು ಇವತ್ತಿನವರೆಗೆ ಏಕೆ ಮಾಡಲಿಲ್ಲ? ಇದೆಲ್ಲದರ ಬಗ್ಗೆ ಒಂದು ತನಿಖೆಯನ್ನು ಈ ಸರ್ಕಾರ ಮಾಡಬೇಕು. ಯಾರಿಗೆ ಅನ್ಯಾಯವಾಗಿದೆ ಅವರಿಗೆ ನ್ಯಾಯ ಒದಗಿಸಿಕೊಡಬೇಕು. ಶೋಷಿತ ವರ್ಗದ ಪರವಾಗಿ ಭಾಷಣ ಮಾಡಿದರೆ ಅವರು ಉದ್ಧಾರವಾಗುವುದಿಲ್ಲ. ಇವತ್ತು ಅವರ ರಕ್ಷಣೆಗೆ ಬರಬೇಕು. SC/ST, OBC ಪರವಾಗಿ ಭಾಷಣ ಮಾಡುವುದನ್ನು ನಿಲ್ಲಿಸಿ ಅವರ ರಕ್ಷಣೆಗೆ ಇ ಸರ್ಕಾರ ಬರಬೇಕೆಂದು demand ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ: ಎಚ್.ಸಿ. ಮಹದೇವಪ್ಪ(ಟಿ.ನರಸೀಪುರ): ಮಾನ್ಯ ಅಧ್ಯಕ್ಷರೆ, ಮೈಸೂರು ವಿಶ್ವವಿದ್ಯಾನಿಲಯ ಭಾರತ ದೇಶದಲ್ಲಿಯೇ ಪ್ರತಿಷ್ಠಿತವಾದಂಥ ಒಂದು ವಿಶ್ವವಿದ್ಯಾನಲಯ. ಅಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಿದಂಥ ಎಸ್. ರಾಧಾಕೃಷ್ಣರವರು ರಾಷ್ಟ್ರಪತಿಯಾಗಿದ್ದರು. ವಿಶ್ವ ಮಾನವ ಸಂದೇಶ ಕಳುಹಿಸಿದಂಥ ರಾಷ್ಟ್ರ ಕವಿ ಕುವೆಂಪುನವರು ಆ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಇಡೀ ರಾಷ್ಟ್ರಕ್ಕೆ ಒಂದು ಶ್ರೇಷ್ಠವಾದಂಥ ಒಂದು ಕ್ಲಿಷ್ಟವಾದಂಥ ಉನ್ನತವಾದಂಥ ವಿಶ್ವವಿದ್ಯಾನಿಲಯ ಎನ್ನುವ ಖ್ಯಾತಿಯನ್ನು ಬಿಟ್ಟು ಹೋಗಿದ್ದಾರೆ. ಮಾನ್ಯ ಮಾಧುಸ್ವಾಮಿಯವರು ಈಗಾಗಲೇ ಹೇಳಿದಂತೆ ಆ ವಿಶ್ವವಿದ್ಯಾನಿಲಯದಲ್ಲಿ ಮೀಸಲಾತಿಯ ಉಲ್ಲಂಘನೆ ಮಾಡಿ ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರದ ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರಿ ಶ್ರೇಷ್ಠ ಪರಂಪರೆಯನ್ನು ವಿಶ್ವವಿದ್ಯಾನಿಲಯ ಏನು ಹೊಂದಿತ್ತು ಅದಕ್ಕೆ ಮಸಿ ಬಳಿಯುವ ಕೆಲಸವನ್ನು ಇಂದಿನ ಕುಲಪತಿಗಳು ಈ ಕಾನೂನು ಬಾಹಿರವಾದಂಥ ನೇಮಕಾತಿ ಮೂಲಕ ಮಾಡಿದ್ದಾರೆ. ಈ ಹಿನ್ನಲೆಯೆನ್ನೆಲ್ಲ ಗಮನದಲ್ಲಿ ಇಟ್ಟುಕೊಂಡು ನಾನು 2-07-2007 ರಂದು ಅಂದರೆ ಕಳೆದ ತಿಂಗಳು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ, ಘನತೆವೆತ್ತ ರಾಜ್ಯಪಾಲರಿಗೆ ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿದಂಥ ಎಲ್ಲಾ ದಾಖಲಾತಿಗಳನ್ನು ಒಳಗೊಂಡಂಥ ಪತ್ರವನ್ನು ಬರೆದಿದ್ದೇನೆ. ಆದರೆ ಘನತೆವೆತ್ತ ರಾಜ್ಯಪಾಲರು, ಸನ್ಮಾನ್ಯ ಮುಖ್ಯಮಂತ್ರಿಗಳು, ಸನ್ಮಾನ್ಯ ಶಿಕ್ಷಣ ಸಚಿವರಿಂದ ಇದುವರೆಗೂ ಯವುದೇ ರೀತಿಯ ಉತ್ತರ ನನಗೆ ಲಭ್ಯವಾಗಿಲ್ಲ. ಅದಾದ ಮೇಲೆ ಈ ವಿಷಯದಲ್ಲಿ ನಾನು calling attention ಮುಖಾಂತರ ತಮ್ಮ ಗಮನವನ್ನು ಸದನ ಗಮನವನ್ನು ಸೆಳೆಯಲಿಕ್ಕೆ ಪ್ರಯತ್ನ ಪಟ್ಟೆ ನಮ್ಮ ಗೆಳೆಯರೆಲ್ಲ ಸೇರಿ ಇದು ಪ್ರಮುಖವಾದ ವಿಷಯ, Rule 69 ರಲ್ಲಿ ತೆಗೆದುಕೊಳ್ಳೋಣ ಎಂದು ಹೇಳಿದರು. ತಮ್ಮನ್ನು ಭೇಟಿ ಮಾಡಿದಾಗ ಆಯಿತು, ನಾನು ಅವಕಾಶ ಕೊಡುತ್ತೇನೆಂದು ಹೇಳಿದಿರಿ, ಇದಕ್ಕಾಗಿ ತಮಗೆ ಧನ್ಯವಾದಗಳು. 2006-07 ರಲ್ಲಿ ಇಲ್ಲಿ ನೇರ ನೇಮಕಾತಿ ಮುಖಾಂತರ

ಆಯ್ಕೆಗಳನ್ನು ಮಾಡಿರತಕ್ಕಂಥ ಹಿನ್ನಲೆ, 2006-07 ರ ಮೈಸೂರು ವಿಶ್ವವಿದ್ಯಾನಿಲಯದ ಉಪನ್ಯಾಸಕರು, Reader ಮತ್ತು Professor ಹುದ್ದೆಗಳ ನೇರ ನೇಮಕಾತಿ ಪ್ರಕಟಣೆ, No.ET8/72 2005-06 dated 25-03-2006 ಮತ್ತು No.E8/245 206 dated 10-09-2007 ಇವುಗಳಲ್ಲಿ ಹಿಂದುಳಿದ ವರ್ಗಗಳಿಗೆ ಸಮಾಜ ಕಲ್ಯಾಣ ಇಲಾಖೆ ಆದೇಶ GO NO.SW2 2005 BCA 2000 dated 30-3-2006 ಸಮಾಜ ಕಲ್ಯಾಣ ಇಲಾಖೆ ನೇರ ನೇಮಕಾತಿ ಮುಖಾಂತರ ಹಿಂದುಳಿದ ವರ್ಗಗಳಿರುವಂಥ Lecturers, Readers, Professors ಗೆ ನೀವು ಆಯ್ಕೆ ಮಾಡಬೇಕೆಂದು ಆದೇಶವನ್ನು ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿಕೊಟ್ಟಿದ್ದಾರೆ. 2006-2007 ನೇ ಇಸವಿಯಲ್ಲಿ ಇರುವ ನೇರ ನೇಮಕಾತಿಗೆ ಯಾವ ಉದ್ದೇಶಕ್ಕೆ ಹಿನ್ನಲೆ ಇಟ್ಟುಕೊಂಡು ನೇಮಕಾತಿಗೆ ಕರೆಯನ್ನು ಕೊಟ್ಟರೋ, ಅದನ್ನು ಬದಿಗಿಟ್ಟು ಸುಮಾರು 3 Professors, 5 Readers, 1 ಉಪನ್ಯಾಸಕರನ್ನು ಆಯ್ಕೆ ಮಾಡುವುದನ್ನು ಬಿಟ್ಟು ಅರ್ಹ ಅಭ್ಯರ್ಥಿಗಳು ಇದ್ದರೂ ಸಹ ಅವರನ್ನು ಬಿಟ್ಟು General ನಲ್ಲಿರುವವರಿಗೆ ಆಯ್ಕೆ ಮಾಡಿದ್ದಾರೆ. ಕೇವಲ SC/ST ಇವರಿಗೆ ಅನ್ಯಾಯ ಮಾಡಿದ್ದಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಹಿಂದೆ Lecturer and Reader ಹುದ್ದೆಗೆ Bio-technology ವಿಷಯಕ್ಕೆ ಸಂಬಂಧಪಟ್ಟಂತೆ call for ಮಾಡಿದ್ದರು. vide Notification No. E78, 245, 2006-07, dated 19.04.2007. ಇದು General Candidate ಗೆ ಇದ್ದಿದ್ದು. ಅಲ್ಲಿ ಡಾ:ತೇಜಸ್ವಿನಿ ಎನ್ನುವವರು MSc.,ಯಲ್ಲಿ first rank ತೆಗೆದುಕೊಂಡಿದ್ದಾರೆ. ಇವರು Bio—technology ವಿಷಯಕ್ಕೆ ಸಂಬಂಧಪಟ್ಟಂತೆ Reader ಹುದ್ದೆಗೆ ಅರ್ಜಿ ಕರೆದಿದ್ದರು. ಯಾವುದೇ ಅನುಭವವಿಲ್ಲದೇ ಇರತಕ್ಕಂಥ ಮತ್ತು eligibility ಇಲ್ಲದೇ ಇರತಕ್ಕಂಥ Bio—technology subject ಅನ್ನೇ ಹೊಂದಿರದ, Micro-Biology ಮಾಡಿರುವ Hyderabadನ ಕಾಮೇಶ್ವರ್ ಎನ್ನುವವರನ್ನು ಆಯ್ಕೆ ಮಾಡಿದ್ದಾರೆ. ಇವರೆಲ್ಲಿದ್ದಾರೆ? ಏನಿದ್ದಾರೆ ಎಂಬ ಬಗ್ಗೆ ಇವರು ಅವರನ್ನು ಆಯ್ಕೆ ಮಾಡಿ address ಹುಡುಕುತ್ತಿದ್ದಾರೆ, ಇನ್ನೂ ಗೊತ್ತಾಗಿಲ್ಲ ಆ ಸಂಸ್ಥೆಯಿಂದ ಅವರು ಬರಬೇಕಾದರೆ, No Objection Certificate ಅನ್ನು ಇವರು produce ಮಾಡಿಲ್ಲ. ಇದೇ ರೀತಿಯಲ್ಲಿ ಇನ್ನೊಂದು lecturer postಗೆ ಡಾ॥ ಗೀತಾ ಪ್ರಶಾಂತ್ ಎಂಬುವವರೂ ಕೂಡ Bio—technology ಓದಿಲ್ಲ, subject ಇರುವುದು Bio—technology ಗೆ, ಇವರು Micro-biology ಗೆ ಕೊಟ್ಟಿದ್ದಾರೆ. ಇದು General Candidateಗೆ ಇರುವ ಹುದ್ದೆ. ಇವರು ಯಾವ ರೀತಿ,

ತಮಗ್ಯಾರು ಬೇಕು, ತಮಗ್ಯಾರಿಗೆ ಅನುಕೂಲವಾಗುತ್ತದೆ ಆ ರೀತಿ ಮಾಡುತ್ತಿದ್ದಾರೆ. ಇದೊಂದು ಸ್ಪಷ್ಟವಾದಂಥ ನಿದರ್ಶನ. ಇದರ ಜೊತೆಯಲ್ಲಿ, 32 ಉಪನ್ಯಾಸಕರನ್ನು ಅವರು ಖಾಯಂಗೊಳಿಸಬೇಕು. UGC ನಿಯಮಗಳಿಲ್ಲ. 22 ಜನರನ್ನು ಖಾಯಂ ಮಾಡಿದರು. Court ಇವರಿಗೆ ಆದೇಶ ಕೊಟ್ಟಿದೆ. ಅಲ್ಲಿನ ಕುಲ ಸಚಿವರು Court ಆದೇಶವಿದೆ, Confirm ಮಾಡಬೇಕೆಂದು ನೋಟ್ ಹಾಕಿದ್ದಾರೆ. Confirm ಮಾಡಬೇಕಾದವರನ್ನು ಮೂಲೆಗೆ ತಳ್ಳಿದ್ದಾರೆ. ಅನರ್ಹರನ್ನು ಇವರು Confirm ಮಾಡಿದ್ದಾರೆ. ಲೋಕನಾಥ್‌ರವರು Vice-Chancellor ರವರ ಸಂಬಂಧಿಕರೋ ಅಥವಾ ಅಲ್ಲವೋ? ಅವರಿಗೆ eligibility ಇದ್ದರೆ, we cannot question his right to work. ಆದರೆ, ಇಲ್ಲಿ ಲೋಕನಾಥ್‌ರವರು, ಕರೆದಿದ್ದ ಪೋಸ್ಟ್ Rural Vacancy ಗೆ, ಇವರು urban ನವರು. ಯಾವ ರೀತಿ ಮಾಡಿದ್ದಾರೆ? 19.02.07ರಲ್ಲಿ ಮೈಸೂರು ವಿಶ್ವವಿದ್ಯಾನಲಯದಲ್ಲಿ ಇವರು ಉಪನ್ಯಾಸಕರಾದರು. 14.04.2007ರಲ್ಲಿ ಬೆಂಗಳೂರು ವಿ.ವಿ.ಗೆ ರೀಡರ್ ಆದರು. Within a span of one month, ಈಗ 18/07ಕ್ಕೆ ಮತ್ತೆ Professor ಆಗಿದ್ದಾರೆ. ಉಪನ್ಯಾಸಕರಿಂದ ರೀಡರ್ ಆಗಬೇಕಾದರೆ 10 ವರ್ಷ ಅನುಭವವಿರಬೇಕು. ಇದ್ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲ. 151 ನೌಕರರನ್ನು ಖಾಯಂ ಮಾಡಬೇಕು. Supreme Court ಆದೇಶವಿದೆ. ಅವರನ್ನು ಖಾಯಂ ಮಾಡಬೇಕಾದರೆ, 10 ವರ್ಷ ಕೆಲಸ ಮಾಡಿರಬೇಕು. Supreme Court ಆದೇಶದ ಅನ್ವಯ 36 ಜನರಿಗೆ ಮಾತ್ರ ಇದು ಅನ್ವಯವಾಗುತ್ತದೆ. ಇನ್ನುಳಿದ 115 ಜನರಿಗೆ ಖಾಯಂ ಮಾಡುವುದಕ್ಕೆ ಬರುವುದಿಲ್ಲ. ಮಾಡುವಾಗ ಏನು ಮಾಡಿದ್ದಾರೆಂದರೆ, ಅವರು reservation ಅನ್ನು maintain ಮಾಡಿಲ್ಲ. 2 ಲಕ್ಷ ರೂಪಾಯಿಗಿಂತ ಜಾಸ್ತಿ income ಇದ್ದರೆ ಕೊಡುವುದಕ್ಕಾಗುವುದಿಲ್ಲ. Supreme Court 2002ರಲ್ಲಿ comprehensive law ಮಾಡಿದೆ. ಯಾರು ಅದರಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರಿಗೆ 2 ಲಕ್ಷ ರೂಪಾಯಿ ceiling ಬರುವುದಿಲ್ಲ, ಅವರಿಗೂ eligibility ಇದೆ ಎಂದು ಹೇಳಿದ್ದಾರೆ. ಅಂಥ ಇಬ್ಬರಿಗೆ interveiw ಕೊಡಲಿಲ್ಲ. ಈ posts ಅನ್ನು Backward Classes, SCಯವರಿಗೆ direct recruitment ನಲ್ಲಿ ಕೊಡಬೇಕೆಂದು ಇದ್ದದ್ದು. ಯಾವ ಉದ್ದೇಶಕ್ಕೆ, ಯಾರಿಗಾಗಿ call for ಮಾಡಿದ್ದರೋ, ಅದನ್ನೆಲ್ಲ ನಿರಾಕರಣೆ ಮಾಡಿ ನಾವು back-log posts ಅನ್ನು ಮುಂದೆ ತೆಗೆದುಕೊಳ್ಳುತ್ತೇವೆಂದು ಅವರು ಸ್ವಜನ ಪಕ್ಷಪಾತವನ್ನು ಮೀಸಲಾತಿಯ ಉಲ್ಲಂಘನೆ ಮುಖಾಂತರ ಮಾಡಿದ್ದಾರೆ. ಸಂವಿಧಾನಕ್ಕೆ ಅಪಚಾರ ಮಾಡಿದ್ದಾರೆ ಮತ್ತು ಕಾನೂನಿಗೆ ವಿರುದ್ದವಾಗಿ ನಡೆದುಕೊಂಡಿದ್ದಾರೆ. ವಿಶ್ವವಿದ್ಯಾನಿಲಯಗಳು

ಇವತ್ತು ದೇಶದ ಭವಿಷ್ಯತ್ತಿನ ಪ್ರಜೆಗಳನ್ನು ನಿರ್ಮಾಣ ಮಾಡತಕ್ಕಂಥ ಪವಿತ್ರವಾದ ಕ್ಷೇತ್ರಗಳು. ಅಲ್ಲಿ ರಾಧಾಕೃಷ್ಣನ್‌ರವರು, ವಿಶ್ವ ಮಾನವ ಸಂದೇಶ ನೀಡಿದ ಕುವೆಂಪುರವರು ಉಪ ಕುಲಪತಿಗಳಾಗಿ ಕೆಲಸ ಮಾಡಿ ಇತಿಹಾಸ ನರ್ಮಾಣ ಮಾಡಿರತಕ್ಕಂಥ ಆ ಸ್ಥಳದಲ್ಲಿ ಈ ತರಹದ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಮೀಸಲಾತಿ ಉಲ್ಲಂಘನೆ ಮತ್ತು ಕೋರ್ಟ್‌ನ ನಿರ್ದೇಶನಗಳನ್ನು ಉಲ್ಲಂಘನೆ ಮಾತಕ್ಕಂಥ ಕಾರ್ಯದಲ್ಲಿ ತೊಡಗಿದ್ದರೆ, ವಿಶ್ವವಿದ್ಯಾನಿಲಯಗಳು ಮುಂದೆ ಯಾವ ರೀತಿ ಆರೋಗ್ಯಕರವಾದಂಥ ಸಮಾಜವನ್ನು ಬೆಳೆಸಲಿಕ್ಕೆ ಸಾಧ್ಯವಾಗುತ್ತದೆ? ಇಲ್ಲಿ ನಡೆದಿರುವ ಎಲ್ಲಾ ಅವ್ಯವಹಾರಗಳಿಗೆ ಅಲ್ಲಿಯ ಉಪಕುಲಪತಿಗಳೇ ಕಾರಣೀಭೂತರಾಗಿದ್ದಾರೆ. 6 ತಿಂಗಳ ಅವಧಿ ಇರುವಾಗ ಯಾವುದೇ ಉಪ ಕುಲಪತಿನೇಮಕ ಮಾಡಬಾರದು' ಎಂದಿರುವಾಗ, 2-3 ತಿಂಗಳು ಅಲ್ಲಿರುವವರು ಇವರಿಗೆ ತುರ್ತು ಏನಿತ್ತು? ಈ ನೇಮಕಾತಿ ಮಾಡುವುದಕ್ಕೆ ಇಷ್ಟೊಂದು urgency ಏನಿತ್ತು? ಯಾರಿಗೋಸ್ಕರ ಈ ಹುದ್ದೆಗಳು ಮೀಸಲಾಗಿದ್ದವು? ಮೀಸಲಾತಿಗಿದ್ದ ಹುದ್ದೆಗಳನ್ನು ಅವರಿಗೇಕೆ ನರಾಕರಣೆ ಮಾಡಿದರು? ಈ ಎಲ್ಲ ವಿಷಯಗಳೂ ಕೂಡ ಇವತ್ತು ಸಂವಿಧಾನದ ಉಲಂಘನೆಯಾಗಿದೆ. ಸ್ವಾಯತ್ತತೆಯ ದುರ್ಬಳಕೆಯಾಗಿದೆ ಮತ್ತು ಕಾನೂನಿನ ವಿರುದ್ಧವಾಗಿ, ಮೀಸಲಾತಿಯ ವಿರುದ್ದವಾಗಿ ಇವರು ಕಾರ್ಯ ನಿರ್ವಹಣೆ ಮಾಡಿರುವುದರಿಂದ ಈ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕು.ಎಲ್ಲ ಆಯ್ಕೆಯನ್ನು ರದ್ದುಗೊಳಿಸಿ, ಯಾವ ಉದ್ದೇಶಕ್ಕೆ, ಯಾರಿಗಾಗಿ ಈ ಹುದ್ದೆಗಳು ಮೀಸಲಾಗಿವೆ ಅವರಿಗೆ ನೀವು ಪುನಃ ಆಯ್ಕೆಯನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು: ಸರ್ಕಾರದಿಂದ ಯಾರು ಉತ್ತರ ಕೊಡುತ್ತೀರಿ?

ಶ್ರೀ ಆರ್. ಧ್ರುವ ನಾರಾಯಣ: ನನ್ನ signature ಇದೆ.

ಅಧ್ಯಕ್ಷರು: ನೀವು signatories?

ಶ್ರೀ ಆರ್. ಧ್ರುವ ನಾರಾಯಣ: ಹೌದು.

ಅಧ್ಯಕ್ಷರು: ಆಯಿತು. ಮಾತನಾಡಿ. 5 ನಿಮಿಷದಲ್ಲಿ ಮುಗಿಸಿ.

ಶ್ರೀ ಮಹದೇವ್: ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು: ಮಹದೇವ್‌ರವರೆ, ನೀವು ಕುಳಿತುಕೊಳ್ಳಿ. ನೀವು ಕುಳಿತುಕೊಂಡರೆ, ಎಲ್ಲರಿಗೂ ಕ್ಷೇಮ. ಅವರು signatory ಇದ್ದಾರೆ, ಅವರು ಮಾತನಾಡಲಿ. ನೀವು signatory ಅಲ್ಲ.

ಶ್ರೀ ಆರ್. ಧ್ರುವ ನಾರಾಯಣ(ಸಂತೇಮರಹಳ್ಳಿ): ಮಾನ್ಯ ಅಧ್ಯಕ್ಷರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದು ವರ್ಷದಲ್ಲಿ ಎರಡು ನೇಮಕಾತಿ ಮಾಡಿದ್ದಾರೆ. ಈಗಾಗಲೇ ಆ ನೇಮಕಾತಿಯಲ್ಲಿ ಏನು ಉಲ್ಲಂಘನೆಯಾಗಿದೆ ಎನ್ನುವ ಬಗ್ಗೆ ಹಿರಿಯ ಸದಸ್ಯರಾಗಿರುವ ಮಾಧುಸ್ವಾಮಿಯವರು, ಡಾ॥ ಹೆಚ್.ಸಿ. ಮಹಾದೇವಪ್ಪನವರು ತಿಳಿಸಿದ್ದಾರೆ. Professors, Readers and Lecturers postsಗೆ ಒಂದೇ ವರ್ಷದಲ್ಲಿ ಎರಡು ನೇಮಕಾತಿ ನಡೆದಿದೆ. ಇಲ್ಲಿ ಮೀಸಲಾತಿಯ ಉಲ್ಲಂಘನೆಯನ್ನು ನೇರವಾಗಿ ಆ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳು ಮಾಡಿದ್ದಾರೆ. ಇದು ನಿಜವಾಗಲೂ ಕೂಡ ಪ್ರತಿಭೆಗಳನ್ನು, ಪ್ರತಿಭಾನ್ವಿತ ವಿದ್ಯಾರ್ಥಿಗಳ ಹಕ್ಕನ್ನು ಮೊಟಕುಗೊಳಿಸುವುದು, ಆ ಪ್ರತಿಭೆಗಳನ್ನು ಹತ್ತಿಕ್ಕುವ ಕೆಲಸವನ್ನು ಮಾಡಿದ್ದಾರೆ. ಬಹಳ ಮೆರಿಟ್ ಇರುವವರು ಬಹಳ ಕಷ್ಟಪಟ್ಟು ಓದಿ ಗೋಲ್ಡ್ ಮೆಡಲ್ ತೆಗೆದುಕೊಂಡು, ಬಹಳಷ್ಟು ರೀಸರ್ಚ್ ಮಾಡಿ, ಪೇಪರ್ ಸಬ್ ಮಿಟ್ ಮಾಡಿ, ಒಳ್ಳೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳು ಅವರು ಜಾಬ್‌ಗೆ ಅರ್ಜಿ ಹಾಕುವ ಸಂದರ್ಭದಲ್ಲಿ ಅವರಿಗೆ ಜಾಬ್ ಸಿಗಲಿಲ್ಲ, ತನಗಿಂತ ಕಿರಿಯನಿಗೆ ಜಾಬ್ ಸಿಕ್ಕಿತೆಂದಾಗ, ಅವನ ಮನಸ್ಸಿಗೆ ಯಾವ ರೀತಿಯ ವೇದನೆಯಾಗುತ್ತದೆ, ಅಂಥವನ ಮನಸ್ಸಿನಲ್ಲಿ ಯಾವ ರೀತಿ ಪರಿವರ್ತನೆಯಾಗಿ, ಯಾವ ರೀತಿ ನಕ್ಸಲೆಟ್ ಆಗುತ್ತಾರೆನ್ನುವುದಕ್ಕೆ ಇದೊಂದು ಉದಾಹರಣೆ. ಇವತ್ತು ಬಹಳಷ್ಟು ನಕ್ಸ್‌ಲೆಟ್ಸ್ ತೀರಿ ಹೋಗಿದ್ದಾರೆ. ನೀವು ಅರ್ಹತೆ ನೋಡಬೇಕು. ಅವರು MBA, Ph.D. ಮಾಡಿರುವ Graduates ಬಹಳಷ್ಟು ಜನ ನಕ್ಸ್‌ಲೈಟ್ಸ್ ಆಗಿದ್ದಾರೆ. ಅಧಿಕಾರದಲ್ಲಿರುವವರು ನಿಜವಾಗಲೂ ಕೂಡ ನಾವೇ ಆಗಲಿ, ಯಾರೇ ಆಗಲಿ ಪ್ರತಿಭೆ ಇರುವವರನ್ನು ಗುರುತಿಸಬೇಕು. ಅವರನ್ನು ignore ಮಾಡಬಾರದು. ಅವರಿಗೆ ಅವಕಾಶ ಮಾಡಿಕೊಡತಕ್ಕಂಥದ್ದನ್ನು ನಾವು ಕಲಿಯಬೇಕು. ಈ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆ ಉಪ ಕುಲಪತಿಗಳು ಈ ಎಲ್ಲಾ ಮೀಸಲಾತಿಗಳನ್ನು ಉಲ್ಲಂಘನೆ ಮಾಡಿದ್ದಾರೆ. professor ಹುದ್ದೆಗಳಿಗೆ ಅರ್ಜಿ ಕರೆದಂಥ ಸಂದರ್ಭದಲ್ಲಿ ಅಲ್ಲಿ eligible Backward Class, SC/ST ಅಭ್ಯರ್ಥಿಗಳಿದ್ದರೂ ಕೂಡ ಆ ಒಂದು ಕ್ಯಾಟಗರಿಯನ್ನು ಸಾಮಾನ್ಯ ವರ್ಗಕ್ಕೆ ಪರಿವರ್ತನೆ ಮಾಡತಕ್ಕಂಥ ಅವಕಾಶ ಕಾನೂನಿನಲ್ಲಿ ಇಲ್ಲ. SC/ST category ಯಲ್ಲಿ ಖಾಲಿ ಇದ್ದಂಥ ಸಂದರ್ಭದಲ್ಲಿ ಅದನ್ನು carry over ಮಾಡಬೇಕು.

ಅಭ್ಯರ್ಥಿಗಳಿಲ್ಲವೆಂದಾಗ ಆ ಏನು ಪದವಿಗಳಿರುತ್ತವೆ, ಅವುಗಳನ್ನು carry over ಮಾಡಿ, next advertisement ನಲ್ಲಿ ಅವರನ್ನು ತುಂಬತಕ್ಕಂಥದ್ದಾಗಬೇಕು. ಆದರೆ, ಇಲ್ಲಿ ಆ ತರಹ ಆಗಿಲ್ಲ. SC/ST category ಯಲ್ಲಿ candidate ಇಲ್ಲವೆಂದರೆ, ಅದನ್ನು convert ಮಾಡಿ, ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಕೊಟ್ಟಿರುವುದು ಕಾನೂನು ಬಾಹಿರ. ಈಗಾಗಲೆ ಎಲ್ಲಾ ವಿಷಯಗಳನ್ನು ಮಾಧುಸ್ವಾಮಿಯವರು ಮತ್ತು ಡಾ॥ ಹೆಚ್.ಸಿ. ಮಹಾದೇವಪ್ಪನವರು ತಿಳಿಸಿದ್ದಾರೆ. ಅರೆಕಾಲಿಕ ಉಪನ್ಯಾಸಕರ 32 ಹುದ್ದೆಗಳನ್ನು Supreme Court ಆದೇಶ, High Court ಅದನ್ನು ತುಂಬಬೇಕೆಂದು ಆದೇಶ ಕೊಟ್ಟಾಗಲೂ ಕೂಡ, ಅದಕ್ಕೆ guidelines ಇದೆ. NET ಮಾಡಿದವರು ಅಥವಾ Ph.D, M.Phil., ಮಾಡತಕ್ಕಂಥ ಅಭ್ಯರ್ಥಿಗಳನ್ನೇ ತುಂಬಬೇಕೆಂದು ಕಾನೂನದೆ. ಆದರೆ, ಆ ಕಾನೂನದ್ದಾಗಲೂ ಅದನ್ನು ಉಲ್ಲಂಘಿಸಿ, 19 ಜನ NET pass ಮಾಡದಿದ್ದವರು, Ph.D, M.Phil., ಮಾಡದ ಅಭ್ಯರ್ಥಿಗಳನ್ನು ತುಂಬಿರತಕ್ಕಂಥದ್ದು ಕಾನೂನು ಬಾಹಿರ. ಇದಕ್ಕೊಂದು ತನಿಖಾ ಸಮಿತಿಯಾಗಬೇಕು ತನ್ಮೂಲಕ ಏನು ಅನ್ಯಾಯ ನಡೆದಿದೆ, ಆ ಅನ್ಯಾಯವನ್ನು ಹೊರಗಡೆ ಬಹಿರಂಗಪಡಿಸಿ, ಯಾರು ಅನ್ಯಾಯ ಮಾಡಿದ್ದಾರೆ, ಆ ಉಪ ಕುಲಪತಿಗಳಾಗಿದ್ದರೆ, ಅವರ ಮೇಲೆ ಶಿಸ್ತಿನ, ಕಾನೂನಿನ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುತ್ತಾ, ಮಾತನಾಡಲು ನನಗೆ ಸಮಯ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಸರ್ಕಾರದ ಪರವಾಗಿ ಯಾರು ಉತ್ತರ ಕೊಡುತ್ತೀರಿ?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ನಾನೂ ಕೂಡ ಮಾತನಾಡುತ್ತೇನೆ.

ಅಧ್ಯಕ್ಷರು: ನೀವೇನು ಸಿಗ್ನೇಟರಿ ಅಲ್ಲ.

ಶ್ರೀ ಸಿದ್ದರಾಮಯ್ಯ: ಸಿಗ್ನೇಚರ್ ಹಾಕಿರುವವರಿಗೆ ಮಾತ್ರ ಮಾತನಾಡುವುದಕ್ಕೆ ತಾವು ಅವಕಾಶ ಕೊಡುತ್ತಿದ್ದೀರಾ? ನೀವು ಅವಕಾಶ ಕೊಡದಿದ್ದರೆ ನಾನು ಕುಳಿತುಕೊಳ್ಳುತ್ತೇನೆ. ಆದರೆ, ಸಿಗ್ನೇಚರ್ ಮಾಡದೇ ಇರುವವರಿಗೆ ನೀವು ಅವಕಾಶ ಕೊಟ್ಟಾಗ ಕೇಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಲು ನಾನು ನಿಯಮ 69ರ ಅಡಿಯಲ್ಲಿ ನೋಟೀಸ್ ಕೊಟ್ಟಿದ್ದೆ. ರೂಲ್ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ.

Sri. SIDDARAMAIAH: It is converted for discussion under rule 69.

ಅಧ್ಯಕ್ಷರು: ಆ ರೀತಿ ಇಲ್ಲ. ಒಂದು ಅವಕಾಶ ಕೊಡುತ್ತೇನೆ, ಬೇಗ ಮುಗಿಸಬೇಕಷ್ಟೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಮತ್ತು ಡಾ|| ಹೆಚ್.ಸಿ. ಮಹದೇವಪ್ಪನವರು ಹಾಗೂ ಮಾನ್ಯ ಧ್ರುವ ನಾರಾಯಣ್‌ರವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ, ನಾನು ಬಹಳ ಡೀಟೆಲ್ ಆಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲಿ ಕಾನೂನು ಬಾಹಿರವಾಗಿ ಸಾಕಷ್ಟು ನೇಮಕಾತಿಯಾಗಿದೆ. ಮೇಲ್ನೋಟಕ್ಕೆ ನೋಡಿದರೂ ಕೂಡ ಬಹಳ ಸ್ಪಷ್ಟವಾಗಿ ಕಾಣುವುದೇನೆಂದರೆ, ಎಲ್ಲಾ ಕಾನೂನುಗಳನ್ನು ಮತ್ತು ಕೋರ್ಟ್ ಆದೇಶಗವನ್ನು ಗಾಳಿಗೆ ತೂರಿ ಅವರಿಗೆ ಮನಸ್ಸಿಗೆ ಬಂದ ಹಾಗೆ ಅಂದರೆ, ಅವರು ಯಾರಿಗೆ ಅನುಕೂಲ ಮತ್ತು ಸಹಾಯ ಮಾಡಬೇಕಾಗಿದೆಯೋ ಅವರಿಗೆ ಮಾತ್ರ ಮಾಡಿದ್ದಾರೆ. ಮತ್ತೆ ಹಿಂದುಳಿದ ವರ್ಗದವರಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮೀಸಲಾತಿ ಮಾಡಿರತಕ್ಕಂಥ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿದ್ದರೂ ಕೂಡ ಅದನ್ನು ಬದಿಗೊತ್ತಿ ಅವರನ್ನು ಕನ್ಸಿಡರ್ ಮಾಡದೆ ಆ ಹುದ್ದೆಗಳನ್ನು ಜನರಲ್ ಮೆರಿಟ್‌ಗೆ ಕನ್ವರ್ಟ್ ಮಾಡಿರುವುದರಿಂದ ಹಿಂದುಳಿದ ಜಾತಿಯವರಿಗೆ ಮತ್ತು ದಲಿತರಿಗೆ ಹಾಗೂ ಅಲ್ಪಸಂಖ್ಯಾತರಿಗೆ ಆಗಿರತಕ್ಕಂಥ ಒಂದು ದೊಡ್ಡ ಅನ್ಯಾಯ. ಸರ್ಕಾರ ಮೀಸಲಾತಿಯ ಪಾಲಿಸಿಯನ್ನು ಮಾಡಿರುವುದು ಏತಕ್ಕೋಸ್ಕರ? ಇದನ್ನು ಅನುಸರಿಸಿ ಹಿಂದುಳಿದವರಿಗೆ ಮತ್ತು ದಲಿತರಿಗೆ ನ್ಯಾಯ ಸಿಗಬೇಕೆಂಬ ಉದ್ದೇಶದಿಂದ ಇದನ್ನು ಮಾಡಿದೆ. ಅವರಿಗೂ ಕೂಡ ಸಾಮಾಜಿಕ ನ್ಯಾಯ ಸಿಗಬೇಕೆಂದು ಇರುವಾಗ ಅವರು ಸ್ವೇಚ್ಛೆಯಾಗಿ, ಡಿಕ್ಟೇಟರ್ ತರಹ ಮನಸ್ಸೋ ಇಚ್ಛೆ ಮಾಡುವುದಕ್ಕೆ ಬರುತ್ತದೆಯೇ?ಆದರೆ, ಇಲ್ಲಿ ಮಾಡಿದ್ದಾರೆ. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿದಂತೆ ಎಲಿಜಿಬಲ್ ಅಭ್ಯರ್ಥಿಗಳು ಇಲ್ಲದೆ ಇದ್ದಾಗ ಮಾತ್ರ ಅದನ್ನು ಕ್ಯಾರಿಓವರ್ ಮಾಡಬಹುದು, ಮುಂದಿನ ನೇಮಕಾತಿಯಲ್ಲಿ ಅದನ್ನು ಕನ್ಸಿಡರ್ ಮಾಡಬೇಕಾಗುತ್ತದೆ. ಅಂದರೆ, ಕ್ಯಾರಿ ಓವರ್ ಮಾಡಿರತಕ್ಕಂಥದ್ದನ್ನು ಸೇರಿಸಿಕೊಂಡು ಮುಂದಿನ ನೇಮಕಾತಿಯಲ್ಲಿ SC:ST, 2A, 2B, 3A, 3B ಎಷ್ಟಿರುತ್ತದೆಯೋ ಅವೆಲ್ಲವನ್ನೂ ಸೇರಿಸಿಕೊಂಡು

ಮಾಡಬೇಕಾಗುತ್ತದೆ. ಆದರೆ, ಇಲ್ಲಿ ಯಾವ ರೀತಿಯಾಗಿ ಮಾಡಿದ್ದಾರೆಂದರೆ, 2006ರ ನೋಟಿಫಿಕೇಷನ್‌ನಲ್ಲಿ 6 ಹುದ್ದೆಗಳಿಗೆ ಮೀಸಲಾತಿ ಇದ್ದರೂ ಕೂಡ ಅಲ್ಲಿ ಒಬ್ಬರನ್ನು ನೇಮಕ ಮಾಡಿಲ್ಲ. ಮತ್ತೆ 2007ರ ನೋಟಿಫಿಕೇಷನ್‌ನಲ್ಲಿಯೂ ಕೂಡ ಮತ್ತೆ ನೇಮಕಾತಿ ಮಾಡಿಲ್ಲ. ಇದಕ್ಕಿಂಥ ದೊಡ್ಡ ಅನ್ಯಾಯ ಯಾವುದಿದೆ ಹೇಳಿ? ಬಹುಶಃ ಡಿಕ್ಟೇಟರ್‌ಷಿಪ್ ಇರುವ ರಾಷ್ಟ್ರಗಳಲ್ಲಿಯೂ ಕೂಡ ಈ ರೀತಿಯಾಗಿ ನಡೆಯುತ್ತಿದೆಯೋ ಎನ್ನತಕ್ಕಂಥದ್ದು ನನಗಂತೂ ಗೊತ್ತಿಲ್ಲ. ವಿಶ್ವವಿದ್ಯಾಲಯಗಳು ಖರ್ಚು ಮಾಡುವುದಕ್ಕೆ ದುಡ್ಡು ಕೊಡುವವರು ಯಾರು? ಅವರು ದುಡ್ಡನ್ನು ಖರ್ಚು ಮಾಡುವುದಕ್ಕೆ ಈ ಸದನದಲ್ಲಿಯೇ ಪಾಸ್ ಮಾಡಿ ಕೊಡುತ್ತೇವೆ. ನಮ್ಮ ಯೂನಿವರ್ಸಿಟಿ ಅಟಾನಮಸ್ ಬಾಡಿ ಎಂದು ಹೇಳಿ ಮನಸ್ಸಿಗೆ ಬಂದ ಹಾಗೆ ಹಣ ಖರ್ಚು ಮಾಡಬಹುದು, ಮನಸ್ಸಿಗೆ ಬಂದ ಹಾಗೆ ಯಾರನ್ನು ಬೇಕಾದರೂ ನೇಮಕ ಮಾಡಿಕೊಳ್ಳಬಹುದು ಮತ್ತು ಮನಸ್ಸಿಗೆ ಬಂದ ಹಾಗೆ ಸಂಬಳ ಕೊಡಬಹುದೆಂದು ಕಾನೂನು ಇದೆಯೇ? ಯಾವ ಕಾಲದಲ್ಲಿಯೂ ಕೂಡ ಈ ರೀತಿಯಾಗಿ ನಡೆದಿಲ್ಲ. ಮೈಸೂರು ವಿಶ್ವವಿದ್ಯಾಲಯದಲ್ಲಿ ಮೊದಲನೇ ಸಾರಿ ಈ ರೀತಿಯಾಗಿದೆ. ಮತ್ತೆ ಯಾರನ್ನು ಕನ್‌ಫರ್ಮ್ ಮಾಡಬೇಕೆಂದು ದಿನಾಂಕ 10.4.2006ರಲ್ಲಿ ಸುಪ್ರೀಂ ಕೋರ್ಟ್ ಕೂಡ ಆದೇಶ ಮಾಡಿದೆ. 10 ವರ್ಷಗಳ ಕಾಲಕ್ಕಿಂತ ಹೆಚ್ಚು ಕೆಲಸ ಮಾಡತಕ್ಕಂಥವರನ್ನು ಬಿಟ್ಟು ಸುಮಾರು 19 ಜನ ineligible ಇರತಕ್ಕಂಥವರನ್ನು confirm ಮಾಡಿದ್ದಾರೆ. ಯಾವ ಕಾನೂನಿನ ದೃಷ್ಟಿಯಿಂದ ಇದಕ್ಕೆ ನ್ಯಾಯ ಕೊಟ್ಟಿದ್ದಾರೆ? ಇದು ಸಾಮಾಜಿಕ ನ್ಯಾಯವೆಂದು ಅನಿಸುತ್ತದೆಯೇ? ಈ ರೀತಿಯಾಗಿ ಮಾಡುವುದಕ್ಕೆ ಇವರಿಗೆ ಅಧಿಕಾರ ಕೊಟ್ಟವರು ಯಾರು? ಉನ್ನತ ಶಿಕ್ಷಣ ಇಲಾಖೆ ಸಚಿವರು ಅದರ ಬಗ್ಗೆ ಪತ್ರ ಬರೆದರೂ ಕೂಡ ಅವರ ಪತ್ರಕ್ಕೆ ಕವಡೆ ಕಾಸಿನ ಕಿಮ್ಮತ್ ಇಲ್ಲ. ಕಾನೂನು ಪ್ರಕಾರವಾಗಿ ಮತ್ತು ಸುಪ್ರೀಂ ಕೋರ್ಟ್‌ನ ತೀರ್ಪಿನ ಪ್ರಕಾರ ಮಾಡಿ ಎಂದು ಉನ್ನತ ಶಿಕ್ಷಣ ಇಲಾಖೆ ಸಚಿವರು ಹೇಳಿದರೂ ಕೂಡ ಅವರ ಮಾತನ್ನು ಕಸದ ಬುಟ್ಟಿಗೆ ಎಸೆದು ಇವರಿಗೆ ಬೇಕಾದವರನ್ನು ಮಾಡಿದ್ದಾರೆ. ಕಾನೂನು ಬಾಹಿರವಾಗಿ ಮಾಡಿರುವುದಲ್ಲದೆ ದಲಿತರು, ಹಿಂದುಳಿದ ವರ್ಗದವರಿಗೆ ಅನ್ಯಾಯ ಮಾಡಿರುವುದಲ್ಲದೆ ಮೀಸಲಾತಿ ಹುದ್ದೆಗಳನ್ನು ಜನರಲ್ ಮೆರಿಟ್‌ಗೆ ಕನ್ವರ್ಟ್ ಮಾಡಿಕೊಂಡು ಅವರ ಸಂಬಂಧಿಕರು, ಸ್ನೇಹಿತರ ಮಕ್ಕಳಿಗೆ ಹಾಗೂ ಅವರ ಸ್ವಂತ ಸಂಬಂಧಿಕನ ಹೆಸರನ್ನು ಈಗಾಗಲೇ ಅವರು ಪ್ರಸ್ತಾಪ ಮಾಡಿದ್ದಾರೆ.ಸ್ವಂತ ಸಂಬಂಧಿತನಾದ ಲೋಕನಾಥ್ ಎಂಬುವವರಿಗೆ ನೇಮಕಾತಿ ಮಾಡಿದ್ದಾರೆ. ಕೇವಲ 3 ತಿಂಗಳಲ್ಲಿ ಒಬ್ಬ ಲೆಕ್ಚರರ್‌ನ್ನು ರೀಡರ್

ಮಾಡಿದ್ದಾರೆ. ಮಾನ್ಯ ಅಧ್ಯಕ್ಷರು ಕೂಡ ಮಾಸ್ಟರ್ ಆಗಿ ಕೆಲಸ ಮಾಡಿದ್ದಾರೆ ಮತ್ತೆ ಮೈಸೂರು ಯೂನಿವರ್ಸಿಟಿ ಬಗ್ಗೆ ಚೆನ್ನಾಗಿ ಗೊತ್ತಿದೆ. ಲೆಕ್ಚರರ್‌ನಿಂದ ರೀಡರ್ ಆಗುವುದಕ್ಕೆ ಎಷ್ಟು ವರ್ಷ ಬೇಕಾಗುತ್ತದೆ? ನಿಮ್ಮ ಮನೆಯವರೂ ಕೂಡ ಅಲ್ಲಿನ ಸರ್ಕಾರಿ ಕಾಲೇಜಿನಲ್ಲಿ ಪ್ರೊಫೆಸರ್ ಆಗಿರಬೇಕು ಮತ್ತೆ ಇನ್ನೇನು ನಿವೃತ್ತರಾಗುತ್ತಿರಬೇಕೆಂದು ಕಾಣಿಸುತ್ತದೆ. ಕೊನೆಯಲ್ಲಿ ಅಂದರೆ, ನಿವೃತ್ತರಾಗುವ 1 ಅಥವಾ 2 ವರ್ಷ ಇದ್ದಾಗ ಅವರಿಗೆ ಪ್ರೊಫೆಸರ್ ಹುದ್ದೆ ಸಿಕ್ಕಿರಬೇಕು. ಆದರೆ, ಇಲ್ಲಿ ಮೂರೇ ತಿಂಗಳಿಗೆ ಪ್ರೊಫೆಸರ್ ಆಗಿದ್ದಾರೆ. ಅಂದರೆ, ಲೆಕ್ಚರರ್-ರೀಡರ್-ಪ್ರೊಫೆಸರ್ ಹುದ್ದೆ ಕೊಟ್ಟಿದ್ದಾರೆ. ಯಾವ grounds ಮೇಲೆ ಕೊಟ್ಟಿದ್ದಾರೆ? What is the special qualification he has? What is the special eligibility he has? What is the expertise he has? Nothing, ಏನೂ ಇಲ್ಲ. ಇದಕ್ಕೆ ಆಧಾರ ಏನೆಂದರೆ, ಅವರು ಕುಲಪತಿಗಳ ಸಂಬಂಧಿಕರಷ್ಟೆ. ಇವರ ಸಂಬಂಧಿಕರನ್ನು ನೇಮಕ ಮಾಡಿಕೊಳ್ಳುವುದಕ್ಕೋಸ್ಕರ ಇವರು ಉಪ ಕುಲಪತಿಗಳಾಗಿದ್ದಾರೆಯೇ? ಇವರಿಗೆ ನಾವು ಇಲ್ಲಿಂದ ಬಜೆಟ್ ಪಾಸ್ ಮಾಡಿ ಕೊಡತಕ್ಕಂಥದ್ದು ಈ ಕೆಲಸ ಮಾಡುವುದಕ್ಕಾಗಿಯೇ? ಈ ತರಹ ಕಾನೂನನ್ನು ಮತ್ತು ಸುಪ್ರೀಂ ಕೋರ್ಟ್‌ನ ತೀರ್ಪನ್ನು ಉಲ್ಲಂಘನೆ ಮಾಡಿ ಗಾಳಿಗೆ ತೂರಿ ಯಾರು ಎಲಿಜಿಬಿಲಿಟಿ ಇದ್ದಾರೆಯೋ ಅವರನ್ನು ನೇಮಕ ಮಾಡಿಕೊಂಡಿಲ್ಲ. ಏಕೆಂದರೆ ಅವರು ಇವರಿಗೆ ಯಾವುದೇ ರೀತಿಯ ಸಂಬಂಧಿಕರಲ್ಲ ಮತ್ತೆ ಅವರಿಗೇನು ಮಾಡಿಲ್ಲ ಮತ್ತು ಬೇರೆ ರೀತಿಯಲ್ಲಿ ಅವರ ಹತ್ತಿರ ಹೋಗಿ ಕೈ ಕಾಲಿಡಿದಿಲ್ಲ. 9 ಜನರಿಗೆ ಕೊಡಿ ಎಂದು ಕೋರ್ಟ್ ಡೈರೆಕ್ಷನ್ ಇದೆ. In addition to that ಅವರಿಗೆ ಎಲಿಜಿಬಿಲಿಟಿ ಇದೆ. ಮತ್ತೆ ಅವರು 10 ವರ್ಷಕ್ಕಿಂತ ಹೆಚ್ಚು ಅರೆ ಕಲಿಕ ಉಪನ್ಯಾಸಕರಾಗಿ ಕೆಲಸ ಮಾಡಿರತಕ್ಕಂಥವರನ್ನು ಬಿಟ್ಟು ಎಲಿಜಿಬಿಲಿಟಿ ಇಲ್ಲದೇ ಇರುವವರಿಗೆ ಅವರು ಮಾಡಿದ್ದಾರೆ. 32 ಜನರಲ್ಲಿ 19 ಜನರಿಗೆ Ph.D, M.Phil. NET ಪಾಸ್ ಮಾಡಿಲ್ಲ.

ಅಧ್ಯಕ್ಷರು: M.Phil and Ph.D ಕೋರ್ಸ್‌ಗಳನ್ನು ಮಾಡಿರಲೇಬೇಕಲ್ಲವೇ?

ಶ್ರೀ ಸಿದ್ದರಾಮಯ್ಯ: ಅವುಗಳನ್ನು ಮಾಡಿಲ್ಲ.

ಅಧ್ಯಕ್ಷರು: ಅದೇನು decided qualification or minimum qualification?

ಶ್ರೀ ಸಿದ್ದರಾಮಯ್ಯ: ಇದೆಲ್ಲಾ U.G.C. ನಾರ್ಮ್ಸ್ ಪ್ರಕಾರ ಇರಬೇಕು. ಇವೆಲ್ಲ ಇರತಕ್ಕಂಥವರನ್ನು ಬಿಟ್ಟು ಇಲ್ಲದೆ ಇರತಕ್ಕಂಥವರಿಗೆ ಕೊಟ್ಟಿದ್ದಾರೆ. ಆದ್ದರಿಂದ, ಇದು ತನಿಖೆ ಮಾಡುವುದಕ್ಕೆ ಯೋಗ್ಯ ಇದೆಯೋ ಅಥವಾ ಇಲ್ಲವೋ ನೀವೇ ಹೇಳಿ?

ಅಧ್ಯಕ್ಷರು: ಪ್ರಜಾಪ್ರಭುತ್ವ ವ್ಯವಸ್ಥೆ ಇರುವ ದೇಶದಲ್ಲಿ ಇವೆಲ್ಲಾ ನಡೆಯುತ್ತಿವೆ.

ಶ್ರೀ ಸಿದ್ದರಾಮಯ್ಯ:- ಹಾಗಾದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದೇ ರೀತಿಯಾಗಿ ನಡೆಯುವುದೇ?

ಅಧ್ಯಕ್ಷರು: ಡಿಕ್ಟೇಟರ್‌ಷಿಪ್ ಎಷ್ಟೋ ಬೆಟರ್. ಈ ಪ್ರಜಾಪ್ರಭುತ್ವ ದೇಶದಲ್ಲಿ ಏನು ಬೇಕಾದರೂ ಆಗಬಹುದು ಸ್ವಾಮಿ.

ಶ್ರೀ ಸಿದ್ದರಾಮಯ್ಯ: ಹೌದಾ! ಹಾಗಾದರೆ ಬಿಟ್ಟುಬಿಡಿ. ಹಾಗಾದರೆ ನಾವು ಯಾರಿಗೆ ಹೇಳಬೇಕೆಂಬುದು ಗೊತ್ತಾಗುತ್ತಿಲ್ಲ. ನೀವೇ ಹೇಳಿದರೆ ಹೇಗೆ? ಹೋಗಲಿ ಬಿಡಿ ಬಿಟ್ಟುಬಿಡುತ್ತೇನೆ.

ಅಧ್ಯಕ್ಷರು: ತಾವು ಸರ್ಕಾರಕ್ಕೆ ಹೇಳುತ್ತಿದ್ದೀರಿ. ಆದರೆ, ನಾನು 30 ವರ್ಷದಿಂದ ಸಾರ್ವಜನಕ ಜೀವನದಲ್ಲಿದ್ದೀನಿ. ಇಷ್ಟು ವರ್ಷಗಳ ಕಾಲ ಈ ಎಲ್ಲವನ್ನೂ ಕಣ್ಣಿನಿಂದ ನೋಡಿ ಈಗ ಇದೆಲ್ಲಾ ಸಾಧಾರಣವಾಗಿದೆ.

ಶ್ರೀ ಸಿದ್ದರಾಮಯ್ಯ:- ನೀವೇಕೆ ನಿರಾಶಾವಾದಿಗಳಾಗುತ್ತಿದ್ದೀರಿ?

ಅಧ್ಯಕ್ಷರು: ನಿರಾಶಾವಾದಿಯಾಗಿಲ್ಲ.

ಶ್ರೀ ಸಿದ್ದರಾಮಯ್ಯ: ಇವತ್ತೇನೂ ತಾವು ಒಂದು ರೀತಿ ಸ್ಪೆಸಿಫಿಕ್ ಆಗಿರುವಂತೆ ನನಗೆ ಕಾಣುತ್ತದೆ.

ಅಧ್ಯಕ್ಷರು: ಆ ರೀತಿ ಇಲ್ಲ. ನಾನು ಹೇಳುವುದನ್ನು ಸ್ವಲ್ಪ ಕೇಳಿ ಸ್ವಾಮಿ. ರಾಜಕೀಯ ಪಕ್ಷಗಳಲ್ಲಿರುವ ನಾವುಗಳು ಸಾರ್ವಜನಿಕ ಜೀವನದಲ್ಲಿ ಸತ್ಯವನ್ನೇ ಎತ್ತಿಹಿಡಿಯುತ್ತೇವೆಂದು ಪ್ರತಿಜ್ಞೆ ಮಾಡಿದ್ದರೆ ಏನಾದರೂ ಸ್ವಲ್ಪ ಸುಧಾರಣೆಯಾಗುತ್ತಿತ್ತು.

ಶ್ರೀ ಸಿದ್ದರಾಮಯ್ಯ: ನೀವು ಸೇರಿಕೊಂಡು ಹೇಳಬೇಕೋ ಅಥವಾ ನಾನು ಒಬ್ಬನೇ ಹೇಳಿಕೊಳ್ಳಲೋ? ನೀವು ಹೇಳುವುದು ಸರಿಯಾಗಿದೆ.

ಅಧ್ಯಕ್ಷರು: ಏನು ಮಾಡುವುದು, ಹೀಗೆ ಒಟ್ಟಿಗೆ ತಳ್ಳಿಕೊಂಡು ಹೋಗುವುದು.

ಶ್ರೀ ಸಿದ್ದರಾಮಯ್ಯ: ನಾವೆಲ್ಲರೂ ಇಲ್ಲಿಗೆ ಬಂದು ಪ್ರಮಾಣವಚನವನ್ನು ಮಾಡುತ್ತೇವೆ ನಿಜ.

ಅಧ್ಯಕ್ಷರು: ಆ ಪ್ರಮಾಣ ಮಾಡುವುದು ಬಿಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾವು ನಿಮ್ಮ ಸ್ಥಾನಕ್ಕೆ ಅಗೌರವ ಹಾಗಬಾರದು ಎಂದು ನಾನು ಏನು ಮಾತನಾಡುವುದಕ್ಕೆ ಹೋಗುವುದಿಲ್ಲ. ತಾವು ಆ ಸ್ಥಾನದಲ್ಲಿ ಕುಳಿತುಕೊಂಡು ಈ ರೀತಿ ಮಾತನಾಡಬಾರದು.

ಅಧ್ಯಕ್ಷರು: ಸ್ಥಾನದಲ್ಲಿರುವ ಪ್ರಶ್ನೆಯಲ್ಲ, ಗಂಭೀರವಾಗಿ ಎಲ್ಲರೂ ಯೋಚನೆಯನ್ನು ಮಾಡಬೇಕು. ಏತಕ್ಕೆಂದರೆ...

ಶ್ರೀ ಸಿದ್ದರಾಮಯ್ಯ: ಅದರ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ. ಏತಕ್ಕಾಗಿ ವ್ಯವಸ್ಥೆ ಕೆಟ್ಟು ಹೋಗುತ್ತಿದೆ, ಪ್ರಜಾಪ್ರಭುತ್ವದ ಮೌಲ್ಯಗಳೆಲ್ಲ ಏಕೆ ನಾಶವಾಗುತ್ತವೆ ಎಂಬ ಬಗ್ಗೆ ಒಂದು ದಿನ ಚರ್ಚೆ ಮಾಡೋಣ.

ಅಧ್ಯಕ್ಷರು: ರಾಜಕೀಯ ಪಕ್ಷಗಳು ಮತ್ತು ರಾಜಕೀಯ ನಾಯಕರುಗಳು ಸರಿಯಾಗಿಲ್ಲದಿರುವುದೇ ಕಾರಣ ಎಂದು ನನ್ನ ಅಭಿಪ್ರಾಯ ಸ್ವಾಮಿ.

ಶ್ರೀ ಸಿದ್ದರಾಮಯ್ಯ: ಈಗ ನಿಮ್ಮ ಅಭಿಪ್ರಾಯ

ಡಾ|| ಎಚ್.ಸಿ. ಮಹದೇವಪ್ಪ: Let us debate. This is a serious issue. It is violation of the constitution, judiciary. ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ. Let us debate this issue.

ಅಧ್ಯಕ್ಷರು: ಆಯಿತು ಅವರು ಮಾತನಾಡುವುದಕ್ಕೆ ಬಿಡಿ.

ಡಾ|| ಎಚ್.ಸಿ. ಮಹದೇವಪ್ಪ: It is a very important issue Let us debate.

ಶ್ರೀ ಸಿದ್ದರಾಮಯ್ಯ: ನೀವು ಹೇಳುವುದು ಇದೆಯಲ್ಲಾ, It is a debatable issue.

ಅಧ್ಯಕ್ಷರು: Debatable ಅಲ್ಲ. 100% ಸೂರ್ಯ ಪೂರ್ವದಲ್ಲಿ ಹುಟ್ಟುವುದಷ್ಟೇ ಸತ್ಯ.

ಶ್ರೀ ಸಿದ್ದರಾಮಯ್ಯ: ಸತ್ಯವೆಂದು ನಾವೇನೂ ಹೇಳುತ್ತಿಲ್ಲವಲ್ಲ.

ಅಧ್ಯಕ್ಷರು: ಹೇಳಿ ಸತ್ಯ ಆದರೆ ಏನು ಮಾಡುವುದು ಎಂದು ಹೇಳಿ.

ಶ್ರೀ ಸಿದ್ದರಾಮಯ್ಯ: I don't know why you are behaving like this.

ಡಾ॥ ಎಚ್.ಸಿ. ಮಹದೇವಪ್ಪ: ಮೊದಲು ಚೆನ್ನಾಗಿದ್ದು, ಈಗ ಏತಕ್ಕೆ ಕೆಟ್ಟು ಹೋಗಿ ಬಿಟ್ಟಿದ್ದೀರಿ. ನಾನು ಈ ತರಹ ಎಂದು ತಿಳಿದುಕೊಂಡಿರಲಿಲ್ಲ.

ಶ್ರೀ ಸಿದ್ದರಾಮಯ್ಯ: Have hope in the system. Have hope in democracy.

ಅಧ್ಯಕ್ಷರು: ಆಯಿತು. ನಾನು ಇಟ್ಟುಕೋಬೇಡಿ ಎಂದು ಹೇಳುವುದಿಲ್ಲ. ಏನಾಗಿದೆ ಎಂದರೆ, ರಿಪೇರಿ ಮಾಡಲಾರದಷ್ಟು ಕುಸಿದು ಹೋಗಿ ಬಿಟ್ಟಿದೆ.

ಶ್ರೀ ಸಿದ್ದರಾಮಯ್ಯ: ಇಷ್ಟೊಂದು ವೈರಾಗ್ಯವನ್ನು ಇಟ್ಟುಕೊಂಡು, ಅದಕ್ಕೆ ಹೀಗೆಲ್ಲಾ ಆಗಿ ಪ್ರಕಾಶ್‌ರವರನ್ನು ದಾರಿ ತಪ್ಪಿಸಿರುವುದು.

ಡಾ॥ ಎಚ್.ಸಿ. ಮಹದೇವಪ್ಪ: ಭಾರತದ ಶಕ್ತಿ ಅಡಕವಾಗಿರುವುದು ಪ್ರಜಾಪ್ರಭುತ್ವದಲ್ಲಿ.

ಅಧ್ಯಕ್ಷರು: ಆಯಿತು.

ಡಾ॥ ಎಚ್.ಸಿ. ಮಹದೇವಪ್ಪ: ಈಗ ನೀವು ಕೆಟ್ಟು ಹೋಗಿ ಬಿಟ್ಟಿದ್ದೀರಿ.

ಅಧ್ಯಕ್ಷರು: ನೋಡಿ, ನೀವೆಲ್ಲರೂ ನನಗಿಂತ ಚಿಕ್ಕವರಾಗಿದ್ದೀರಿ. ೀವುಗಳು ಆಶಾವಾದಿಗಳಾಗಿರಿ.

ಶ್ರೀ ಸಿದ್ದರಾಮಯ್ಯ:- ನನಗಿಂತ ನಿಮಗೆ ಅನುಭವವಾಗಿದೆ. ನಿಮಗೆ ನೋವು ಆಗಿದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಏಕೆಂದರೆ ನ್ಯಾಯವಾಗಿ ಸಿಗಬೇಕಾದುದು, ನಿಮ್ಮ ಮನೆಯವರಿಗೆ ಹಿಂದೆಯೇ ಪ್ರೊಫೆಸರ್‌ಗಿರಿ ಸಿಗಬೇಕಾಗಿತ್ತು . ಸಿಗಲಿಲ್ಲ.

ಅಧ್ಯಕ್ಷರು: ಅದಲ್ಲಾಪ್ಪ, ಅವರಿಗೆ ನೋವು ಆಗಿದ್ದರೆ ಅವರಿಗೆ. I am not bothered.ತಾವು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: 28 ವರ್ಷಗಳಿಂದ ಕೆಲಸ ಮಾಡಿರುವವರಿಗೆ promotion ಇಲ್ಲ. 3-3 ತಿಂಗಳು ಕೆಲಸ ಮಾಡಿದವರಿಗೆ promotion ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ: ನಿಮ್ಮ ಮಿಸಸ್ ಗೌರ್ನಮೆಂಟ್ ಕಾಲೇಜಿನಲ್ಲಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಹಾರಾಜಾಸ್ ಕಾಲೇಜು. ಅದು ಯೂನಿವರ್ಸಿಟಿ ಕಾಲೇಜು.

ಶ್ರೀ ಸಿದ್ದರಾಮಯ್ಯ: ಮಹಾರಾಜಾಸ್ ಕಾಲೇಜಾ?

ಅಧ್ಯಕ್ಷರು: ಅದೆಲ್ಲಾ ಬಿಡಿ. ಇಲ್ಲಿ ಆಗಿರುವಂತಹ ಅನ್ಯಾಯದ ಬಗ್ಗೆ ಹೇಳಿ ಸ್ವಾಮಿ.

ಶ್ರೀ ಸಿದ್ದರಾಮಯ್ಯ: ಓಕೆ.

ಡಾ|| ಎಚ್.ಸಿ. ಮಹದೇವಪ್ಪ: ಎಲ್ಲರಿಗೂ ಅನ್ಯಾಯವಾಗಿದೆ. ಏಕೆಂದರೆ ಅವರು ತಮ್ಮ ಮನೆಗೆ ಕರೆದು ಒಂದು ಸಾರಿ ಊಟವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೀವು Education Minister ಆಗಿದ್ದೀರಲ್ಲಾ, ನಿಮಗೂ ಕೂಡ ಅನುಭವವಾಗಿರಬೇಕಲ್ಲಾ ಸ್ವಾಮಿ. ತಮಗೂ ಕೂಡ ವೈಸ್ ಚಾನ್ಸಲರ್ ಬಗ್ಗೆ ನಿಮಗೂ ಕೂಡ ಅನುಭವವಾಗಿರಬೇಕಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇವರಿಗೆ ಗೊತ್ತಿಲ್ಲ.

ಅಧ್ಯಕ್ಷರು: ಅವರಿಗೆ ಏನೂ ಗೊತ್ತಿಲ್ಲ, ನಿಮಗೆ ಏನು ಗೊತ್ತಿದೆ ಅವನ್ನು ಹೇಳಿ ಸ್ವಾಮಿ.

ಶ್ರೀ ಸಿದ್ದರಾಮಯ್ಯ: ಕೇಳಿ ಸ್ವಲ್ಪ. ನಾನು 2 ನಿಮಿಷದಲ್ಲಿ ಮುಗಿಸುತ್ತೇನೆ. ನೀವು ಹೇಳುವುದು ಇದೆಯಲ್ಲಾ, ನೀವು ಈ ರೀತಿಯಾಗಿ ಮಾತನಾಡಿದರೆ ಇಲ್ಲಿ ಎಲ್ಲರೂ hopeನ್ನು ಕಳೆದುಕೊಂಡು ಬಿಡುತ್ತಾರೆ.

ಅಧ್ಯಕ್ಷರು: No,Not that. ನಾನು ಹೇಳುತ್ತಿರುವುದನ್ನು ತಾವು ದಯಮಾಡಿ ಗಂಭೀರವಾಗಿ ತೆಗೆದುಕೊಳ್ಳಿ. ನೋಡಿ ಒಂದಲ್ಲ ಒಂದು, ಮೊನ್ನೆ ಒಂದು ಕಾರ್ಪೊರೇಷನ್‌ನಲ್ಲಿ ಸ್ಕ್ಯಾಂಡಲ್ ಬಗ್ಗೆ ಮಾತನಾಡಿದರು. ಅದನ್ನು ಕೇಳಿದರೆ ಹೆದರಿಕೆಯಾಗುತ್ತದೆ. ಅನೇಕ ಸ್ಕ್ಯಾಂಡಲ್‌ಗಳ ಬಗ್ಗೆ ಈ ರೀತಿಯಾಗಿ ಮಾತನಾಡುತ್ತಿದ್ದರೆ ಏನಪ್ಪ ನಾವು ಉಳಿಯುತ್ತೇವಾ, ಈ ದೇಶ ಉಳಿಯುತ್ತದಾ, ಈ ಸಮಾಜ ಉಳಿಯುತ್ತದೆಯೇ, ಎಂದು ನಿಮಗೂ ಹಾಗೂ ನಮಗೂ ಕೂಡ ಅನಿಸುತ್ತದೆ ಅಲ್ಲವೇ? ನಾನು ಓಪನ್ ಆಗಿ ಹೇಳುತ್ತಿದ್ದೇನೆ. ಆದರೆ ನೀವು ಹೇಳುತ್ತಿಲ್ಲ ಅಷ್ಟೇ.

ಶ್ರೀ ಸಿದ್ದರಾಮಯ್ಯ:- ನೀವು ಆ ಸ್ಥಾನದಲ್ಲಿ ಕುಳಿತುಕೊಂಡು ಏನು ಮಾಡಬೇಕೆಂದರೆ ಸರ್ಕಾರವನ್ನು ನಡೆಸುವವರಿಗೆ ಯಾರು ತಪ್ಪು ಮಾಡಿದ್ದಾರೆ ಅವರಿಗೆ ಜೈಲಿಗೆ ಕಳುಹಿಸಿ ಎಂದು ಹೇಳಿ.

ಅಧ್ಯಕ್ಷರು: ನೀವು ಕೂಡ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದೀರಲ್ಲಾ.

ಶ್ರೀ ಸಿದ್ದರಾಮಯ್ಯ:- ಸರ್ಕಾರವನ್ನು ನಡೆಸುವವರಿಗೆ ನೀವು ಜೈಲಿಗೆ ಕಳುಹಿಸಿ ಎಂದು ಹೇಳಿ. ಅವರ್ಯಾರು ಕಳ್ಳರು ಇದ್ದಾರೆ, ಯಾರ್‍ಯಾರು ತಿಂದಿದ್ದಾರೆ, ಅವರನ್ನು ಜೈಲಿಗೆ ಕಳುಹಿಸಿ ಎಂದು ಹೇಳಿ. ರಾಜಕಾರಣಿಗಳ ಕೆಳಗಡೆ ಇದ್ದರೆ ಅವರು ಕೂಡ ಜೈಲಿಗೆ ಹೋಗಲಿ.

(ಗೊಂದಲ)

ಅಧ್ಯಕ್ಷರು: ಈ ವ್ಯವಸ್ಥೆಯಲ್ಲಿ..... ಜೈಲಿಗೆ ಹೋದರೆ..

ಶ್ರೀ ಸಿದ್ದರಾಮಯ್ಯ:- ನಾನು ಏನಾದರೂ ಇದ್ದರೆ ನನ್ನನ್ನು ಕೂಡ ಜೈಲಿಗೆ ಕಳುಹಿಸುವುದೇ.

ಅಧ್ಯಕ್ಷರು: ಆಯಿತು ತಾವು ಮಾತನಾಡಿ.

ಡಾ|| ಎಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೆ ನಿಮಗೆ ಶಕ್ತಿ ಇದೆ, ಏಕೆಂದರೆ, ಒತ್ತುವರಿ ಜಮೀನುಗಳ ಪ್ರಕರಣದ ಬಗ್ಗೆ ಬಂದಾಗ ಸರ್ಕಾರಕ್ಕೆ ತಾಕತ್ತು ಇದ್ದರೆ ಮಾಡ್ರಿ ಎಂದು ಹೇಳಿದ್ದೀರಿ. ಅದೇ ರೀತಿಯಾಗಿ ಮಾಡಿ ಎಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಈ ವಿಚಾರದಲ್ಲಿ ನನ್ನದು ಅದೇನೆ.

ಶ್ರೀ ಸಿದ್ದರಾಮಯ್ಯ:- ನೀವು ಒಂದೊಂದು ಸಾರಿ ಒಂದೊಂದು ತರಹ ಆಗಿಬಿಡುತ್ತೀರಿ. ಏಕೋ ಗೊತ್ತಿಲ್ಲ. ಇದರಲ್ಲಿ ಏಕೋ ಸ್ವಲ್ಪ ಡೈಲ್ಯೂಟ್ ಆಗಿದೆ.

ಅಧ್ಯಕ್ಷರು: There is no dilute. ಏತಕ್ಕೆಂದರೆ ಎಲ್ಲಾ ಘಟಾನುಘಟಿಗಳು ಸಹ ಯಾವುದೋ ಒಂದು ಅಮೃತಘಳಿಗೆ ಎನ್ನುತ್ತಾರಲ್ಲಾ ಅದರಲ್ಲಿ ಕೆಳಗಡೆಗೆ ಬಿದ್ದು ಹೋಗಿ ಬಿಡುತ್ತಿದ್ದೀರಲ್ಲ? ಈ ವ್ಯವಸ್ಥೆ ಈ ರೀತಿಯಾಗಿ ಕುಸಿಯುವುದಕ್ಕೆ ಎಲ್ಲರೂ ಸಹ ಕಾರಣರಾಗುತ್ತಿದ್ದೀರಲ್ಲಾ.

ಶ್ರೀ ಸಿದ್ದರಾಮಯ್ಯ:- ತಾವು ಸ್ವಲ್ಪ ನೋವಿನಿಂದ ಹೇಳಿದ್ದೀರಿ.

ಅಧ್ಯಕ್ಷರು: ನೋವು ಏನು ಇಲ್ಲ.

ಶ್ರೀ ಸಿದ್ದರಾಮಯ್ಯ: In this issue, the Vice Chancellor has violated the law.

ಅಧ್ಯಕ್ಷರು: So many people......

ಶ್ರೀ ಸಿದ್ದರಾಮಯ್ಯ: No,No. I hope that you are convinced. ಪ್ರೇರಣೆಯನ್ನು ಹೇಳಬೇಕಲ್ಲವೆ. ನೀವು ಪ್ರೇರಣೆಯಿಂದ ಹೇಳುತ್ತಿದ್ದೀರಿ. I hope that you are convinced. He has violated the law.

ಶ್ರೀ ಎನ್. ಚೆಲುವರಾಯಸ್ವಾಮಿ (ಸಾರಿಗೆ ಸಚಿವರು): ಮಾನ್ಯ ಸಿದ್ದರಾಮಯ್ಯನವರೆ, ನೀವು ಅಷ್ಟೊಂದು ಅಧ್ಯಕ್ಷರ ಬಗ್ಗೆ hope ಇಟ್ಟುಕೊಳ್ಳಿ, ಈ ತರಹ ಆಗಬಾರದು ಎಂದು ಹೇಳುತ್ತಿದ್ದೀರಲ್ಲಾ, ಏತಕ್ಕಾಗಿ ಈ ರೀತಿಯಾಗಿದೆ ಎಂದರೆ ಇದು ಒಂದು ಸರ್ಕಾರ ನಡೆಸುವಂತಹದ್ದು, ಕಳೆದ 30 ವರ್ಷಗಳಲ್ಲಿ ಅವರ ಅನುಭವದಲ್ಲಿ ಅಲ್ಲಿರುವವರೆಲ್ಲರೂ ಇಲ್ಲಿ ಇದ್ದು ಹೋಗಿದ್ದಾರೆ. ಬಿಜೆಪಿಯವರು ಒಬ್ಬರು ಸಿಕ್ಕಿರಲಿಲ್ಲ, ಅವರಿಗೂ ಕೂಡ ಸಿಕ್ಕಿಬಿಟ್ಟಿದೆ. ಹಾಗಾಗಿ ಕಳೆದ 60 ವರ್ಷಗಳಲ್ಲಿಯೂ ಕೂಡ ಅವರ 30 ವರ್ಷದ ಅನುಭವದಲ್ಲಿ ಯಾರು ಹೋದಾಗಲೂ ಕೂಡ ಅಲ್ಲಿ ಹೋದಾಗ ಮಾತ್ರ ಸತ್ಯ ಹೇಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇಲ್ಲಿ ಬಂದಾಗ ಸತ್ಯವನ್ನು ಹೇಳುವುದಿಲ್ಲ ಎಂದು ಅವರಿಗೆ ನೋವಾಗಿದೆ.

ಶ್ರೀ ಸಿದ್ದರಾಮಯ್ಯ:- ನೀವು ಅದನ್ನೇ ಮಾಡುತ್ತೀರಾ? ನೀವು ಅದನ್ನು ಮಾಡುತ್ತಿದ್ದರೆ ಅದನ್ನು admit ಮಾಡಿಕೊಳ್ಳಬೇಕು. ಆ ಕಡೆ ಕುಳಿತುಕೊಂಡು ಸುಳ್ಳು ಹೇಳುತ್ತಿದ್ದೇರೆಂದು admit ಮಾಡಿಕೊಂಡರೆ ನಾನು ಒಪ್ಪಿಕೊಳ್ಳುತ್ತೇನೆ. Indirectly you are admitting that you are lying.

ಶ್ರೀ ಎನ್. ಚೆಲುವರಾಯಸ್ವಾಮಿ: ಆಶಾವಾದಿಯಾಗಿ.....

ಶ್ರೀ ಸಿದ್ದರಾಮಯ್ಯ: Do you agree with him? ಹೇಳುವ ತರಹ ಅಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಸಿದ್ದರಾಮಯ್ಯನವರೆ, ಮಾನ್ಯ ಜೆ.ಎಚ್.ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದಾಗ ನೀವು ಹಣಕಾಸಿನ ಮಂತ್ರಿಗಳಾಗಿದ್ದೀರಿ. ಜೆ.ಎಚ್.ಪಟೇಲ್‌ರವರು ಅಲ್ಲಿ ಕುಳಿತುಕೊಂಡು ಸತ್ಯವನ್ನೇ ಹೇಳುತ್ತಿದ್ದರು.

ಶ್ರೀ ಸಿದ್ದರಾಮಯ್ಯ: ನಾವು ಸಹ ಅಲ್ಲಿ ಕುಳಿತುಕೊಂಡು ಸತ್ಯವನ್ನೇ ಹೇಳುತ್ತಿದ್ದೆವು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸಿದ್ದರಾಮಯ್ಯನವರು ಸಹ ಹೇಳುತ್ತಿದ್ದರು.

ಶ್ರೀ ಸಿದ್ದರಾಮಯ್ಯ:- ನಮಗೆ ಹಾಗೆ ಅನ್ನಿಸುತ್ತದೆ. ನೀವು ನೋಡುವಂತಹ ದೃಷ್ಟಿ ಇದೆಯಲ್ಲಾ, ಅದು ನೋಡುವಂತಹದ್ದು, ಕಾಮಾಲೆ ಕಣ್ಣುಗಳಿಂದ ನೋಡಿದರೆ ಹಾಗೆ ಕಾಣಿಸುತ್ತದೆ, ಆಗ ನಾನೇನು ಮಾಡಲಿ. ಕಾಮಾಲೆ ಕಣ್ಣಿನಿಂದ ನೋಡುವವರಿಗೆ ನಾನು ಏನು ಮಾಡುವುದಕ್ಕಾಗುವುದಿಲ್ಲ. ಇದು ಬಹಳ ಗಂಭೀರವಾದಂತಹ ವಿಚಾರವಾಗಿದೆ. ನೀವು ಹೇಳುವುದು ಕೂಡ ಸರಿ ಇದೆ. ಎಲ್ಲಾ ಮೌಲ್ಯಗಳು ಕುಸಿಯುತ್ತಿರುವುದು, ಭ್ರಷ್ಟಾಚಾರಗಳು ವ್ಯಾಪಕವಾಗಿ ಆಗುತ್ತಿರುವುದು, ರಾಜಕಾರಣಿಗಳು, ಅಧಿಕಾರಿಗಳು ಎಲ್ಲಾ ಮಾಡುತ್ತಿದ್ದಾರೆನ್ನುವುದು ಇದೆಯಲ್ಲಾ, ನಿಮ್ಮ ಅನುಭವವನ್ನು ಹೇಳಿದಿರಿ, ಅದಕ್ಕೆ ಕಾರಣಗಳು ಏನು ಎಂಬುದರ ಬಗ್ಗೆ ಚರ್ಚೆ ಮಾಡೋಣ. ಅದು ಏನಾಗಿದೆ ಎಂಬುದು ಈಗ ಬೇಡ. ನಾವು ಏನು ಮಾಡುತ್ತಿದ್ದೇವೆಂದರೆ ಯಾವುದೋ ಕಾರಣಕ್ಕೆ ನಾವು ಅಧಿಕಾರಿಗಳಿಗೆ protection ಕೊಡುತ್ತಾ ಬಂದಿರುವುದು,ನಡೆದುಕೊಂಡು ಬಂದಿದೆ. ಜಾತಿಯ ಕಾರಣಕ್ಕೋ, ಅಥವಾ ಪ್ರಭಾವಿಗಳು ಎನ್ನುವ ಕಾರಣಕ್ಕೋ, ರಾಜಕೀಯವಾಗಿ ಬಲಿಷ್ಟರೆನ್ನುವ ಕಾರಣಕ್ಕೊ, ಇನ್ನ್ಯಾವುದೋ ಕಾರಣಕ್ಕಾಗಿ ಕೊಟ್ಟು ಕೊಂಡು ಬಂದಿದ್ದೇವೆ. ಹಾಗಾಗಿ ನಾವು ಸರಿಯಾಗಿ ಶಿಕ್ಷೆಯನ್ನು ಕೊಡುವುದಕ್ಕಾಗಲಿಲ್ಲ. ಅದಕ್ಕಾಗಿ ಈ ಕೇಸ್‌ನಿಂದ ಪ್ರಾರಂಭವಾಗಲಿ. ಈಗ ನೀವು ಇಲ್ಲಿ ಅಧ್ಯಕ್ಷರಾಗಿರುವಾಗ ಇಂತಹ ಕಾನೂನುಬಾಹಿರವಾಗಿರುವಂಥ ವಿಚಾರಗಳು ಬಂದಾಗ, ಅಕ್ರಮಗಳು ಬಂದಾಗ ಸ್ವಜನಪಕ್ಷಪಾತ ನಡೆದಾಗ, ಜಾತಿಗಳು ನಡೆದಾಗ ನೀವು ಅದನ್ನು ಬಿಡಕೂಡದು. ಅದಕ್ಕೆ ನೀವು ಸರ್ಕಾರಕ್ಕೆ ಹೇಳಬೇಕು. ಇದರ ಬಗ್ಗೆ ಒಂದು ಸರಿಯಾದಂತಹ ತನಿಖೆಯಾಗಬೇಕು. ಇದರ ಬಗ್ಗೆ Judicial Enquiry ಆಗಬೇಕು. ಅಲ್ಲಿಯವರೆಗೆ ಇವರು recruit ಮಾಡಿದ್ದಾರಲ್ಲ, ಇವೆಲ್ಲವನ್ನು set aside ಮಾಡಿ ಇವರೆಲ್ಲರನ್ನು ತೆಗೆದುಹಾಕಬೇಕು. ಇದನ್ನು ಮಾಡುವುದರಿಂದ ಹಿಂದುಳಿದವರಿಗೆ ಅನ್ಯಾಯವಾಗುತ್ತದೆ. ಇದನ್ನು abeyance ನಲ್ಲಿಡಿ. The orders may be kept in abeyance.

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) ಮಾನ್ಯ ಅಧ್ಯಕ್ಷರೆ, ತಾವು ಸಾಮಾಜಿಕ ನ್ಯಾಯದ ಬಗ್ಗೆ ಚೆನ್ನಾಗಿ ಮಾತನಾಡುತ್ತಿದ್ದೀರಿ. ಸಾಮಾಜಿಕ

ನ್ಯಾಯದ ಬಗ್ಗೆ ಎಲ್ಲರಿಗೂ ಅನ್ಯಾಯವಾಗುತ್ತಿದೆ, ಎಲ್ಲರಿಗೂ ನ್ಯಾಯವನ್ನು ಕೊಡಬೇಕೆಂದು correct ಆಗಿ ಹೇಳುತ್ತಿದ್ದಿರಿ. ಆದರೆ ನಿಮ್ಮ ಮೂಗಿನ ಕೆಳಗಡೆಯೇ ಸನ್ಮಾನ್ಯ ಮುಕುಡಪ್ಪನವರು ಇದ್ದಾಗ ಕೆಪಿಎಸ್‌ಸಿ ಒಳಗಡೆ ಯಾವ ರೀತಿಯಾಗಿ ಸಾಮಾಜಿಕ ನ್ಯಾಯವನ್ನು ಕೊಡಿಸಿದ್ದೀರೆಂದು ತಾವು ಹೇಳುತ್ತೀರಾ?

ಶ್ರೀ ಸಿದ್ದರಾಮಯ್ಯ: ನಾನು ಅದಕ್ಕೆ ಮೆಂಬರ್ ಆಗಿದ್ದೀನಾ?

ಶ್ರೀ ಡಿ.ಟಿ.ಜಯಕುಮಾರ್: ನೀವು ಮೆಂಬರ್ ಆಗಿಲ್ಲ. ಈಗ ನೀವು ವೈಸ್ ಚಾನ್ಸಲರ್ ಆಗಿದ್ದೀರಾ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇಷ್ಟೊಂದು ಅನ್ಯಾಯವನ್ನು ಮಾಡಿದ್ದಾರೆಂದು ಹೇಳುತ್ತಿರುವುದು. ಮುಕುಡಪ್ಪ ಮಾಡಿದ್ದರೆ ಅವನನ್ನು ನೇಣು ಹಾಕಿ.

ಶ್ರೀ ಡಿ.ಟಿ.ಜಯಕುಮಾರ್: ಅದರ ಬಗ್ಗೆ ನ್ಯಾಯ ಕೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಈಗಲೇ enquiry ಮಾಡಿ Initiate an enquiry. ಇವತ್ತು ಕೂಡ enquiry ಮಾಡಿ. ಅವರನ್ನು ಜೈಲಿಗೆ ಕಳುಹಿಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರನ್ನು ಜೈಲಿಗೆ ಕಳುಹಿಸಿ.

ಅಧ್ಯಕ್ಷರು:ಆಯಿತು.

(ಗೊಂದಲ)

ಶ್ರೀ ಸಿದ್ದರಾಮಯ್ಯ: I demand. ಆ ಕಾಲದಲ್ಲಿ ಯಾರ್ಯಾರಿಗೆ ಅನ್ಯಾಯವಾಗಿದೆ....

(ಗೊಂದಲ)

ಶ್ರೀ ಸಿದ್ದರಾಮಯ್ಯ: If you have got courage, ತಾಕತ್ತು ಇದ್ದರೆ ಮಾಡಬೇಕು. ಅವರನ್ನು ಸೇರಿಸಿ ಮಾಡಿ. ಮುಕುಡಪ್ಪ ಇರಲಿ,ಅವರಪ್ಪ ಇರಲಿ ಮಾಡಿ.

ಶ್ರೀ ಡಿ.ಟಿ.ಜಯಕುಮಾರ್: ಆ ಸತ್ಯ ಏನು ಎಂದು ಗೊತ್ತಿದೆ.

ಶ್ರೀ ಸಿದ್ದರಾಮಯ್ಯ: ನೋಡಿ, I am not going to defend anybody. I never defended anybody.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್: Fully knows.....

ಶ್ರೀ ಸಿದ್ದರಾಮಯ್ಯ: Enquire in to it. What are you doing as a Minister? ಹೀಗೆ ಬಾಯಿಗೆ ಬಂದಂತೆ ಮಾತನಾಡುವುದೇ?

ಶ್ರೀ ಡಿ.ಟಿ.ಜಯಕುಮಾರ್: ಬಾಯಿಗೆ ಬಂದಂತೆ ಮಾತನಾಡುತ್ತಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಆಗ ನೀವು ಎನು ಮಾಡುತ್ತಿದ್ರಿ? ಹೇಳಬೇಕಾಗಿತ್ತು. You are in Cabinet. What are you doing?

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: Initiate an enquiry. ಎಲ್ಲರೂ ಸೇರಿ ಅವತ್ತು ಯಾರ್‍ಯಾರೂ ಇದ್ದರು Public Service Commissionನಲ್ಲಿ ......

ಶ್ರೀ ಸಿದ್ದರಾಮಯ್ಯ: ಎಲ್ಲರನ್ನು ಸೇರಿ ಅವತ್ತು ಯಾರ್‍ಯಾರೂ ಇದ್ದರು Public Service Commissimnನಲ್ಲಿ enquiry ಮಾಡಿಸಿ. It is toomuch. ನೀವು ಸರ್ಕಾರದಲ್ಲಿದ್ದೀರಿ ಮಾಡಿ. ನಿಮಗೆ ದಮ್ಮಿದ್ದರೆ ಧೈರ್ಯವಿದ್ದರೆ ಈಗಲೇ enquiry ಆಗಲಿ. KPSC ಯಲ್ಲಿ ಯಾರ್‍ಯಾರೂ ಏನೇನು ಮಾಡಿದ್ದಾರೆ Including Mukudappa, icluding other members. ಮುಕುಡಪ್ಪ ಮಾಡಿದ್ದರೆ ಜೈಲಿಗೆ ಹೋಗಲಿ.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್:ಅವತ್ತು ಕೇಳಲಿಲ್ಲ, ಇವತ್ತು ಕೇಳುತ್ತಿದ್ದೀರಿ?

ಶ್ರೀ ಸಿದ್ದರಾಮಯ್ಯ:- ಹೌದು, ಇವತ್ತು ಕೇಳುತ್ತಿರುವುದರಿಂದ ನಾವು ಕೇಳುತ್ತಿರುವುದು. ಇವತ್ತು ಯೂನಿವರ್ಸಿಟಿಯ Vice Chancellor ಬಗ್ಗೆ ಕೇಳಬೇಕಾಗುತ್ತದೆ. ಅದಕ್ಕೆ ನೀನೇನು ಹೇಳುವುದು.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್: ಅವತ್ತು ಕೇಳುವುದಕ್ಕೆ ಬರುತ್ತಿರಲಿಲ್ಲ.

ಶ್ರೀ ಸಿದ್ದರಾಮಯ್ಯ: ಮುಕುಡಪ್ಪ ಮಾಡಿದ್ದರೆ ಜೈಲಿಗೆ ಹೋಗುತ್ತಾನೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ

ಶ್ರೀ ಸಿದ್ದರಾಮಯ್ಯ: What are you talking? How can he come in the way? No,no. It is not fair. What is this nonsense?

(ಗೊಂದಲ)

ಅಧ್ಯಕ್ಷರು: ದಯಮಾಡಿ ಮೊದಲು ಕುಳಿತುಕೊಳ್ಳುವುದನ್ನು ಕಲಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಿನಗೆ ದಮ್ಮಿದ್ದರೆ ಮಾಡು

ಒಬ್ಬ ಮಾನ್ಯ ಸದಸ್ಯರು: ಕೃಷ್ಣ, ಅವರ ಸಹದ್ಯೋಗಿಗಳು ಯಾರಿದ್ದಾರೆ ಇವರೆಲ್ಲರನ್ನು ಸೇರಿಸಿಕೊಂಡು ಮಾಡಿ. ಮುಕುಡಪ್ಪ ಒಬ್ಬನೇ ಏನು?

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನೀವು Minister ಇದ್ದೀರಿ ಮಾಡ್ರಿ. I demand, I demand ಕೃಷ್ಣರವರ ಕಾಲದಿಂದ ಮಾಡಿಸಿ. ಯಾರು ಏನು ಮಾಡಿದ್ದಾರೆ, ಅದು ಬರಲಿ. ಜೈಲಿಗೆ ಕಳುಹಿಸಿ. ರಾಜ್ಯ ಲೂಟಿ ಮಾಡುವುದಕ್ಕೆ ಅಲ್ಲ. PSC ಯಾರಪ್ಪನ ಮನೆಯದು ಅಲ್ಲ. No,no. Being a Minister ಚಿಲ್ಲರೆ ಎಲ್ಲಾ ಮಾತನಾಡುವುದಕ್ಕೆ ಹೋಗಬಾರದು.

ಶ್ರೀ ಜೆ.ಸಿ.ಮಾಧುಸ್ವಾಮಿ: ಇದು enquiry ಆಗಬೇಕು ಸರ್.

(ಗೊಂದಲ)

ಅಧ್ಯಕ್ಷರು: ನೀವೆಲ್ಲಾ ಮಾತನಾಡುತ್ತಿದ್ದೀರಿ, ಯಾವುದು ರೆಕಾರ್ಡ್‌ಗೆ ಹೋಗಬಾರದು.

ಶ್ರೀ ಸಿದ್ದರಾಮಯ್ಯ: ನೀನು ಏನು ತಿಳಿದುಕೊಂಡು ಬಿಟ್ಟಿದ್ದೀಯಾ? Minister ಏನು ಬೇಕಾದರೂ ಹೇಳಿಬಿಡಬಹುದಾ?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಇದಕ್ಕೆ ಒಂದು ಮುಕ್ತಾಯ ಮಾಡೋಣ.

ಅಧ್ಯಕ್ಷರು: ಈ ತರಹ ಮಾಡುವುದು ಸರಿಯಲ್ಲ, ಎಲ್ಲರೂ ಕುಳಿತು ಕೊಳ್ಳಿ. Parlimentary Minister ರವರು ಮಾತನಾಡುತ್ತಾರೆ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಏನು ಇದು ಹುಡುಗಾಟವೇ?

ಶ್ರೀ ಡಿ.ಟಿ.ಜಯಕುಮಾರ್: ಈ ಸತ್ಯ ಹೇಳುತ್ತಿದ್ದರೆ ಅದಕ್ಕಾಗಿ ನಾನು ಆ ಸತ್ಯವನ್ನು ಹೇಳಲಿ ಎಂದು ಹೇಳಿದೆನೇ ಹೊರತು ಬೇರೆ ಏನು ಹೇಳಿಲ್ಲ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ನಿಮ್ಮ ಜಾಗದಲ್ಲಿ ಕುಳಿತುಕೊಳ್ಳಿ. Opposition Leader ರವರು ಏನು ಹೇಳುತ್ತಿದ್ದಾರೆ ಕುಳಿತುಕೊಳ್ಳಿ.

ಶ್ರೀ ಎನ್. ಧರ್ಮಸಿಂಗ್: ಚರ್ಚೆಯಲ್ಲಿ personl level ನಲ್ಲಿ ಹೋಗುವುದಕ್ಕೆ ಅವಕಾಶ ಕಲ್ಪಿಸಿಕೊಡಬಾರದು. ಆ ತರಹ ಮಾತನಾಡಿದರೆ ಅದು ಸರಿಯಲ್ಲ. He is also a senior Minister He was Deputy Chief Minister holding Finance portfolio. ಇವತ್ತು ಸ್ವಾಭಿಮಾನಕ್ಕೆ ಧಕ್ಕೆ ಬರತಕ್ಕಂತಹ ರೀತಿಯಲ್ಲಿ ಅವರು ಹೇಳುತ್ತಿದ್ದಾರೆ. ಏನಾದರೂ ಇದ್ದರೆ enquiry ಆಗಲಿ ಎಂದು ಹೇಳುತ್ತಿದ್ದಾರೆ. ಇದಕ್ಕೆ ನೀವು ಅವಕಾಶ ಕಲ್ಪಿಸಿಕೊಡಬಾರದು. Personal level ನಲ್ಲಿ ಹೋಗತಕ್ಕಂತಹದ್ದಕ್ಕೆ you have to put a Cheek.

ಅಧ್ಯಕ್ಷರು: ಪ್ರತಿಯೊಬ್ಬರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಮಧ್ಯದಲ್ಲಿ ಏನು ಮಾತನಾಡಬಾರದು ಎಂದು ಅವರಿಗೆ ಹೇಳಬೇಕು. ಮಧ್ಯದಲ್ಲಿ ಏನು ಮಾತನಾಡಬೇಕೆಂದು ಪ್ರತಿಯೊಬ್ಬರು ಕೂಡ ಅರ್ಥಮಾಡಿಕೊಳ್ಳಬೇಕು.

ಶ್ರೀ ಧರ್ಮಸಿಂಗ್: They are the government. They are running the government. They have got greater responsibility.

ಅಧ್ಯಕ್ಷರು: ಏನು ಚುಚ್ಚತಕ್ಕಂತಹ ಮಾತುಗಳನ್ನು ಆಡುವಂತಹ ಅಗತ್ಯವಿಲ್ಲ.

ಶ್ರೀ ಧರ್ಮಸಿಂಗ್: ಅವರು ಮಾತನಾಡಬಾರದು.

ಅಧ್ಯಕ್ಷರು: ಅದನ್ನು ಒಪ್ಪುತ್ತೇನೆ.

ಶ್ರೀ ಧರ್ಮಸಿಂಗ್: ಚುಚ್ಚತಕ್ಕಂತಹ ಮಾತನ್ನು ಯಾರು ಆಡಿದ್ದಾರೆ? ಇವತ್ತು ಮಾಧಾಸ್ವಾಮಿಯರಾಗಲಿ, ಮತ್ತೆ ನಮ್ಮ ಸಿದ್ದರಾಮಯ್ಯನವರಾಗಲಿ ಅಲ್ಲಿ ನಡೆಯತಕ್ಕಂತಹದ್ದರ ಬಗ್ಗೆ ಮಾತನಾಡುತ್ತಿದ್ದಾರೆ. ಇವತ್ತು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಅದಕ್ಕೆ ತಾವು Parliamentary Affairs ಮಂತ್ರಿಗಳಾಗಿದ್ದೀರಿ, ಇಂಥದಕ್ಕೆ ನೀವು Personal level ದಲ್ಲಿ ಉತ್ತರ ಕೊಟ್ಟರೆ ಈ ಸಭೆ ಯಾವ ಕಡೆಗೆ ಹೋಗಬೇಕು? ಇದು ಸರಿಯಾದುದಲ್ಲ.

ಶ್ರೀ ಎಂ.ಪಿ. ಪ್ರಕಾಶ್: (ಗೃಹ ಮಂತ್ರಿಗಳು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಬಹಳ ಪ್ರಮುಖವಾಗಿರತಕ್ಕಂತಹ ವಿಷಯವನ್ನು ಚರ್ಚೆಗೆ ಎತ್ತಿಕೊಂಡಿದ್ದಾರೆ. ಅವು ಮಸೂದೆಗಳ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿ ಇದ್ದರು ಕೂಡ ಇದು ಬಹಳ ಪ್ರಮುಖವಾದಂತಹ ವಿಷಯವೆಂದು ಹೇಳಿ ಇದನ್ನು ಚರ್ಚೆಗೆ ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಬೆಳಕು ಚೆಲ್ಲುವಂತಹ ಸಂದರ್ಭದಲ್ಲಿ ಇದು ಒಂದು ವಿಷ ಗಳಿಗೆ ಎಂದು ಭಾವಿಸಬೇಕು.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ದಯವಿಟ್ಟು ನನ್ನ ಮುಂದಿನ ಮಾತುಗಳನ್ನು ತಾವು ಕೇಳಬೇಕು.

ಅಧ್ಯಕ್ಷರು: ಅವರು ಏನು ಹೇಳುತ್ತಾರೆ ಅದನ್ನು ಕೇಳಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಆಯಿತಪ್ಪಾ ಇದನ್ನು ಮುಕ್ತಾಯ ಮಾಡೋಣ ಅಥವಾ ಜಗಳವನ್ನು ಮಾಡಿಕೊಂಡು ಇರೋಣ. ಮುಂದಿನ ಮಾತುಗಳನ್ನು ತಾವು ದಯವಿಟ್ಟು ಕೇಳಿ. ಇದು ಒಂದು ವಿಷ ಗಳಿಗೆ ಎಂದು ನಾವು ಭಾವಿಸಬೇಕು. ಈ ಸಂದರ್ಭದಲ್ಲಿ ಬಹಳ ಪ್ರಮುಖವಾಗಿರುವಂತಹ ವಿಷಯಗಳು ಚರ್ಚೆಯಾಗುವಾಗ ಅನುಸಂಗಿಕವಾಗಿ ಅವರು ಮಾತನಾಡತಕ್ಕಂತಹದ್ದು ಸರಿ ಎಂದು ನಾನು ಕೂಡ ಅನ್ನುವುದಿಲ್ಲ. ಈ ವಿಚಾರದಲ್ಲಿ ನಾವು ಲೋಕಸೇವಾ ಆಯೋಗದ ವಿಚಾರಗಳನ್ನು ಇಲ್ಲಿ

ಚರ್ಚೆಗೆ ತರುವುದಕ್ಕಾಗುವುದಿಲ್ಲ. It is a body created by the Constitution. ಆದಕ್ಕೆ ಸರಿಯಾದಂತಹ ನೋಟಿಸ್ ಮತ್ತೊಂದು ವಿಚಾರವನ್ನು ಕೊಡಬೇಕಾಗುತ್ತದೆ. ಮುಕುಡಪ್ಪನೂ ಕೂಡ ಈ ಸದನದ ಸದಸ್ಯರಲ್ಲ. ಆದರೆ ಅವರ ಹೆಸರನ್ನು ಇಲ್ಲಿ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಕೂಡ ಯಾವುದೋ ಉದ್ರೇಕದ ಸಮಯದಲ್ಲಿ ಅಥವಾ ಸತ್ಯಸಂಗತಿ ಇರಲಿ ಎಂದು ಹೇಳಿರಬಹುದು.ನಾನು ಈ ಸಂದರ್ಭದಲ್ಲಿ ಇಷ್ಟು ಮಾತ್ರ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಕಲಾಪಗಳಲ್ಲಿ ಏನು ಆಗಿದೆ, ಅದನ್ನು ತಾವು ದಯವಿಟ್ಟು ಕಲಾಪದಿಂದ ತೆಗೆದು ಹಾಕಬೇಕು. ಮಾನ್ಯ ಸಿದ್ದರಾಮಯ್ಯನವರು ಇದನ್ನು ತಾವು ವೈಯಕ್ತಿಕವಾಗಿ ಅವರು ಹೇಳಿದರು ಎಂದು ಭಾವಿಸಿಕೊಳ್ಳದೇ ತಾವು ಉದ್ರೇಕ ಆಗಬಾರದು. ಆ ಕಾರಣಕ್ಕಾಗಿ ತಾವು ಮುಂದಿನ ಕಲಾಪವನ್ನು ನಡೆಸಿರಿ. I will request that it is expunged.

ಶ್ರೀ ಸಿದ್ದರಾಮಯ್ಯ:- ಮಾನ್ಯ ಪ್ರಕಾಶ್‌ರವರೆ, ಒಂದು ನಿಮಿಷ ತಾಳಿ.

ಶ್ರೀ ಸೋಮಣ್ಣ.ವಿ.: ಮಾನ್ಯ ಅಧ್ಯಕ್ಷರೆ, ನಾವು ಸಿದ್ದರಾಮಯ್ಯ ಸಾಹೇಬರು ಹಾಗೂ ತಾವೆಲ್ಲರೂ ಕೂಡ ವೃಂದಾ ಮತ್ತು ನೇಮಕಾತಿಯ ಬಗ್ಗೆ ಹೇಗಿರಬೇಕು. ದೇಶದ ಬಗ್ಗೆ ಇವತ್ತಿನ ಪರಿಸ್ಥಿತಿ ಏನು ಅವಲೋಕನ ಮಾಡಿ ಒಂದು ಬೆಳಕನ್ನು ಚೆಲ್ಲಿದ್ದೀರಿ, ಬೆಳಕನ್ನು ಚೆಲ್ಲುವಂತಹ ಸಂದರ್ಭದಲ್ಲಿ ಕರ್ನಾಟಕ ಲೋಕಸೇವಾ ಆಯೋಗ ತನ್ನದೆ ಆದಂತಹ ಸ್ವಾಯತ್ತತೆಯನ್ನು ಪಡೆದಿದೆ. ಅಲ್ಲಿ ಯಾರ್‍ಯಾರು ಇದ್ದಾರೆ, ಎನ್ನುವುದಕ್ಕಿಂತ ಹೆಚ್ಚಾಗಿ ಈ ಮನೆಯ ಸದಸ್ಯರಲ್ಲದ ಮಾನ್ಯ ಸದಸ್ಯರನ್ನು ಒಬ್ಬ ಮಾಜಿ ಉಪಮುಖ್ಯಮಂತ್ರಿಗಳು ಮಾತನಾಡುವಾಗ ಅವರು ನಮ್ಮ ಕಡೆಯವರು ಎಂದು ಹೇಳುವಂಥ ಗಂಭೀರವಾದಂತಹ ಆರೋಪವನ್ನು ಮಾಡುವಂತಹ ಒಬ್ಬ ಸಚಿವರು ಈ ಮಟ್ಟಕ್ಕೆ ನಡೆದಾಗ ಇದು previlage ಆಗುತ್ತದೆ. ದಯಮಾಡಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು previlage Committee ಗೆ ಕಳುಹಿಸಿ ಕೊಡಿ, ಇದರ ಬಗ್ಗೆ ಕೂಲಂಕುಷವಾಗಿ ತನಿಖೆಯಾಗಬೇಕಾಗುತ್ತದೆ. ಆ ಒಂದು ಲೋಕಸೇವಾ ಆಯೋಗದ ವ್ಯವಸ್ಥೆಯನ್ನು ಈ ಮನೆಯಲ್ಲಿ ತರಬೇಕಾದರೆ ತನ್ನದೇ ಆದ ಕಾನೂನಿನ ಅಡಿಯಲ್ಲಿ ತರಬೇಕಾಗುತ್ತದೆ ವಿನಹ ಯಾರ ಉದ್ದೇಶಕ್ಕೋಸ್ಕರವಾಗಿ ಯಾರನ್ನು ತೃಪ್ತಿಪಡಿಸುವುದಕ್ಕೋಸ್ಕರ ಇಂತಹ ಗುರುತರವಾದ ಆಪಾದನೆಗಳನ್ನು ಇನ್ನೊಬ್ಬರ ಮೇಲೆ ಮಾಡುವುದು ಅಕ್ರಮ ಅಪರಾಧವಾಗುತ್ತದೆ. ಮಾನ್ಯ ಡಿ.ಟಿ.ಜಯಕುಮಾರ್‌ರವರು ಹೊಸ ಸದಸ್ಯರು

ಏನೂ ಅಲ್ಲ. ವ್ಯವಸ್ಥೆಗಳಿಗೆ ಅಂಟಿಕೊಂಡಿರತಕ್ಕಂಥವರು ಈ ರೀತಿ ಮಾತನಾಡಬಾರದು.

(ಗೊಂದಲ)

ಅಧ್ಯಕ್ಷರು: Parliamentary Affairs Minister ಮಾತನಾಡುತ್ತಾರೆ.

(ಗೊಂದಲ)

ಶ್ರೀ ಎಚ್.ಸಿ.ಬಾಲಕೃಷ್ಣ; ಸನ್ಮಾನ್ಯ ಅಧ್ಯಕ್ಷರೇ, ಅನಾವಶ್ಯಕವಾಗಿ ಕೃಷ್ಣ ಅವರ ಹೆಸರನ್ನು ಅವರು ಬಳಸಿದ್ದಾರೆ, ಆಗ ಅದು ಪ್ರಿವಿಲೇಜ್ ಆಗುವುದಿಲ್ಲವೇ? ಒಂದಕ್ಕೊಂದು ಹೀಗೆ ಬೆಳೆಯುತ್ತಿದೆ ವಿನಃ ಇದು ಮುಕ್ತಾಯವಾಗುವುದಿಲ್ಲ.

ಶ್ರೀ ವಿ. ಸೋಮಣ್ಣ.: ಸಚಿವರಾಗಿ ಅವರು ಆ ರೀತಿ ಮಾತನಾಡಬಾರದು.

ಅಧ್ಯಕ್ಷರು: ಎಲ್ಲಾ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಿ. ಸೋಮಣ್ಣ : ಸನ್ಮಾನ್ಯ ಅಧ್ಯಕ್ಷರೇ, ನೀವು ಮಂತ್ರಿಯಾಗಿ ಆ ರೀತಿ ಮಾತನಾಡಬಾರದು, I am sorry, ನಮ್ಮ ಘನತೆ, ನಮ್ಮ ವ್ಯಕ್ತಿತ್ವಕ್ಕೆ ಸರಿಯಲ್ಲ ಆ ಮಾತು. ಆ ರೀತಿ ಮಾತನಾಡಬಾರದು. ನೀವು ಮಾತನಾಡುವುದೇನಿದ್ದರೂ ಎರಡು ವರ್ಷವಾದರೆ ಚುನಾವಣೆ ಬರುತ್ತದೆ. ಆಗ ನೇರವಾಗಿ ಮಾತನಾಡಿಕೊಳ್ಳಿ. ಮಾನ್ಯ ಅಧ್ಯಕ್ಷರೇ, previlage move ಮಾಡಿ. previlJge Committee ಗೆ ಕಳುಹಿಸಬೇಕು.

ಶ್ರೀ ಎಚ್.ಸಿ.ಬಾಲಕೃಷ್ಣ; (ಗೊಂದಲ) ಮಾನ್ಯ ಅಧ್ಯಕ್ಷರೇ, ಇಂತಹ ಅನೇಕ ವಿಷಯಗಳು ಈ ಸದನದಲ್ಲಿ ಚರ್ಚೆಯಾಗಿದೆ, ಶ್ರೀ ಎಂ.ಪಿ. ಪ್ರಕಾಶ್‌ರವರು ಆ ವಿಚಾರದಲ್ಲಿ ಮಾತನಾಡಿದ್ದಾರೆ, ದಯಮಾಡಿ ಅದನ್ನು ಮರೆತು ಮುಂದಕ್ಕೆ ಕಲಾಪ ನಡೆಸಬೆಕು.

ಅಧ್ಯಕ್ಷರು: ದಯಮಾಡಿ ಈಗೇನಾಗಿದೆ, ನಾನೇ ಮಧ್ಯದಲ್ಲಿ ತಮಾಷೆಯಾಗಿ ಕೆಲವು ವಿಚಾರಗಳನ್ನು ಹೇಳಿದ್ದೇನೆ. ಇರತಕ್ಕಂಥ ಸಂಗತಿಗಳು, ತಾವು ಒಪ್ಪಿಕೊಂಡಿದ್ದೀರಿ. ಈಗ ಅವೆಲ್ಲಾ ಕುಸಿಯುತ್ತಿದೆ. ಈಗ ಯಾರೇ ಆಗಲಿ, ದಯಮಾಡಿ ಯಾರೋ ಅವರ ಸುತ್ತ ಇರತಕ್ಕಂಥವರು, ಅವರ

ಹಿಂಬಾಲಕರಾಗಿದ್ದಂಥವರು, ಅವರೆಲ್ಲಾ ಆ ತರಹ ಮಾತನಾಡುವುದಿಲ್ಲ, ಹಾಗೇ ನೋಡಿದರೆ ಅನೇಕ ಜನ ಅಧಿಕಾರದಲ್ಲಿರುವ ಹಿಂಬಾಲಕರೆಲ್ಲಾ ಸರಿಯಿದ್ದಾರೆಯೇ? ಅವರಿಗೆ ಗೊತ್ತೇ, ಎಷ್ಟೋ ಸಾರಿ ಅವರಿಗೆ ಗೊತ್ತಿರುವುದಿಲ್ಲ. ವ್ಯವಸ್ಥೆ ಕುಸಿದು ಬಿಟ್ಟಿದೆ, ಯಾರನ್ನು ಇವತ್ತು ಅವರು ಸರಿಯಾಗಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ ಎನ್ನುವಂಥ ಕಾಲದಲ್ಲಿ ನಾವಿದ್ದೇವೆ. ಯಾರು ಸರಿಯಲ್ಲವೆಂದು, ಸರಿ ಇದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಆ ಕಾಲದಲ್ಲಿ ನಾವಿದ್ದೇವೆ. ಅಂಥ ಸ್ಥಿತಿಯಲ್ಲಿ ಸುಮ್ಮನೆ ಹಾಗೆ, ಹೀಗೆ ಮಾತನಾಡುವುದು ಗೌರವವಲ್ಲ.ಹಾಗಾಗಿ ರಾಜಕೀಯ ಮಾಡುವುದು ಬೇಡ. ಗಂಭೀರವಾದ ಪ್ರಶ್ನೆ ಪ್ರಸ್ತಾಪ ಮಾಡುತ್ತಿದ್ದಾರೆ, ಅಲ್ಲಿ ಕಾನೂನು ಬಾಹಿರವಾಗಿ ನೇಮಕಾತಿಗಳಾಗಿವೆ ಎಂದು ಹೇಳುತ್ತಿದ್ದಾರೆ, ಅದರ ಬಗ್ಗೆ ಏನಾದರು ಇದ್ದರೆ ಹೇಳಿ. ಅದು ಬಿಟ್ಟು ಸುಮ್ಮನೆ ಅದು ಇದು ಮಾತನಾಡುವುದು ಬೇಡ, ನಾವೆಲ್ಲಾ ಪ್ರಪಾತದಲ್ಲಿದ್ದೇವೆ. ನಮ್ಮ ಕುತ್ತಿಗೆ ಮಟ್ಟದವರೆಗೆ ಬಂದಿದೆ, ಯಾವಾಗ ನಾವೆಲ್ಲಾ ಮುಳುಗಿ ಹೋಗುತ್ತೇವೋ ಗೊತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರದ ಮೇಲೆ ಕೂಡ ಆರೋಪ ಮಾಡಿರಲಿಲ್ಲ ಅಥವಾ ಜಯಕುಮಾರ್ ಮೇಲೆಯೂ ಆರೋಪ ಮಾಡಿರಲಿಲ್ಲ. ಯಾರ ಮೇಲೆಯೂ ಕೂಡ ಆರೋಪ ಮಾಡಿರಲಿಲ್ಲ, ಅವ್ಯವಹಾರ ಅಲ್ಲಿ ನಡೆದಿದೆ, ಕಾನೂನು ಬಾಹಿರ ನಡೆಯುತ್ತಿದೆ, ಸ್ವಜನ ಪಕ್ಷಪಾತ ನಡೆಯುತ್ತಿದೆ ಎಂದು ಹೇಳಿದರೆ ಇವರಿಗೆ ಪ್ರಚೋದನೆ ಏನು? ಪ್ರಚೋದನೆ ಏನು? Merly because that former PSC member happened to be my community man, he wanted to make allegation against me. ಆಲ್ಲಿದ್ದಾಗ ಏನು ಮಾತನಾಡಿರಲಿಲ್ಲ. ಅಲ್ಲಿದ್ದಾಗ allegation ಮಾಡಿದ್ದಿರಾ? Did I defend him? ಮುಕುಡಪ್ಪ ಅಲ್ಲಿದ್ದಾಗ ನೀವು allegation ಮಾಡಿದ್ದಿರಾ? Has anybody raised allegation against him? Did I defend him here, in the House? ನನ್ನ ಜೀವನದಲ್ಲಿ, ನನ್ನ ಅಧಿಕಾರದಲ್ಲಿರತಕ್ಕಂಥ ವ್ಯಾಪ್ತಿಯೊಳಗೆ, ನಾನು ಯಾವ್ಯಾವ ಕಾಲದಲ್ಲಿ ಮಂತ್ರಿ ಪದವಿ ಹೊಂದಿದ್ದೇನೆ, ಆಗ ನಾನು ಸ್ವಜನ ಪಕ್ಷಪಾತ ಮಾಡಿದ್ದರೆ, ಜಾತಿಯತೆ ಮಾಡಿದ್ದರೆ ಒಂದು ನಿಮಿಷ ನಾನು ಸಾರ್ವಜನಿಕ ಜೀವನದಲ್ಲಿ ಉಳಿಯುವುದಿಲ್ಲ, ಒಂದೆ ಒಂದು ಸೆಕೆಂಡ್ ನಾನಿರುವುದಿಲ್ಲ. ಪ್ರಮೋಷನ್ ಕೊಡುವುದು ಇರಬಹುದು, appointment ಕೊಡುವುದು ಇರಬಹುದು ಅಥವಾ ಇನ್ನಾವುದೇ transfer ಮಾಡುವುದಿರಬಹುದು, ಒಂದೇ ಒಂದು ಮಾಡಿದ್ದರೆ ತೋರಿಸಿ, Commercial Tax Department ನಿಂದ

ರೆಕಾರ್ಡ್ ತರಿಸಿ. ಯಾರ್‍ಯಾರಿಗೆ ನಾವು appointment, postings ಕೊಟ್ಟಿದ್ದೇವೆಂದು ತೋರಿಸಿ. ಒಬ್ಬ Minister ಆಗಿ ಜವಾಬ್ದಾರಿಯಿಂದ ಮಾತನಾಡುವುದನ್ನು ಕಲಿಯಬೇಕು. ಯಾವ ಸಂದರ್ಭ ಅದು? ಏನು ಸಂದರ್ಭದಲ್ಲಿ ಹೇಳಿದಿರಿ, ಈಗ ಅವರು ಸದಸ್ಯರಾಗಿದ್ದಾರೆಯೇ? ಆಗ ನೀನು ಕತ್ತೆ ಕಾಯುತ್ತಿದ್ದೇನು? What were you doing?

ಶ್ರೀ ಡಿ.ಟಿ.ಜಯಕುಮಾರ್: ಮಾಡಿ, I demand enquiry. ಈಗ ಏನು ಮಾಡಿಲ್ಲ ತಾನೇ, ಅವತ್ತಿನಿಂದ enquiry ಮಾಡಿ.

ಶ್ರೀ ಸಿದ್ದರಾಮಯ್ಯ:- ಮಾಡಿ Prakash I demand enquiry. ಕೆ.ಪಿ.ಎಸ್.ಸಿ.ಯಲ್ಲಿ ಮುಕುಡಪ್ಪ ಯಾವಾಗ ಸದಸ್ಯರಾಗಿದ್ದರು? ಅವತ್ತಿನಿಂದ ಇವತ್ತಿನವರೆಗೆ ಏನೇನು ಅವ್ಯವಹಾರವಾಗಿದೆ, ಅವೆಲ್ಲವೂ ಕೂಡ ಸಿ.ಬಿ.ಐ ಗೆ ಕೊಡಿ. You are in the Government.

ಶ್ರೀ ಡಿ.ಟಿ.ಜಯಕುಮಾರ್: I am asking. I am requesting.

ಶ್ರೀ ಸಿದ್ದರಾಮಯ್ಯ:- You resign from the House. You resign. You are the most irresponsible fellow. You have no moral right to continue as Minister, ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್: ಮತ್ತೆ ನೋಡಿ ಹೇಗೆ ಮಾತನಾಡುತ್ತಾರೆ, ನನ್ನ ಕ್ಷೇತ್ರದಲ್ಲಿ ನೀವಿದ್ದಾಗಲೇ ಮಾಡಿದ್ದೀರಿ, enquiry ಮಾಡಿಸಿ. ಈಗ enquiry ಆಗಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ ಮರ್ಯಾದೆ ಏನು ನಿಮಗೆ ಇಲ್ಲ.

ಅಧ್ಯಕ್ಷರು: ಕುಳಿತುಕೊಳ್ಳಿ ದಯಮಾಡಿ, ನಾನು ಎಲ್ಲಾ ನೋಡಿ ಕಡತದಿಂದ ತೆಗೆಸುತ್ತೇನೆ, ಏನಾಗಿದೆಯೆಂದರೆ ಮೊನಚಾಗಿ ಮಾತನಾಡುವುದಾಗಲಿ, ರಾಜಕೀಯ ದ್ವೇಷದಿಂದ ಮಾತನಾಡುವುದಾಗಲಿ, ಈ ಸಭೆಯಲ್ಲಿ ಅದನ್ನೆಲ್ಲಾ ಮಾಡಬೇಡಿ. ಹೊರಗಡೆ ನಮಗೆ ಬೇಕಾದಷ್ಟು ಅಖಾಡಗಳು ಇವೆ, ಏನು ಬೇಕಾದರೂ ಮಾಡಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: Sir, we will put an end for all this things. ಮಾನ್ಯ ಅಧ್ಯಕ್ಷರೇ, ಕಡತದಿಂದ ಇದನ್ನೆಲ್ಲಾ ತೆಗೆಸಬೇಕು.

ಶ್ರೀ ಸಿದ್ದರಾಮಯ್ಯ:- No, you cant take it lightly. ಇದನ್ನೆಲ್ಲಾ ಇಷ್ಟು ಹಗುರವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಪ್ರಕಾಶ್‌ರವರೇ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೇ, ದಯಮಾಡಿ ಇದನ್ನೆಲ್ಲ ಕಡತದಿಂದ ತೆಗೆಸಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ: I am very sorry. Dilute ಮಾಡಲಿಕ್ಕೆ ಮಿನಿಸ್ಟರ್‌ಗಳಿರಬೇಕು.

ಶ್ರೀ ಎಂ.ಪಿ. ಪ್ರಕಾಶ್: ಅದಕ್ಕಾಗಿಯೇ ನೀವು ಸದಸ್ಯರಾಗಿರುವಿರಾ? ಯಾವ್ಯಾವ ಸಂದರ್ಭದಲ್ಲಿ ಸದನ ಹೇಗೆ ನಡೆಯಬೇಕು. ಎನ್ನುವುದಕ್ಕೆ ಎಲ್ಲದಕ್ಕೂ ನೀವು aggressive ಆಗಿರುತ್ತೀರಾ?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವು ಹಾಗೆ ಮಾತನಾಡಲಿಲ್ಲ. ನಾವೇನು aggressive ಆಗಿಲ್ಲ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಸದನದ ಕಾರ್ಯಕಲಾಪಗಳು ನಡೆಯಬೇಕಾದರೆ ಅದನ್ನು ಮುಕ್ತಾಯಗೊಳಿಸಲಿಕ್ಕೆ ಒಂದು ಶಾಂತಿ ಸೂತ್ರವನ್ನು ತರಬೇಕಾಗುತ್ತದೆ. diluting ಅಲ್ಲ. I also said that allegations made are not unfounded. ಇದು ಸರಿಯಲ್ಲವೆಂದು ಹೇಳಿದೆ, ಇದು dilute ಹೇಗಾಗುತ್ತದೆ.

(ಗೊಂದಲ)

ಶ್ರೀ ಜೆ.‥.ಮಾಧುಸ್ವಾಮಿ:ನಾನು ನಿಮಗೆ ಹೇಳಲಿಲ್ಲ, ಅವರು dilute ಮಾಡುತಿದ್ದಾರೆಂದು ಸಚಿವರಿಗೆ ಹೇಳಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್: ನೀವು dilute ಮಾಡುವುದಾಗಿ ನನಗೆ ಹೇಳುತ್ತಿದ್ದೀರಿ.

ಶ್ರೀ ಜೆ.ಸಿ.ಮಾಧುಸ್ವಾಮಿ: No, No, ನಾನು ನಮಗೆ ಹೇಳಲಿಲ್ಲ. ನೋಡಿ ಹೀಗೆ ನೀವು ಮಾತನಾಡಬಾರದು.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: I am very sorry, ಪ್ರಕಾಶ್‌ರವರೇ ನಾನು ನಮಗೆ ಹೇಳಿಲ್ಲ, ಅವರು ಏತಕ್ಕೆ dilute ಮಾಡಿದರು ಎಂದು ಅವರಿಗೆ ಕೇಳಿದೆ.

ಅಧ್ಯಕ್ಷರು: ಆಯಿತು, ಬಿಡಿ. ಅವರು ಹೇಳುತ್ತಾರೆ. ಬಿಡಿ.

(ಗೊಂದಲ)

ಶ್ರೀ ಎನ್.ಧರ್ಮಸಿಂಗ್:- ಅವರು ಏತಕ್ಕೆ ಮಧ್ಯದಲ್ಲಿ ಮಾತನಾಡುತ್ತಾರೆ. ಒಬ್ಬ ಮಂತ್ರಿಯಾಗಿ ಅವರು ಈ ರೀತಿ ಏತಕ್ಕೆ ಮಾತನಾಡುತ್ತಾರೆ?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಮಧ್ಯ ಪ್ರವೇಶ ಮಾಡಿ ಗುರುತರವಾದ ವಿಚಾರಗಳನ್ನು ಪ್ರಸ್ತಾಪ ಮಾಡುವಂತಹ ಸಂದರ್ಭದಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಿದುದು ಸರಿಯಾದುದಲ್ಲ, ಆ ವಿಚಾರದಲ್ಲಿ ಅವರು ಆಡಿದ ಮಾತುಗಳು, ಸದಸ್ಯರಲ್ಲದೆ ಇರತಕ್ಕಂಥ ಮುಕುಡಪ್ಪನವರ ಹೆಸರನ್ನು ಪ್ರಸ್ತಾಪ ಮಾಡಿದುದು ಸರಿಯಾದುದಲ್ಲ, ಆದ್ದರಿಂದ ಅದನ್ನು ಕಡತದಿಂದ ತೆಗೆಸಬೇಕು. ಈಗಲೂ ಸಹ ನಾನು ಮಾನ್ಯ ಮಾಧುಸ್ವಾಮಿ, ಸಿದ್ದರಾಮಯ್ಯನವರಿಗೆ ಹೇಳುವುದು, ಹಾಗೂ ಅವರನ್ನು ವಿನಂತಿಸುವುದು ಇಷ್ಟೇ, ಯಾವುದೋ ಒಂದೊಂದು ಸಂದರ್ಭಗಳಲ್ಲಿ ಉದ್ರೇಕವಾಗಿ ಮಾತನಾಡುವುದು ಭಾವನೆಗಳಿಗೆ ತೊಂದರೆಯಾಗುವುದು ಬರುತ್ತದೆ, ಆದರೆ ಸದನದ ಕಲಾಪಗಳು ಮುಕ್ತಾಯವಾಗಬೇಕೆನ್ನುವ ಕಾರಣಕ್ಕಾಗಿ ಯಾವ ಉದ್ದೇಶಕ್ಕಾಗಿ ಇದನ್ನು ಪ್ರಶ್ನೆ ಮಾಡಿದಿರಿ? ಇದು ಒಂದು ತಾರ್ಕಿಕ ಹಂತವನ್ನು ಮುಟ್ಟಬೇಕಲ್ಲವೇ? ಅದು enquiry ಆಗಬೇಕು, ಮತ್ತೊಂದು ಸರ್ಕಾರದಿಂದ ಆಗಬೇಕು. ಆದ್ದರಿಂದ ಇದನ್ನು ಇಲ್ಲಿಗೆ ಮರೆತು ಕಡತದಿಂದ ತೆಗೆದು ಹಾಕಿ ಮುಂದೆ ನಾವು ಕೂಡ ಜವಾಬ್ದಾರಿಯಿಂದ ನಡೆದುಕೊಳ್ಳುವ ರೀತಿಯಲ್ಲಿ ನಾವು ಎಲ್ಲರೂ ಕೂಡಿ ಇದರ ಬಗ್ಗೆ ಮಾತನಾಡುತ್ತೇವೆ. ದಯವಿಟ್ಟು ಇದನ್ನು ಇಲ್ಲಿಗೆ ಮುಕ್ತಾಯಗೊಳಿಸಿ, ಸದನದ ಕಲಾಪವನ್ನು ಮುಂದುವರೆಸಿ.

ಶ್ರೀ ಸಿದ್ದರಾಮಯ್ಯ:- ನಾನು ಯಾರ ಮೇಲೆಯೂ ವೈಯಕ್ತಿಕವಾಗಿ ಆರೋಪ ಮಾಡಲಿಕ್ಕೆ ಹೋಗಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: You have made it very clear. ತಾವು provoke ಆಗುವಂಥ ಸಂದರ್ಭ ಇರಲಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ದಯವಿಟ್ಟು ತಾವು ಮುಂದುವರೆಸಿ. Please leave it at that.

ಶ್ರೀ ಸಿದ್ದರಾಮಯ್ಯ:- ಯಾರನ್ನೋ ಖುಷಿ ಪಡಿಸಲಿಕ್ಕೆ, ಯಾರನ್ನೋ ಸಂತೋಷಪಡಿಸಲಿಕ್ಕೆ ಏನು ಮಾಡುವುದಿಲ್ಲ. ಏನು ಖುಷಿ ಪಡಿಸಿದರು ಏನೂ ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಅವರಿಗೂ ಸಹ ಅಂಥ ಉದ್ದೇಶವೇನು ಇಲ್ಲ.

ಶ್ರೀ ಬಸವರಾಜ್ ಎಸ್.ಹೊರಟ್ಟಿ:- ದಯಮಾಡಿ ತಾವು ಮೈಸೂರು ವಿಶ್ವವಿದ್ಯಾನಲಯಕ್ಕೆ ಬನ್ನಿ.

ಶ್ರೀ ಸಿದ್ದರಾಮಯ್ಯ:- ನಿಮಗೆ ಈ ರೀತಿ ಹೇಳಿದರೆ ನೀವು ಸುಮ್ಮನಿರುವಿರಾ?

ಶ್ರೀ ಬಸವರಾಜ್ ಎಸ್.ಹೊರಟ್ಟಿ:- ಇರಲಿ, ದಯಮಾಡಿ ಇದನ್ನು ಬೆಳೆಸುವುದು ಬೇಡ, ಪ್ರಕಾಶ್‌ರವರು ಹೇಳಿದ್ದಾರೆ.

ಅಧ್ಯಕ್ಷರು: ಸಿದ್ದರಾಮಯ್ಯನವರೇ ಮಾತನಾಡಿ.

ಶ್ರೀ ಸಿದ್ದರಾಮಯ್ಯ:- ನಾವೆಲ್ಲಾ ಮಾನ ಮರ್ಯಾದೆ ಇಟ್ಟುಕೊಂಡು ಬಂದಿರುವುದು ಈ ಸದನಕ್ಕೆ.

ಅಧ್ಯಕ್ಷರು: ಜಯಕುಮಾರ್ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಡಿ.ಟಿ.ಜಯಕುಮಾರ್: ನೀವು ಕಾಂಗ್ರೆಸ್‌ನವರನ್ನು ಖುಷಿ ಪಡಿಸಲಿಕ್ಕೆ ಮಾತನಾಡಲಿಕ್ಕೆ ಬಂದಿರುವುದು.

ಶ್ರೀ ಸಿದ್ದರಾಮಯ್ಯ:- ನಿನ್ನ ಖುಷಿ ಪಡಿಸಲಿಕ್ಕೆ ಕುಳಿತುಕೊಳ್ಳಿ

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್: ಅಧ್ಯಕ್ಷರೇ, ಅವರು ಮಾತನಾಡುತ್ತಿದ್ದರೆ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಆತ್ಮಾಭಿಮಾನ ನಮಗೆ ಮುಖ್ಯ.

(ಗೊಂದಲ)

ಅಧ್ಯಕ್ಷರು: ಈಗ ಮುಕ್ತಾಯದ ಹಂತದಲ್ಲಿರುವಾಗ ಎಲ್ಲಾ ನಿಂತುಕೊಂಡರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ:- Where was the necessity? Where was the necessity? ಮುಕುಡಪ್ಪನವರ ಹೆಸರು ತೆಗೆಯಲಿಕ್ಕೆ ಏನು ಕಾರಣ?

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಅಧ್ಯಕ್ಷರೇ, ಅವರು ಹೀಗೆ ಮಾತನಾಡುತ್ತಿದ್ದರೆ ತಾವು ನನಗೆ ಈ ಸಂದರ್ಭದಲ್ಲಿ ನೀವು ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಶ್ರೀ ಸಿದ್ದರಾಮಯ್ಯ:- This is not correct. You advise him properly. Advise him properly.

(ಗೊಂದಲ)

ಅಧ್ಯಕ್ಷರು: ಕೇಳಿ. ನೀವು ಈ ರೀತಿ ಗಲಾಟೆ ಮಾಡಿದರೆ ಹೇಗೆ? ಸದನದ ಕಲಾಪಕ್ಕೆ ಭಂಗ ಬರುವ ರೀತಿಯಲ್ಲಿ ಮಾತನಾಡಿದರೆ ಹೇಗೆ?

(ಗೊಂದಲ)

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಅಧ್ಯಕ್ಷರೇ, ನೀವು ಸದನ ನಡೆಯಬೇಕೆಂದು ಹೇಳುತ್ತೀರಿ, ಸಹಕಾರ ಬೇಕು ಎಂದು ಹೇಳುತ್ತೀರಿ, ಅಲ್ಲಿ ಡಿ.ಟಿ.ಜಯಕುಮಾರ್‌ರವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೀರಿ. It was unwarranted. ಏಕೆ ಅವರು ಹಾಗೆ ಮಾತನಾಡಬೇಕಿತ್ತು? ಅವರಿಗೂ ಅವಕಾಶ ಕೊಡಿ.

(ಗೊಂದಲ)

ಶ್ರೀ ಡಿ.ಟಿ.ಜಯಕುಮಾರ್: ಅವರು ಹಾಗೆ ಮಾತನಾಡಬಹುದೆ?

ಅಧ್ಯಕ್ಷರು: ಅವರು ಏನು ಮಾತನಾಡುತ್ತಾರೆ?

ಶ್ರೀ ಸಿದ್ದರಾಮಯ್ಯ:- ಕೊಡಿ, ಅವರಿಗೂ ಅವಕಾಶ ಕೊಡಿ, ಅವರೇನು ಮಾತನಾಡುತ್ತಾರೋ ನೋಡೋಣ. ಅವರಿಗೂ ಅವಕಾಶ ಕೊಡಿ.

(ಗೊಂದಲ)

ಶ್ರೀ ಮಹದೇವ್: ನಾನು ಮಾತನಾಡುವುದು ಹೀಗೆ, ನಮ್ಮ ಲೀಡರ್ ಹತ್ತಿರ Poision bottle ಹಿಡಿದುಕೊಂಡು ಬಂದು ಮಂತ್ರಿಯಾದವರು ಅವರು, ಈಗ ಮಾತನಾಡುತ್ತಾರೆ.

ಶ್ರೀ ಮಹದೇವ್: ಅವರ ಬಾಯಿ ಮುಚ್ಚಿಸಿ ಮೊದಲು.

ಅಧ್ಯಕ್ಷರು: ಈಗ ನೀವು ಪರಸ್ಪರ ಇವರ ಪರ, ಅವರ ಪರ ಎಂದರೆ ನಿಮಗೇನೂ ಮೆಡಲ್ ಕೊಡುವುದಿಲ್ಲ ಗೊತ್ತಾಯಿತೇ. ನೀವು ಸುಮ್ಮನೇ ಕುಳಿತುಕೊಳ್ಳಿ. ಅವರು ಮಾತನಾಡಲಿ. ಮುಕ್ತಾಯ ಆಗಿರುವಾಗ ನೀವ್ಯಾಕೆ ತೊಂದರೆ ಮಾಡುತ್ತೀರಿ? ನೀವು ಮಾತನಾಡಿ.

ಶ್ರೀ ಸಿದ್ದರಾಮಯ್ಯ:- ದಯಮಾಡಿ, ಈ ತರಹದ ಮಧ್ಯೆ ಮಧ್ಯೆ ಪ್ರವೇಶ ಮಾಡಿ ಅನಗತ್ಯವಾಗಿ ಪ್ರವೋಕ್ ಮಾಡತಕ್ಕದ್ದು ಸರಿಯಾದ ಕ್ರಮ ಅಲ್ಲ. There is no cause of action at all. ನಾನು ಯಾರನ್ನು instigate ಮಾಡಿಲ್ಲ. I have not instigated anybody. I have not provoked anybody.

Sri M.P. PRAKASH(Law and Parliamentary Affairs Minister):- you have made your point very clear. Please proceed. Let us come to some understanding.

Sri MAHADEV:- Parliamentary Affairs Minister ಹೇಳಿದ ಮೇಲೆ what made him to provoke. ಇದಕ್ಕೂ ಅದಕ್ಕೂ ರಿಲಯನ್ಸ್ ಇಲ್ಲ.

ಅಧ್ಯಕ್ಷರು: ಆಯಿತು ಕುಳಿತುಕೊಳ್ಳಿ. ಮಾನ್ಯ ಸಿದ್ದರಾಮಯ್ಯನವರೇ ಮಾತನಾಡಿ.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಇನ್ನು ಮುಂದೆ ಈ ತರಹ ಆಗದೇ ಇದ್ದ ಹಾಗೆ ಮಾಡಬೇಕು. ನಮಗೆ ರಕ್ಷಣೆ ಇಲ್ಲದೇ ಹೋದರೆ ಬಹಳ ಕಷ್ಟ ಆಗುತ್ತದೆ.

ಅಧ್ಯಕ್ಷರು: ನಾನು ಅನೇಕ ಸಾರಿ ಹೇಳುತ್ತಿದ್ದೇನೆ. ಈಗ ಮಧ್ಯದಲ್ಲಿ ಮಾತನಾಡಬಾರದು ಎಂದು ಹೇಳಿದ್ದೇನೆ. ಕೇಳಿ.

ಶ್ರೀ ಸಿದ್ದರಾಮಯ್ಯ:- Un-necessary ಆಗಿ for no reason...

ಅಧ್ಯಕ್ಷರು: ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಧ್ಯದಲ್ಲಿ ಸುಮ್ಮನೇ ಇಂಟರವೀನ್ ಆಗಿ ಮಾತನಾಡುವುದು, ಅದು ಎತ್ತಲೋ ತಿರುಗಿಕೊಳ್ಳುವುದು, ಅದರ ಅಗತ್ಯ ಇಲ್ಲ. ಆದ್ದರಿಂದ ಗಂಭೀರವಾಗಿ ಎಲ್ಲಾ ಸದಸ್ಯರೂ ನಡೆದುಕೊಳ್ಳಬೇಕು. ದಯಮಾಡಿ ಮುಂದುವರೆಸಿ.

ಶ್ರೀ ಸಿದ್ದರಾಮಯ್ಯ:- ನಾನು ಇದನ್ನು Privilege ಗೆ ಮೂವ್ ಮಾಡಬೇಕು. ಯಾವುದನ್ನೋ ಒಂದು ವಿಚಾರ ಹೇಳಿ ಇಲ್ಲಿರತಕ್ಕಂತಹ ಗಂಭೀರವಾದಂತಹ ವಿಚಾರವನ್ನು dilute ಮಾಡತಕ್ಕಂಥದ್ದು ಸರಿಯಾದ ಕ್ರಮ ಅಲ್ಲ. ಯಾರೋ ತಪ್ಪು ಮಾಡಿದ್ದರೆ, ಅವರಿಗೆ ಶಿಕ್ಷೆ ಕೊಡಬೇಕು. ಅವರ ಮೇಲೆ enquiry ಆಗಬೇಕು. Enquiry ಆಗಲಿ. ಅದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಯಾರ ಮೇಲೆ enquiry ಮಾಡಿದರೂ ನಮ್ಮ ಸ್ವಾಗತ ಇದೆ. ಯಾರ ಮೇಲಾದರೂ ಆಗಲಿ. ನಾವು ತಪ್ಪು ಮಾಡಿದ್ದರೆ ನಮ್ಮ ಮೇಲೆ enquiry ಮಾಡಿದರೂ ಕೂಡ ಸ್ವಾಗತ ಇದೆ. ಅದರ ಬಗ್ಗೆ ಎರಡನೇ ಮಾತೇ ಇಲ್ಲ. ನಾವೀಗ ವಿರೋಧ ಪಕ್ಷದಲ್ಲಿದ್ದೇವೆ ಅಥವಾ ನಾವು ಅಧಿಕಾರದಲ್ಲಿದ್ದಾಗ ತಪ್ಪುಗಳು ಮಾಡಿದ್ದರೆ, ಅದಕ್ಕೂ ಕೂಡ ಒಂದು Commission of Enquiry ಮಾಡಿದರೆ ಅದಕ್ಕೂ ಸ್ವಾಗತ. ಹಿಂದೆ ಏನೇನು ತಪ್ಪು ಮಾಡಿದ್ದೇವೆ? ಇಷ್ಟು ವರ್ಷ ಅಧಿಕಾರದಲ್ಲಿದ್ದಾಗ, ಅದಕ್ಕೆಲ್ಲಾ Commission of Enquiry ಮಾಡಿದರೂ ಸ್ವಾಗತ. ಈಗ ಯಾರ್‍ಯಾರು ಇದ್ದಾರೆ, ಅವರ ಮೇಲೆ ಏನಾದರೂ ವಿಚಾರಣೆ ನಡೆದರೆ ಅದಕ್ಕೂ ಸ್ವಾಗತ. ಅದೂ ಕೂಡ ಆಗಲಿ. ಅದೂ ತಪ್ಪು ಮಾಡಿದ್ದರೆ, Public Service Commission ನಲ್ಲಿ ಏನೇನು ನಡೆದಿದೆ? ಅದಕ್ಕೆ ಒಂದು enquiry ಮಾಡಬೇಕು ಎಂದರೆ ಮಾಡಲಿ. Absolutely, I have no objection. I welcome it. ಯಾರು ಉಪ್ಪು ತಿಂದಿರುತ್ತಾರೆ? ಅವರು ನೀರು ಕುಡಿಯುತ್ತಾರೆ. ನಮ್ಮದೇನೂ ತಕರಾರು ಇಲ್ಲ. ಉಪ್ಪು ತಿಂದವರು ಜೈಲಿಗೆ

ಹೋಗುತ್ತಾರೆ. ತಪ್ಪು ಮಾಡಿದವರು ಜೈಲಿಗೆ ಹೋಗುತ್ತಾರೆ, ಶಿಕ್ಷೆ ಅನುಭವಿಸುತ್ತಾರೆ. ಮಾಡಲಿ. ನಾನು ಅದನ್ನೇ ಹೇಳುತ್ತಿದ್ದುದು ಈ ಇಶ್ಯೂನಲ್ಲಿ Mysore University ಯಲ್ಲಿ ಏನು ಅಪಾಯಿಂಟ್‌ಮೆಂಟ್‌ಗಳು ಆಗಿವೆಯಲ್ಲಾ, ಅವುಗಳು ಕಾನೂನು ಬಾಹಿರವಾಗಿ ಆಗಿವೆ. ಸ್ವಜನ ಪಕ್ಷಪಾತ ಆಗಿದೆ. ಇವತ್ತು ಯಾರ್‍ಯಾರು ಎಲಿಜಿಬಲ್ ಇದ್ದರು ಅವರನ್ನು ಕೈಬಿಟ್ಟು, ಇನ್ ಎಲಿಜಿಬಲ್ ಅವರನ್ನು ಅಪಾಯಿಂಟ್ ಮಾಡಿದ್ದಾರೆ. It is totally against the University Act. Reservation Policy violation ಎಲ್ಲಾ ಆಗಿ ಬಿಟ್ಟಿದೆ. ಹಿಂದುಳಿದವರಿಗೆ ಆ ಸೀಟನ್ನು reservation ಇಟ್ಟಿದ್ದರೆ, ನಾವು ಮುಂದಿನ ಸಾರಿ ಮಾಡುತ್ತೇವೆಂದು ಹೇಳಿ ಬಿಟ್ಟು ಮುಂದಿನ ಸಾರಿಯೂ ಬದಲಾಯಿಸಿ ಬಿಟ್ಟರೆ, ಅದು ಸರಿಯಲ್ಲ. ಒಂದು ಸಾರಿ ಬದಲಾವಣೆ ಮಾಡಲು ಅವಕಾಶ ಇದೆ. ಹೀಗೆ ಮಾಡಿದರೆ should we keep quiet? ಜನ ನಮಗೆ ಓಟು ಕೊಟ್ಟು ಕಳುಹಿಸಿರುವುದು ಸುಮ್ಮನೇ ಕುಳಿತುಕೊಳ್ಳುವುದಕ್ಕಾ? ಅನ್ಯಾಯ ಆಗುತ್ತಿದ್ದರೂ ನಾವು ಸುಮ್ಮನೇ ಕುಳಿತುಕೊಳ್ಳಬೇಕಾ? ನಾನೂ ಮೈಸೂರಿನಂದ ಬಂದವನು. ಮೈಸೂರು ಯೂನವರ್ಸಿಟಿಯಲ್ಲಿ ಈ ತರಹ ಅನ್ಯಾಯಗಳು ಆಗುತ್ತಿದ್ದರೆ ನೋಡುತ್ತಾ ಕುಳಿತಿರಬೇಕಾ? But this cannot be diluted. ಅದರಿಂದ ಯಾರ್‍ಯಾರಿಗೆ ಇಲ್ಲಿಯವರೆಗೆ ಇಲ್ಲೀಗಲ್ ಆಗಿ ಏನು ಅಪಾಯಿಂಟ್‌ಮೆಂಟ್‌ಗಳು ಆಗಿವೆ ಅದೆಲ್ಲವನ್ನೂ ಕೂಡ They may be kept in abeyance. ಕೋರ್ಟ್ ಆರ್ಡರ್ ಕೂಡ ವಯಲೇಷನ್ ಆಗಿದೆ. ಆದ್ದರಿಂದ Contempt of Court ಕೂಡ ಆಗುತ್ತದೆ. Already contemp proceedings are pending before the Court. ಇಂತಹ ಸ್ಥಿತಿಯಲ್ಲಿ ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳದೇ ಅದನ್ನು dilute ಮಾಡುವುದಕ್ಕೆ ಹೋದರೆ ಅನ್ಯಾಯ ಆದವರಿಗೆ ನ್ಯಾಯ ಸಿಕ್ಕುವುದಿಲ್ಲ. ಸಾಮಾಜಿಕ ನ್ಯಾಯ ಸಿಕ್ಕಬೇಕಾದವರಿಗೆ ನ್ಯಾಯ ಸಿಕ್ಕವುದಿಲ್ಲ. ದೊಡ್ಡ ಅನ್ಯಾಯ ಆಗುತ್ತದೆ. ಆ ಕಾರಣದಿಂದ ಈ ಎಲ್ಲಾ recruitment ಅನ್ನು abeyance ನಲ್ಲಿ ಇಡಬೇಕು. Enquiry ಆಗಬೇಕು. ತಪ್ಪಾಗಿದ್ದರೆ ಶಿಕ್ಷೆ ಕೊಡಬೇಕು. ತಪ್ಪಿಲ್ಲದಿದ್ದರೆ ಓಕೆ. ಅವರು ಕಾನೂನು ಪ್ರಕಾರ ಮಾಡಿದ್ದರೆ. allright ಮಾಡಲಿ. ಆದರೆ enquiry ಮಾತ್ರ ಇದರಲ್ಲಿ ಆಗಲೇಬೇಕು. ಇದನ್ನು ತೀವ್ರವಾಗಿ ಒತ್ತಾಯ ಮಾಡುತ್ತಿದ್ದೇವೆ. ಇದನ್ನು ಹೀಗೆಯೇ ಬಿಡಲಿಕ್ಕೆ ಸಾಧ್ಯ ಇಲ್ಲ. ಈಗ ನಾವು ಬಿಜಾಪುರ ಮಹಿಳಾ ಯೂನಿವರ್ಸಿಟಿಯಲ್ಲಿ ಅನ್ಯಾಯ ಆಗಿದೆ ಎಂದು ಹೇಳಿ enquiry ಮಾಡಿಸಿದೆವು. ತುಮಕೂರಿನಲ್ಲಿ ಅನ್ಯಾಯ ಆಗಿದೆ ಎಂದು ಹೇಳಿ enquiry ಆಗಿದೆ. Why not here? ಅವರಿಗೊಂದು ನ್ಯಾಯ, ಇವರಿಗೊಂದು

ನ್ಯಾಯನಾ? ಅಲ್ಲಿ ಮಹಿಳಾ ವಿಶ್ವವಿದ್ಯಾನಲಯದಲ್ಲಿರತಕ್ಕವರಿಗೆ ಒಂದು ನ್ಯಾಯ. ತುಮಕೂರಿನಲ್ಲಿರತಕ್ಕವರಿಗೆ ಒಂದು ನ್ಯಾಯ. Medical College ದು ಅದೊಂದು ನ್ಯಾಯ. ಇವರಿಗೊಂದು ನ್ಯಾಯ ಎಂದು ಮಾಡುವುದಕ್ಕೆ ಆಗುತ್ತದಾ? ಇಲ್ಲೂ ಕೂಡ enquiry ಆಗಲೇಬೇಕು. It is a fit case. ಇದರಲ್ಲಿ enquiry ಆಗಲೇಬೇಕು. I demand enquiry and also the list may be kept in abeyance. ಇದನ್ನು ಮಾಡಲೇಬೇಕೆಂದು ಹೇಳಿ ಒತ್ತಾಯ ಮಾಡುತ್ತೇನೆ.

ಶ್ರೀ ಮಹಾದೇವ್(ಕೆ.ಆರ್.ಪೇಟೆ): ಮಾನ್ಯ ಅಧ್ಯಕ್ಷರೆ, ಈ ಮೈಸೂರು ಯೂನಿವರ್ಸಿಟಿ ವಿಚಾರದಲ್ಲಿ ನನಗೂ ಕೂಡ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು. ಇವತ್ತು ಮೈಸೂರು ಜಿಲ್ಲೆಯಲ್ಲಿ, ಮೈಸೂರು ಮಾಧ್ಯಮದಲ್ಲಿ ಸಾಕಷ್ಟು ಚರ್ಚೆ ಆಗುತ್ತಿದೆ. ಈಗ ಬಹಳಷ್ಟು ಯೂನಿವರ್ಸಿಟಿಗಳು ಕರ್ನಾಟಕದಲ್ಲಿ ಆಗಿವೆ. ಆದರೆ ಮೈಸೂರು ಯೂನಿವರ್ಸಿಟಿಯದೇ ಒಂದು ವಿಶೇಷತೆ ಇದೆ. ಏಕೆಂದರೆ ಆ ಮೈಸೂರು ಯೂನಿವರ್ಸಿಟಿಯ ಸ್ಟೂಡೆಂಟ್ ಅಂದರೆ ಅದಕ್ಕೆ ಒಂದು ತೂಕವೇ ಬೇರೆ. ಒಂದು ಕಾಲದಲ್ಲಿ ಮೈಸೂರು ರಾಜರ ಕಾಲದಲ್ಲಿ ಅದು ಸ್ಥಾಪನೆ ಆಗಿ, ಅದು ಏಕೈಕ ಯೂನಿವರ್ಸಿಟಿಯಾಗಿ ಅಲ್ಲಿದ್ದ ಕುಲಪತಿಗಳು ಶ್ರೀ ರಾಧಾಕೃಷ್ಣ ಅವರು ರಾಷ್ಟ್ರಪತಿಗಳು ಆಗುತ್ತಾರೆ. ಮೈಸೂರು ಜಿಲ್ಲೆಯಲ್ಲಿ ದಿನ ನಿತ್ಯ ಆರೋಪಗಳು, ಪ್ರತಿ ಆರೋಪಗಳು ನಡೆಯುತ್ತಿವೆ. ಮಾನ್ಯ ಸಿದ್ದರಾಮಯ್ಯ ಸಾಹೇಬರು ಹೇಳಿದರು. ಇವತ್ತು ಒಂದು ಚಿಕ್ಕ ಘಟನೆ ಕೂಡ ರೆಕ್ರೂಟ್‌ಮೆಂಟ್‌ನಲ್ಲಿ ನಡೆದರೆ, ಮಹಿಳಾ ಯೂನಿವರ್ಸಿಟಿಯ ರೆಕ್ರೂಟ್‌ಮೆಂಟ್ ವಿಚಾರದಲ್ಲಿ ಸರ್ಕಾರ was very fast to take action. ಒಂದು ಮಾಧ್ಯಮಗಳಲ್ಲಿ ಬಂದಂತಹ ಸುದ್ದಿಯ ಆಧಾರದ ಮೇಲೆ ಒಂದು ಮಹಿಳಾ ವಿಶ್ವವಿದ್ಯಾನಲಯದ ಕುಲಪತಿಗಳ ಮೇಲೆ ಛಾರ್ಜಸ್ ಅಥವಾ enquiry ಯನ್ನು ಮಾಡಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಕೂಡ ಇದೇ ತರಹ ವಿಶ್ವವಿದ್ಯಾನಿಲಯದ ಚರ್ಚೆಯನ್ನು ಮಾಡಿದ್ದಾರೆ. ಆದರೆ ಇದರ ವಿಚಾರದಲ್ಲಿ ಕಳೆದ 10-15 ದಿವಸದಿಂದ ಕೂಡ ಈ ವಿಚಾರ ಗಂಭೀರವಾಗಿ ಚರ್ಚೆ ಆಗಿ ಪತ್ರಿಕೆಗಳಲ್ಲಿ ಬರುತ್ತಿದ್ದರೂ ಕೂಡ ಸರ್ಕಾರ ಏಕೆ ಮೌನ ವಹಿಸುತ್ತಿದೆ ಎಂದು ನನಗೆ ಗೊತ್ತಿಲ್ಲ. ಮೊನ್ನೆ ನಮಗೆ ಸರ್ಕಾರ ಈ ಅಂಗನವಾಡಿ ರೆಕ್ರೂಟ್‌ಮೆಂಟ್ ಮಾಡಲು ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ಅದರಲ್ಲಿ ಎಸ್ಎಸ್ಎಲ್‌ಸಿ ಪಾಸಾಗಿರುವ ಮಕ್ಕಳಿಗೆ ಮಾತ್ರ ಅಂಗನವಾಡಿ ಟೀಚರ್ ಆಗುವುದಕ್ಕೆ ಒಂದು ಅರ್ಹತೆ ಎಂದು ಬಂತು. 9ನೇ ಕ್ಲಾಸ್ ಪಾಸಾಗಿರುವವರನ್ನೂ ಅನುಕಂಪದ ಆಧಾರದ ಮೇಲೆ ನಾವು ಮಾಡಿಕೊಡುತ್ತೇವೆಂದು ಕೇಳಿದೆವು. ಇಲ್ಲ, ಇಲ್ಲ,

ಹತ್ತನೇ ಕ್ಲಾಸ್ ಪಾಸಾಗಿರಬೇಕು. ಪಾಸ್ ಆಗಿದ್ದರೆ ಮಾತ್ರ ಟೀಚರ್ ಆಗುವುದಕ್ಕೆ ಅರ್ಹತೆ ಎಂದರು. ಯಾರಿಗೆ? ಅಂಗನವಾಡಿ ಮಕ್ಕಳಿಗೆ ಅ,ಆ, ಇ, ಈ ಹೇಳಿ ಕೊಡುವವರಿಗೆ ಹತ್ತನೇ ಕ್ಲಾಸ್ ಪಾಸಾಗಿದ್ದರೆ ಮಾತ್ರ ಸರ್ಕಾರ ಅವರಿಗೆ ಅರ್ಹತೆ ಬರುತ್ತದೆ. ಎಂದು ಆದೇಶವನ್ನು ಹೊರಡಿಸುತ್ತಾರೆ. ಆದರೆ ಇಲ್ಲಿ UGC ಏನು ಒಂದು norms ಇಟ್ಟಿದೆ? University standard of education ಅನ್ನು maintain ಮಾಡುವುದಕ್ಕೆ ಏನೊಂದು norms ಇಟ್ಟಿದೆ, ಅದಕ್ಕೆ ತಕ್ಕ ಹಾಗೆ ಇರಬೇಕಾದಂತಹ ಅರ್ಹತೆ ಇಲ್ಲದೇನೆ 32 ಜನ ರೆಕ್ರೂಟ್‌ಮೆಂಟ್‌ನಲ್ಲಿ 19 ಜನರನ್ನು without these norms, without qualification, they have been selected. ಇದು ಒಂದು. ಎರಡನೆಯ ವಿಚಾರ, ಸರ್ಕಾರ ಬಹಳಷ್ಟು ವರ್ಷಗಳಿಂದ ಈ ಬ್ಯಾಕ್‌ಲ್ಯಾಗ್ ಹುದ್ದೆಯನ್ನು ಇಟ್ಟಿದೆ. ನಾವು ನೋಡುತ್ತೇವೆ. ಸರ್ಕಾರದ ಯಾವುದೇ ಇಲಾಖೆಯಲ್ಲಿ ನೋಡಿ. 20 Assistant Engineer backlog ನಲ್ಲಿ ಸೆಲೆಕ್ಟ್ ಆಗಬೇಕು. 30 Assistant Engineers Scheduled Caste backlog ನಲ್ಲಿ select ಆಗಬೇಕು. Lecturer select ಆಗಬೇಕು. It is the norm of the Government or any Institution, ಆ ಪರ್ಟಿಕ್ಯುಲರ್ ಕ್ಯಾಟಗರಿಗೆ ಆ ವ್ಯಕ್ತಿ ಸಿಗದೇ ಇದ್ದರೆ ಆ ಒಂದು ರಿಸರ್ವ್ ಕ್ಯಾಟಗರಿ ಅದು Scheduled Caste ಇರಬಹುದು, ಓಬಿಸಿ ಇರಬಹುದು, It should be Carried on ಎಂದು. ಆದರೆ ಇಲ್ಲಿ ನಡೆದಿರತಕ್ಕದ್ದು ಅರ್ಹತೆ ಇದ್ದಂತಹ ಜನಗಳಿಗೆ, ಅರ್ಹತೆ ಇದ್ದು ಓಬಿಸಿ, ಶೆಡ್ಯೂಲ್ಡ್ ಕ್ಯಾಸ್ಟ್ ಇದ್ದರೂ ಕೂಡ ಆ ಒಂದು ಓಬಿಸಿ ಕ್ಯಾಟಗರಿ ಮತ್ತು Scheduled Caste category ನಲ್ಲಿ ಎಲಿಜಿಬಿಲಿಟಿ ಇರತಕ್ಕ ಪ್ರೊಫೆಸರ್ ಶಿಫ್ norms ಗೆ ಅವರನ್ನು set-aside ಮಾಡಿ ಅದನ್ನು ಸರ್ಕಾರದ ಅನುಮತಿ ಇಲ್ಲದೇ general merit ಗೆ convert ಮಾಡುತ್ತಾರೆ. It is a big blunder, it is a big violation. ಇದು ಸಾಮಾಜಿಕ ನ್ಯಾಯಕ್ಕೆ ಒಂದು ದೊಡ್ಡ ಪೆಟ್ಟು. ಇಂತಹ ಪ್ರಿಸಿಡೆಂಟ್ ಯೂನಿವರ್ಸಿಟಿಗಳಲ್ಲಿ ಪ್ರಾರಂಭ ಆದರೆ ಎಲ್ಲಾ ಕಡೆ ಕೂಡ people will desalos vested interests, social justice will be defeated ವಿರೋಧಿಗಳು ಇಂತಹ ಒಂದೇ ಒಂದು ಸರ್ಕುಲರ್ ಸಿಗಬೇಕು. ಈಗ ಇದೇ ಒಂದು ಆದೇಶವನ್ನು ಬೇರೆ ಇಲಾಖೆಯವರು ತೆಗೆದುಕೊಳ್ಳುತ್ತಾರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇದೇ ತರಹ ಓಬಿಸಿಗೆ ಬಂದಿದ್ದನ್ನು ಕ್ಯಾಂಡಿಡೇಟ್ಸ್ ಬಂದಿಲ್ಲ, set-aside ಮಾಡಿ general merit ಗೆ ಹಾಕಿಕೊಂಡೆವು ಎಂದು ಹೇಳುತ್ತಾರೆ. ಅದು ಆದ ಮೇಲೆ ನಾವು ಎಷ್ಟೋ ಕಡೆ ನೋಡಿದ್ದೇವೆ. Customs become a precedent. Precedent ಆದಮೇಲೆ ಅದು ಕಾನೂನು

ಆಗಿ ಬಿಡುತ್ತದೆ. ಇಲ್ಲೊಂದು ನಡೆಯಿತು, ಅಲ್ಲೊಂದು ನಡೆಯಿತೆಂದು ಕೊನೆಗೆ ಒಂದು ಕಾನೂನು ಮಾಡಿಬಿಡುವುದು! ಇದು ಸಾಮಾಜಿಕ ನ್ಯಾಯವಲ್ಲ. ಅಲ್ಲಿರುವ ಬಹಳಷ್ಟು ಮಕ್ಕಳು ತೊಂದರೆಗೊಳಗಾಗುತ್ತಾರೆ... ಇವತ್ತು ತಮ್ಮ ಮನೆಯವರು ಕೂಡ ಪ್ರೊಪೆಸರ್ ಆಗಿದ್ದಾರೆ. ನಾನು ಕೇಳಿ ಬಂದಿದ್ದೇನೆ. norms ಪ್ರಕಾರ ಆಗದೇ, ನಿಮ್ಮ Madamನವರು ಪಾಠ ಹೇಳುತ್ತಿದ್ದವರು ಅವರ ಮೇಲೆ ಪ್ರೊಫೆಸರ್ ಆಗಿಬಿಟ್ಟಿದ್ದಾರೆಂದು ಸುದ್ದಿ. Madam ಯಾವ ಹುಡುಗರಿಗೆ ಪಾಠ ಹೇಳುತ್ತಿದ್ದರೋ, ಅವರೆಲ್ಲರೂ Lecturers, Professors ಆಗಿಬಿಟ್ಟಿದ್ದಾರಂತೆ! ದಯವಿಟ್ಟು ಇವತ್ತು ಏನು recruitment ನಡೆದಿದೆ, ಯಾವುದೇ Universityಯಲ್ಲಿ ಯಾವುದೇ ಅವ್ಯವಹಾರ ನಡೆದರೂ, ಒಂದೇ ರೀತಿಯ ಮಾರ್ಗಸೂಚಿ ಹಾಕಬೇಕಾಗುತ್ತದೆ. If there is an enquiry against the Mahila University Vice Chancellor there should also be an enquiry against the Vice Chancellor of Mysore University for mis-conduct, nepotism and corruption, Thank you.

ಅಧ್ಯಕ್ಷರು: ಈಗ ಸರ್ಕಾರದ ಪರವಾಗಿ ಯಾರು ಉತ್ತರ ಹೇಳುತ್ತಾರೆ?

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಸುಮ್ಮಾರು ಹೊತ್ತು ಜರುಗಿದ ಚರ್ಚೆ ಕೇಳಿದ್ದೇನೆ. ಸಿದ್ದರಾಮಯ್ಯನವರು, ಮಾಧುಸ್ವಾಮಿಯವರು, ಮಹದೇವ್‌ರವರು, ಮಹದೇವಪ್ಪನವರು, ಎಲ್ಲರೂ ಚೆನ್ನಾಗಿ, ಅರ್ಥಗರ್ಭಿತವಾಗಿ ಪೂರ್ತಿ ಹೇಳಿದ್ದಾರೆ. ಏಕೆಂದರೆ, ನಾನು ಒಂದೇ ಪಾಯಿಂಟ್ ಕೇಳಿದೆ. ಜೆ.ಹೆಚ್.ಪಟೇಲ್‌ರ ಕಾಲದಲ್ಲಿ ಒಬ್ಬ ಕುಲಪತಿಯನ್ನು ನೇಮಕ ಮಾಡಿದರು. ನೇಮಕವಾದ ತಕ್ಷಣವೇ ರಾಜ್ಯಪಾಲರು ಆದೇಶ ಹೊರಡಿಸಿ, ಎಲ್ಲವನ್ನೂ ಮಾಡಿದರು. ಆದೇಶವಾದ ನಂತರ ಒಂದು ಪೊಲೀಸ್ ಕೇಸ್ ಇದೆಯೆಂದು ಆತನನ್ನು ಮೂರೇ ದಿವಸಗಳಿಗೆ ಕಿತ್ತು ಹಾಕಿದರು. ಆದಾದ ನಂತರ ಮಹಾಸ್ವಾಮಿಗಳೆ, ಮತ್ತೆ ಯಾವ ಸರ್ಕಾರದವರು ನೇಮಕಾತಿ ಮಾಡಿದರೂ ಗೊತ್ತಿಲ್ಲ. ನನಗೆ ವಿಷಯ ಗೊತ್ತಿಲ್ಲ. ನಾನು ಸಿದ್ದರಾಮಯ್ಯನವರಷ್ಟು ತಿಳಿದುಕೊಂಡಿಲ್ಲ.

ಶ್ರೀ ಸಿದ್ದರಾಮಯ್ಯ: ಏನು ಹೇಳಬೇಕೆಂದಿದ್ದೀರೋ, ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ: ಹೇಳ್ತಿನ್ರಿ, ಮಾಧುಸ್ವಾಮಿಯವರೆ, ನನಗೆ ಹೇಳುವುದಕ್ಕೆ ಬಿಡಿ. ನೀವು ಮಾತನಾಡಿಲ್ಲವೇ? ಸ್ವಜನಪಕ್ಷಪಾತವೆಂದರೆ, ಏನು?

ಇಲ್ಲಿದ್ದರೆ ಹೇಳಿ. ಸ್ವಜನಪಕ್ಷಪಾತ ಮಾಡುವುದಕ್ಕೆ ಒಬ್ಬರೇ ಇರುತ್ತಾರೆಯೇ? ಕುಲಪತಿ ಒಬ್ಬನೇ ಇರುತ್ತಾನೆಯೇ? ಅದರಲ್ಲಿ expert ಇರುವುದಿಲ್ಲವೇ? Expert Committe ಇಲ್ಲವೇ? Expert Committe ಯಲ್ಲಿ...

(ಗೊಂದಲ)

ಶ್ರೀ ಮಹಾದೇವ್: ಮೈಸೂರು ಯೂನಿವರ್ಸಿಟಿಯಲ್ಲಿ ಸಿಂಡಿಕೇಟ್ ಮೆಂಬರ್ಸ್ ಇಲ್ಲ.

(ಗೊಂದಲ)

ಅಧ್ಯಕ್ಷರು: ಉತ್ತರ ಕೊಟ್ಟ ಮೇಲೆ ಏನಾದರೂ ಕೇಳುವುದಿದ್ದರೆ, ಕೇಳಿ. ಮೊದಲು ಅವರು ಉತ್ತರ ಹೇಳಲಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಅವರು ಹೇಳುವವರೆಗೂ ನಾವು ತಾಳ್ಮೆಯಿಂದ ಕೇಳಿದ್ದೇವೆ. ನಾನು ಹೇಳುವುದೇನೆಂದರೆ, ಸ್ವಜನಪಕ್ಷಪಾತ ಅಥವಾ ಇನ್ನೊಂದು ಕಾನೂನುಬಾಹಿರವಾಗಿ ಯಾರೇ ಮಾಡಿದ್ದರೂ, ಅದರ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ತಪ್ಪು ತಿಳಿದುಕೊಳ್ಳಬೇಡಿ. ತಾವು ಉತ್ತರ ಹೇಳುತ್ತಿದ್ದೀರಾ? ಎಂದು ಕೇಳಿದೆವು.

ಶ್ರೀ ಹೆಚ್.ಡಿ.ರೇವಣ್ಣ: ಸರ್, ನಾನು ಉತ್ತರ ಹೇಳುತ್ತಿಲ್ಲ. ಚರ್ಚೆ ಮಾಡುವ ಸಂದರ್ಭದಲ್ಲಿ ಪ್ರಸ್ತಾಪವಾಗಿರುವ ವಿಷಯವನ್ನು ನಾನು ಸಭಾಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ, ಸಭೆಯಲ್ಲಿ ಯಾರೂ ಇರುವುದಿಲ್ಲ. ಮಾಧುಸ್ವಾಮಿಯವರೆ, ನನ್ನ ಮೇಲೆ ಒಂದು charge ಮಾಡಿದರು. ನಾನು ಸದನದ ಮೆಂಬರ್ ಅಲ್ಲ. ಐದು ವರ್ಷ ಯಾವ ರೀತಿ ನಡೆಯಿತೆಂಬುದು ಗೊತ್ತಿದೆ. ಸದನದಲ್ಲಿ ನೀವೂ ಇರಲಿಲ್ಲ, ನಾನೂ ಇರಲಿಲ್ಲ, ಸಿದ್ದರಾಮಯ್ಯನವರೂ ಇರಲಿಲ್ಲ. ಬೆಳಗ್ಗೆ ಎದ್ದರೆ ಈ ಸದನ ಯಾವ ರೀತಿ ನಡೆಯುತ್ತಿತ್ತು ಎಂಬ ಬಗ್ಗೆ ಬೇಕಾದರೆ ಕಡತ ತೆಗೆದು ನೋಡಿ. ಶ್ರೀನಿವಾಸಗೌಡರೆ, ತಾವು ದಯಮಾಡಿ ಕುಳಿತುಕೊಳ್ಳಿ. ನನಗೇನೂ ಕಾಣದಿರುವ ಬೇಳೆಕಾಳಲ್ಲ. ಅಧ್ಯಕ್ಷರೆ, ಸದನದಲ್ಲಿ ಇಲ್ಲದಿರುವ ವ್ಯಕ್ತಿಗಳ ಮೇಲೆ ಆರೋಪ ಮಾಡಬಹುದೇ? ಈಗ ರಾಜ್ಯಪಾಲರು ಇಲ್ಲವೇ? ಕೃಷ್ಣಪ್ಪನವರೆ, ಒಂದೆರಡು ನಿಮಿಷ ತಡೆಯಿರಿ.ನಾನು ಬೆಳಕು ಚೆಲ್ಲುತ್ತಿಲ್ಲ. ನಿಮ್ಮಷ್ಟು ಬೆಳಕು ಚೆಲ್ಲುವಷ್ಟು ನಾನು ರಾಜಕೀಯವಾಗಿ ಬೆಳೆದಿಲ್ಲ. ಸ್ವಾಮಿ, ನಾನು

ಅಷ್ಟು ನಿಪುಣನಲ್ಲ. ಕೃಷ್ಣಪ್ಪನವರಷ್ಟು ಬೆಳಕು ಚೆಲ್ಲುವಷ್ಟು ನನಗೆ ಶಕ್ತಿಯಿಲ್ಲ. ನಾನು ಈ ರಾಜ್ಯದಲ್ಲಿರುವ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೇನೆ. ಈ ರಾಜ್ಯದಲ್ಲಿ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ಸಭಾಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ರೇವಣ್ಣ, ಕೋಪ ಏಕೆ?

ಶ್ರೀ ಹೆಚ್.ಡಿ.ರೇವಣ್ಣ:: ನಾನು ಕೋಪ ಮಾಡಿಕೊಳ್ಳುತ್ತಿಲ್ಲ. ಸಿದ್ದರಾಮಯ್ಯ ಸಹೇಬರೆ, ನಾನು ಹೇಳುವುದೇನೆಂದರೆ, ನೀವು ಹಿರಿಯರಿದ್ದೀರಿ. ನಾನು ಕೋಪ ಮಾಡಿಕೊಳ್ಳುತ್ತಿಲ್ಲ. ಈಗ ಜಯಕುಮಾರ್‌ರವರು ಮಾತನಾಡಿದರು. ಆ ಟೈಪ್‌ನಲ್ಲಿ ಮಾತನಾಡುವುದಕ್ಕೆ ನನಗೆ ಇಷ್ಟವಿಲ್ಲ. ಈಗ ಯಾರೋ ಒಬ್ಬರು Vice Chancellor ಇರುತ್ತಾರೆ, ಅವರು ಇಲ್ಲಿಗೆ ಬಂದು defend ಮಾಡಿಕೊಳ್ಳುವುದಕ್ಕೆ ಶಕ್ತಿ ಇರುತ್ತದೆಯೇ? ಅವರಿಗೆ defend ಮಾಡಿಕೊಳ್ಳುವ ಶಕ್ತಿ ಇದ್ದರೆ ಹೇಳಿ. ಯೂನಿವರ್ಸಿಟಿಯವರದು ತಪ್ಪು ಇದ್ದರೆ, ರಾಜ್ಯಪಾಲರು ಇಲ್ಲವೇ? ರಾಜ್ಯಪಾಲರ ಕೈಕೆಳಗೆ ತಾನೆ ಯೂನಿವರ್ಸಿಟಿ ಬರುವುದು, ಇಂತಹ ಯೂನಿವರ್ಸಿಟಿಯಲ್ಲಿ ಈ ತರಹ ಅನ್ಯಾಯ ನಡೆಯುತ್ತಿದೆಯೆಂದು ರಾಜ್ಯಪಾಲರಿಗೆ ಕೊಡಿ. ಅದರ ಬಗ್ಗೆ ತನಿಖೆ ಮಾಡಲಿ. ರಾಜ್ಯಪಾಲರು ಆ ಬಗ್ಗೆ ತನಿಖೆ ಮಾಡಲಿಲ್ಲವೆಂದರೆ, ಆಮೇಲೆ ಬೇಕಿದ್ದರೆ, ಸದನದ ಮುಂದೆ ಚರ್ಚೆಗೆ ಬನ್ನಿ. ಅದಕ್ಕೆ ನಾವು ಬೇಡವೆಂದು ಹೇಳುವುದಿಲ್ಲ. ಅವರು ಬಂದು ತಮ್ಮನ್ನು defend ಮಾಡಿಕೊಳ್ಳುವುದಕ್ಕೆ ಇಲ್ಲಿ ಶಕ್ತಿ ಇದೆಯೇ? ಅವರು ಸದನದ ಮೆಂಬರ್ ಆಗಿದ್ದಾರೆಯೇ? ಉಪ ಕುಲಪತಿಗಳು ಸದಸ್ಯನ ಮೆಂಬರ್ ಆಗಿದ್ದಾರೆಯೇ? ಏನದೆ, ಯಾವ್ಯಾವ ಕಮಿಟಿಗಳಿವೆ ಎಂದು ಹೇಳುವುದಕ್ಕಾಗುತ್ತದೆಯೇ? ಅವರು ಇಲ್ಲಿಗೆ ಬಂದು ಏನಾದರೂ ಡಿಫೆಂಡ್ ಮಾಡಿಕೊಳ್ಳುವಂತಿದ್ದರೆ, ಬೇಕಾದರೆ ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: ತುಮಕೂರಿನದು enquiry ಆಗುತ್ತಿದೆ. ಈಗ ಬಿಜಾಪುರ ಮಹಿಳಾ ಯೂನಿವರ್ಸಿಟಿಯದು enquiry ಆಗುತ್ತಿದೆ. ಇದನ್ನು Governorಗೂ ಕೊಟ್ಟಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ವೈಸ್ ಚಾನ್ಸಲರ್ ಸುದ್ದಿ ಮಾತನಾಡಬಹುದು. ಅವರೇನೂ defend ಮಾಡಬೇಕಿಲ್ಲ. Enquiry ಮಾಡಬೇಕೆಂದು ಕೇಳಿದ್ದೇವೆ, ನೀವು ಮಾಡಿ. Administrative Department ಇರುವುದೇ ಅವರನ್ನು defend ಮಾಡುವುದಕ್ಕೆ. ನೀವು defend ಮಾಡಿ. ಯಾರು ಬೇಡವೆಂದು ಹೇಳುತ್ತಿದ್ದಾರೆ? ಅವರು ಬರಬೇಕಾಗಿಲ್ಲ. ನಿಮ್ಮ Education Minister ಮಾಡಬೇಕು.

ಶ್ರೀ ಸಿದ್ದರಾಮಯ್ಯ: ಯೂನಿವರ್ಸಿಟಿಗೆ ದುಡ್ಡು ಕೊಡುವವರು ಯಾರು? ಈ ಸದನ ತಾನೇ ಮಾಡುವುದು. ದುಡ್ಡನ್ನು ಇಲ್ಲಿಂದಲೇ ತಾನೇ ಕೊಡುವುದು. ಮಂತ್ರಿಗಳು defend ಮಾಡಲಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ನೀವು ಈ ವಾದಕ್ಕೆ ಬಂದುಬಿಟ್ಟರೆ, ಇನ್ನು ಮೇಲೆ ಇಲ್ಲಿ ಯಾರ ಸುದ್ದಿಯನ್ನೂ ಮಾತನಾಡುವಂತಿಲ್ಲ!

ಶ್ರೀ ಹೆಚ್.ಡಿ.ರೇವಣ್ಣ: ಒಂದೆರಡು ನಿಮಿಷ ಯೀಲ್ಡ್ ಆಗಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಈಗ ಬೆಳಗ್ಗೆ ಕಾರ್ಪೊರೇಷನ್ ಕಮೀಷನರ್ ಮೇಲೆ ಮಾತನಾಡಿದರು. ಅವರು ಮಾತನಾಡುವುದಕ್ಕಾಗುತ್ತದೆಯೇ? ನಾಳೆ ಮತ್ತೊಬ್ಬ ಆಫೀಸರ್ ಮೇಲೆ ಮಾತನಾಡಿದಾಗ, ಅವರು ಬಂದು ಮಾತನಾಡುವುದಕ್ಕಾಗುತ್ತದೆಯೇ?

ಅಧ್ಯಕ್ಷರು: ಮಾಧುಸ್ವಾಮಿಯವರೆ, ಅವರವರ ಅಭಿಪ್ರಾಯಗಳನ್ನು ಹೇಳಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ: ಸಭಾಧ್ಯಕ್ಷರೆ, ಕಾರ್ಪೊರೇಷನ್ ಕಮೀಷನರ್ ಮೇಲೆ ಮಾತನಾಡಿದರು ಎಂದು ಹೇಳಿದರು. ತಪ್ಪು ಮಾಡಿದವರು ಅನುಭವಿಸುತ್ತಾರೆ. ನಾನು ಹೇಳುವುದೇನೆಂದರೆ, ಯೂನಿವರ್ಸಿಟಿ, ಅದೊಂದು independent body ಆಗಿರುತ್ತದೆ. ಏಕೆಂದರೆ, ಕಾರ್ಪೊರೇಷನ್‌ನಲ್ಲಿ every moment ಸರ್ಕಾರದ ರಾಜಕೀಯ ಒತ್ತಡಕ್ಕೆ ಮಾಡುತ್ತಾರೆ. ಆದರೆ, ಇಲ್ಲಿ ರಾಜಕೀಯದ ಒತ್ತಡಕ್ಕೆ ಮಾಡುವುದಕ್ಕಾಗುವುದಿಲ್ಲ. ಯೂನಿವರ್ಸಿಟಿಯಲ್ಲಿ ರಾಜಕೀಯದ ಒತ್ತಡಕ್ಕೆ ಮಣಿಯಬಾರದು. ನಾನೇ ಒಂದು ಫೋನ್ ಮಾಡಿ ಹೇಳಿದ್ದೇನೆ. ಉದಾಹರಣೆಗೆ ಹೇಳುವುದಾದರೆ, ನಾನೇ ವೈಸ್ ಚಾನ್ಸಲರ್‌ಗೆ ಫೋನ್ ಮಾಡಿದೆ. ನನಗೆ ಬೇಕಾದವರು, ನಮ್ಮ ಹೊಳೆನರಸೀಪುರದಲ್ಲಿ ನನಗೆ ಬೇಕಾದಂತಹ, ಅವರ ತಂದೆಯವರು ನಮಗೋಸ್ಕರ ರಾಜಕೀಯವಾಗಿ ದುಡಿದಂತಹವರು. ನನ್ನದನ್ನೇ ಅವರು ಮಾಡಲಿಲ್ಲ.

(ಗೊಂದಲ)

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್: ಹಾಗಾದರೆ, ರಾಜೀವ್‌ಗಾಂಧಿ ಯೂನಿವರ್ಸಿಟಿಯದು ಬಿಜೆಪಿಯವರು ಮಾಡಿದಾಗ....

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ರೇವಣ್ಣನವರೆ, ಸುಮ್ಮನೆ ನೀವೇಕೆ ಮೈಮೇಲೆ ಎಳೆದುಕೊಳ್ಳುತ್ತಿದ್ದೀರಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಾನು ಹೇಳಿದವರನ್ನು ಅವರು ಮಾಡಲಿಲ್ಲ ಎಂಬುದಲ್ಲ ಇಲ್ಲಿ ಆರೋಪ ಇರುವುದು.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ನನ್ನದನ್ನೇ ಮಾಡಿಲ್ಲವೆಂದು ಮಂತ್ರಿಗಳು ಹೇಳಿದ್ದಾರೆ. Chairman of the Council ಹೇಳಿದರೂ ಮಾಡಿಲ್ಲವೆಂದು ಹೇಳಿದ್ದಾರೆ.... ಉತ್ತರ ಕೊಡಲಿ.

(ಗೊಂದಲ)

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್: ಇವತ್ತು ರಾಜೀವ್ ಗಾಂಧಿ ಯೂನಿವರ್ಸಿಟಿಯದು ಎಬಿವಿಪಿಯವರು ಗಲಾಟೆ ಮಾಡಿದರು. ಸದನದಲ್ಲಿ ಸಿ.ಟಿ.ರವಿಯವರು, ಮತ್ತೊಬ್ಬರು ಏಕೆ rise ಮಾಡಿದರು?

ಶ್ರೀ ಹೆಚ್.ಡಿ.ರೇವಣ್ಣ: ನಾನು ಹೇಳುವುದೇನೆಂದರೆ ಏನಾದರೂ charges ಮಾಡುವುದಿದ್ದರೆ...

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್:...ಯೂನಿವರ್ಸಿಟಿ, ಇವೆಲ್ಲವೂ ಈ ಸದನದಲ್ಲಿ ಚರ್ಚೆಯಾಗಿದೆ. ಭ್ರಷ್ಟಾಚಾರವಾದಾಗ ಚರ್ಚೆ ಮಾಡಬೇಕು. ಏಕೆ, ಮೈಸೂರು ಯೂನಿವರ್ಸಿಟಿ ಅದೊಂದು ಪ್ರತ್ಯೇಕ ಬೋರ್ಡ್ ಆಗಿದೆಯೇ? ಮಾನ್ಯ ರೇವಣ್ಣನವರು ಏಕೆ defend ಮಾಡುತ್ತಿದ್ದಾರೆ?

ಶ್ರೀ ಸಿದ್ದರಾಮಯ್ಯ: ಈಗ ಸರ್ಕಾರದ ಪರವಾಗಿ ಉತ್ತರ ಕೊಟ್ಟರೆ ಸಾಕು. ನಾವೂ ಕೂಡ ಯಾರ ಮೇಲೂ ನೇರವಾಗಿ ಆರೋಪ ಮಾಡಿಲ್ಲ. ಕಾನೂನು ಉಲ್ಲಂಘನೆಯಾಗಿದೆ, reservation policy follow ಮಾಡಿಲ್ಲ, ಅಲ್ಲಿ favouritism ಆಗಿದೆ, nepotism ಆಗಿದೆಯೆಂದು ಹೇಳಿದ್ದೇವೆ. ಇದರ ಬಗ್ಗೆ enquiry ಮಾಡಬೇಕೆಂದು ಹೇಳಿದ್ದೇವೆ. Enquiry ಮಾಡುತ್ತೇವೆಂದು ಸರ್ಕಾರದ ಪರವಾಗಿ ಉತ್ತರ ಕೊಟ್ಟರೆ ಆಯಿತು.

ಅಧ್ಯಕ್ಷರು: ಈಗ ಸರ್ಕಾರದ ಪರವಾಗಿ ಉತ್ತರ ಕೊಡುವವರು ಯಾರು? ಈಗ ಸರ್ಕಾರದ ಪರವಾಗಿ ಯಾರಾದರೂ ಉತ್ತರ ಕೊಡುತ್ತೀರಾ? ಅಥವಾ ಉನ್ನತ ಶಿಕ್ಷಣ ಸಚಿವರು ಬರುತ್ತಾರೆಯೇ? ಆಯಿತು, ಅನಂತರ ತೆಗೆದುಕೊಳ್ಳೋಣ, ಉತ್ತರ ಕೊಡುತ್ತಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈಗ ಸರ್ಕಾರ ಉತ್ತರ ಕೊಡುತ್ತಿಲ್ಲ. ಬೇರೆ ವಿಚಾರ ತೆಗೆದುಕೊಳ್ಳಿ.

ಅಧ್ಯಕ್ಷರು: ಈಗ ಸದನದಲ್ಲಿ ಉನ್ನತ ಶಿಕ್ಷಣ ಸಚಿವರಿಲ್ಲ. ಬಹುಶಃ, ಅವರನ್ನು ಕರೆಯಲು ಹೋಗಿದ್ದಾರೆಂದೆನಿಸುತ್ತದೆ. ಅವರು ಬರುವವರೆಗೂ ಕಾಯೋಣ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈಗ ಯಾರೂ ಉತ್ತರ ಕೊಡುತ್ತಿಲ್ಲ. ಅಲ್ಲಿಯವರೆಗೂ ಬೇರೆ ವಿಚಾರಗಳನ್ನು ಮಾತನಾಡಬಹುದಲ್ಲವೇ? ಬೆಳಗ್ಗೆ ನಾವು ಅಂಗನವಾಡಿ ವಿಚಾರವಾಗಿ ಮಾತನಾಡಿದಾಗ ಕುಮಾರಸ್ವಾಮಿಯವರು ಹೇಳಿದರು. ನಾನು ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಹೇಳುತ್ತೇನೆ ಎಂದರು.

ಅಧ್ಯಕ್ಷರು: ಈಗ ಉನ್ನತ ಶಿಕ್ಷಣ ಸಚಿವರು ಬರುತ್ತಾರೆ. ಉತ್ತರ ಕೊಡುತ್ತಾರೆ.

ಶ್ರೀ ಬಿ.ಎಸ್.ಹೊರಟ್ಟಿ: ಅಧ್ಯಕ್ಷರೆ, ಉನ್ನತ ಶಿಕ್ಷಣ ಸಚಿವರು ಬರುವವರೆಗೂ ತಾವು ಬೇರೆ ವಿಚಾರ ತೆಗೆದುಕೊಳ್ಳಿ.

ಅಧ್ಯಕ್ಷರು: ಉನ್ನತ ಶಿಕ್ಷಣ ಸಚಿವರು ಬಂದರು. ಉತ್ತರ ಕೊಡುತ್ತಾರೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಏನು ವಿಷಯ ಎಂದು ಗೊತ್ತಾಗಲಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮೈಸೂರು ವಿಶ್ವವಿದ್ಯಾನಿಲಯದ ನೇಮಕಾತಿಯಲ್ಲಿ illegal ಆಗಿದೆ. ಸ್ವಜನಪಕ್ಷಪಾತವಾಗಿದೆ. ಅದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಹೆಚ್.ಸಿ. ಮಹದೇವಪ್ಪ: ಈ ವಿಚಾರದ ಬಗ್ಗೆ ಮೇಲ್ಮನೆಯಲ್ಲಿ ಕೂಡ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಕೂಡ ಈ ವಿಚಾರ ಗೊತ್ತಿದೆ. ಅವರಿಗೆ ಗೊತ್ತಿಲ್ಲ ಎಂದೇನಲ್ಲ.

ಅಧ್ಯಕ್ಷರು: ತಾವು ಮೇಲ್ಮನೆಯಲ್ಲಿ ಇದ್ದಿರಲ್ಲ? ಗೊತ್ತಿದೆ ಹೇಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಬೆಳಿಗ್ಗೆ ಸಚಿವರಾದ ಕುಮಾರಸ್ವಾಮಿಯವರು ಮಾನ್ಯ ಮುಖ್ಯಮಂತ್ರಿಯವರು ಬಂದ ಮೇಲೆ ಹೇಳುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು: ಅವರು ಅವರೊಂದಿಗೆ ಸಮಾಲೋಚನೆ ಮಾಡಿ ಮಾಡಬೇಕು. ಅವರು ಬಂದ ತಕ್ಷಣ ಕೊಡಲು ಆಗುತ್ತದೆಯೇ? ಸಮಾಲೋಚನೆ ಮಾಡಿದ್ದರೆ ಕೊಡಬಹುದು.

ಶ್ರೀ ಡಿ.ಹೆಚ್. ಶಂಕರಮೂರ್ತಿ(ಉನ್ನತ ಶಿಕ್ಷಣ ಸಚಿವರು): ಸಾಕಷ್ಟು ವಿಷಯ ಈ ಒಂದು ವಿಚಾರದ ಬಗ್ಗೆ ನಾನು ಆಗಲೇ ಲಿಖಿತ ಹೇಳಿಕೆಯನ್ನು calling attention ನ ಉತ್ತರದಲ್ಲಿ ಕಳುಹಿಸಿಕೊಟ್ಟಿದ್ದೆ. ಇದು ಆದ ಮೇಲೆ ಹೊಸ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಗೌರವಾನ್ವಿತ ಸದಸ್ಯರುಗಳು ಎಂದು ಸುದ್ದಿ ತಿಳಿದು ಬಂತು. ನಾನು ಮೇಲ್ಮನೆಯಲ್ಲಿ ತಮಗೆಲ್ಲರಿಗೂ ಗೊತ್ತಿರುವಂತೆ ಸಭಾನಾಯಕನಾಗಿದ್ದೇನೆ. ಅಲ್ಲೂ ಇದೇ ರೀತಿಯ ಸಂಗತಿ ಇರುವುದರಿಂದ ನನಗೆ ಅದನ್ನು ಬಿಟ್ಟು ಬರಲು ಆಗುತ್ತಿಲ್ಲ. ಎರಡು ಮೂರು ಸಲ ಹೇಳಿ ಕಳುಹಿಸಿದರು. ಹಾಗೂ ಅದಕ್ಕಾಗಿ ಓಡಿ ಬಂದಿದ್ದೇನೆ. ಖಂಡಿತವಾಗಿ ಯಾವುದೇ ರೀತಿಯಲ್ಲಿ ಸಂಗತಿಗಳು ಬಹಳ ಗಂಭೀರವಾಗಿ ಆರೋಪ ಇದ್ದಲ್ಲಿ ಆ ವಿಷಯವನ್ನು ತರಿಸಿ ಪರಿಶೀಲನೆ ಮಾಡಿ ಯಾವ ರೀತಿಯಲ್ಲಿ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕೋ ಖಂಡಿತವಾಗಿ ಮಾಡುತ್ತೇನೆ. ಅದರ ಬಗ್ಗೆ ಹಿಂದೆ ಮುಂದೆ ನೋಡುವುದಿಲ್ಲ. ಅದರ ಬಗ್ಗೆ ಮಾಡೇ ಮಾಡುತ್ತೇವೆ. ನೋಡುತ್ತೇವೆ. ಆದರೆ ಒಂದು ಕಡೆ ಕೇಳಿ ತಕ್ಷಣ ಅದರ ಬಗ್ಗೆ ನಾನು ನಿರ್ಣಯ ಮಾಡುವುದಕ್ಕೆ ಆಗುವುದಿಲ್ಲ. ಖಂಡಿತ ಅದರ ಬಗ್ಗೆ ಪೂರ್ಣ ವಿಷಯ ಸಂಗ್ರಹ ಮಾಡಿ ನ್ಯಾಯವನ್ನು ದೊರೆಕಿಸಿ ಕೊಡುವುದರಲ್ಲಿ ಯಾವುದೇ ರೀತಿ ಹಿಂದುಮುಂದು ನಾನು ನೋಡುವುದಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: Enquiry ಮಾಡಿ ಎಂದೇ ಕೇಳಿರುವುದು. ತಾವು ತುಮಕೂರಿನವರದ್ದನ್ನು, ಬಿಜಾಪುರದ್ದನ್ನು ವಿಚಾರಣೆಗೆ ಹಾಕಿದ್ದೀರಿ. ಅದೇ ರೀತಿ ಮೈಸೂರಿನದ್ದನ್ನು ವಿಚಾರಣೆ ಮಾಡಿಸಿ. ಅಷ್ಟೇ ನಾವು ಕೇಳುತ್ತಿರುವುದು.

ಅಧ್ಯಕ್ಷರು: ಉತ್ತರ ಹೇಳಿದ್ದಾರಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಹೇಳಿಲ್ಲ. ಅವರಿಗೆ ಏನೂ ಗೊತ್ತಿಲ್ಲ ಪಾಪ. You order an enquiry ಅಷ್ಟೆ ನಾವು ಕೇಳುವುದು.

ಶ್ರೀ ಸಿದ್ದರಾಮಯ್ಯ:- ಅದರ ವಿಚಾರಣೆ ಮಾಡಿ ಎಂದಷ್ಟೆ ನಾವು ಹೇಳುತ್ತಿರುವುದು.

ಅಧ್ಯಕ್ಷರು: Enquiry ಎಂದು ಹೇಳುತ್ತಿದ್ದಾರಲ್ಲ?

(ಗೊಂದಲ)

ಶ್ರೀ ಧರ್ಮಸಿಂಗ್: ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಗಿರುವ ಹಗರಣದ ಬಗ್ಗೆ ಮಾಧುಸ್ವಾಮಿಯವರು, ಸಿದ್ದರಾಮಯ್ಯನರು, ಇತರರು ಸಾಕಷ್ಟು ವಿಚಾರವನ್ನು ಹೇಳಿದ್ದಾರೆ. ಅದನ್ನು ತಾವು, ನಾವು ಅಬೆಯನ್ಸ್ ಆಗಿ ಇಡುತ್ತೇವೆ, ತನಿಖೆ ಮಾಡುತ್ತೇವೆ ಎಂದು ಹೇಳಿದಿರಿ. ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ನೀವು ಏನು ಮಾಡಿದ್ದೀರಿ?ಅದರ ಬಗ್ಗೆ ಸಹ ನಾನು ಪ್ರಸ್ತಾಪ ಮಾಡಿದ್ದೆ. ಅಲ್ಪಸಂಖ್ಯಾತ ಮಹಿಳೆ ಇದ್ದಾಳೆ ಎಂದು ಅಲ್ಲಿ ತನಿಖೆ ಮಾಡುತ್ತೀರಿ,ಎಲ್ಲ ರದ್ದುಗೊಳಿಸುತ್ತೀರಿ, ತುಮಕೂರಿನಲ್ಲಿ ತನಿಖೆ ಮಾಡುತ್ತೀರಿ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದಲ್ಲಿ ಮಾಡುತ್ತೀರಿ ಇದಕ್ಕೆ ಏಕೆ ಮಾಡಬಾರದು? ಇವತ್ತು ಇದಕ್ಕೆ ಏಕೆ ಮಾಡುವುದಿಲ್ಲ? ಮಾಡಲೇ ಬೇಕು. ರಾಜ್ಯದ ಉನ್ನತ ಶಿಕ್ಷಣ ಸಚಿವರಾಗಿ ಇವತ್ತು ಮಾಜಿ ಉಪಮುಖ್ಯಮಂತ್ರಿಯವರು, ಸದನದ ಹಿರಿಯ ಸದಸ್ಯರು ಮತ್ತು ಮಾಧುಸ್ವಾಮಿಯವರು ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಬೇರೆ ಕಡೆ ವಿಚಾರಣೆ ಮಾಡಲು ಆಗುತ್ತದೆ ಇಲ್ಲಿ ಮಾಡುವುದಿಲ್ಲವೆಂದರೆ ನಮ್ಮ ಧೋರಣೆಯನ್ನು ತೋರಿಸುತ್ತದೆ. ಇವತ್ತು ಎಲ್ಲಾ ಕಡೆ ಒಂದೇ ರೀತಿಯ ಸಾಮಾಜಿಕ ನ್ಯಾಯ ಕೊಡಬೇಕು. ಇವತ್ತು ಅಲ್ಲಿ ಎಷ್ಟು ಹಗರಣವಾಗಿದೆ ಎಂಬ ಬಗ್ಗೆ ನಾನು ತಡೆ ಹಿಡಿಯುತ್ತೇನೆ ಮತ್ತು ತನಿಖೆ ಮಾಡುತ್ತೇನೆ ಎಂದು ಹೇಳಬೇಕು.

ಶ್ರೀ ಬಿ.ಎಸ್. ಹೊರಟ್ಟಿ: ಬೇರೆ ವಿಶ್ವವಿದ್ಯಾನಿಲಯಗಳ ಮೇಲೆ ಒಮ್ಮಿಂದೊಮ್ಮೆಯೇ ಕೊಟ್ಟಿಲ್ಲ. ಬೇರೆ ವಿಶ್ವವಿದ್ಯಾನಿಲಯದ ಬಗ್ಗೆ ಇಲ್ಲಿ ಇಪ್ಪತ್ತು ಸಲ ಚರ್ಚೆಯಾದ ಮೇಲೆಯೇ ಕೊಟ್ಟಿರತಕ್ಕದ್ದು. ನೀವು ಇದಕ್ಕೆ ಬೇರೆ ಬಣ್ಣ ಹಾಕಬೇಡಿ.

ಶ್ರೀ ಧರ್ಮಸಿಂಗ್: ಎ.ಬಿ.ವಿ.ಪಿ. ಕಾರ್ಯಕರ್ತರು ಮಹಿಳೆಯ chamberಗೆ ಹೋಗಿ...

ಶ್ರೀ ಬಿ.ಎಸ್.ಹೊರಟ್ಟಿ: ನೀವು ಇದಕ್ಕೆ ಬೇರೆ ಬಣ್ಣ ಹಾಕಬೇಡಿ. ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಬಗ್ಗೆ ಇಲ್ಲಿ ಎಷ್ಟು ಸಲ ಚರ್ಚೆಯಾಗಿದೆ. ಇಲ್ಲಿ ಇದಕ್ಕೆ ಯಾವುದೇ ಬೇರೆ ಬಣ್ಣ ಅಚ್ಚುವ ಅವಶ್ಯಕತೆ ಇಲ್ಲ. ಅದರ ಬಗ್ಗೆ 20 ಸಲ ಚರ್ಚೆಯಾಗಿದೆ. ಈ ರೀತಿ ಚರ್ಚೆಯಾದ ಮೇಲೆ ಕೊನೆಯಲ್ಲಿ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು: ಎಲ್ಲರು ಒಂದೇ ಸಲ ಕೂಗಬೇಡಿ. ಒಬ್ಬೊಬ್ಬರೇ ಮಾತನಾಡಿ. ಅವರು ಏನೋ ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್.ಹೊರಟ್ಟಿ: ಮಹಿಳಾ ವಿಶ್ವವಿದ್ಯಾನಿಲಯದ ಬಗ್ಗೆ ಎಷ್ಟು ಸಲ ಬಂದಿದೆ, ವರ್ಷವೆಲ್ಲ ಮುಷ್ಕರವಾಗಿದೆ. ಅದಕ್ಕೆ ಬೇರೆ ಬಣ್ಣ ಹಾಕುವುದು ಬೇಡ. ಅದಕ್ಕೆ ಏಕೆ ಅಲ್ಪಸಂಖ್ಯಾತರು ಎಂಬ ಬಣ್ಣ ಹಚ್ಚಲು ಹೋಗುತ್ತೀರಿ, ಅಲ್ಪ ಸಂಖ್ಯಾತರು ಇರಲಿ ಬಹುಸಂಖ್ಯಾತರು ಇರಲಿ, ಎಲ್ಲದಕ್ಕೂ ಕಾನೂನು ಒಂದೇ ಎಂದು ನೀವೇ ಹೇಳಿದ್ದೀರಿ.

(ಗೊಂದಲ)

ಅಧ್ಯಕ್ಷರು: ಈ ರೀತಿ ಕೂಗಿದರೆ ಪ್ರಯೋಜನವಿಲ್ಲ. ಉನ್ನತ ಶಿಕ್ಷಣ ಸಚಿವರು ಉತ್ತರ ಕೊಟ್ಟಿದ್ದಾರೆ. ಇನ್ನೂ ಎದ್ದು ನಿಂತಿದ್ದಾರೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಬೇರೆ ಬೇರೆ ವಿಶ್ವವಿದ್ಯಾನಿಲಯ, ಅದು ಬಿಜಾಪುರ ಇರಬಹುದು, ತುಮಕೂರು ಇರಬಹುದು, ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯ ಇರಬಹುದು, ಇದರ ಬಗ್ಗೆ ಮಾಡಿದ್ದೀರ, ಇಲ್ಲಿ ಏಕೆ ಮಾಡುವುದಿಲ್ಲವೆಂದು ಹೇಳಿದರು. ನಮಗೆ ಯಾವುದೇ ಪಕ್ಷಪಾತ ಯಾರ ಪರವಾಗಿಯೂ, ಇಲ್ಲ ಯಾರ ವಿರೋಧವಾಗಿಯೂ ಇಲ್ಲ. ನಾವು ನ್ಯಾಯದ ಪರವಾಗಿ ಇರುವವರು. ಆದರೆ, ಅವರೂ ಬಹಳ ಉನ್ನತ ಸ್ಥಾನಗಳನ್ನು ಹೊಂದಿದ್ದಂಥವರು. ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದಂಥವರು. ಆ ಮೂರೂ ವಿಶ್ವದ್ಯಾನಿಲಯಗಳಲ್ಲಿ enquiry ಮಾಡುವಾಗ ಯಾವ ಕಾರಣಕ್ಕಾಗಿ ಮಾಡಿದೆವು, ಹೇಗೆ ಮಾಡಿದೆವು ಎನ್ನುವುದು ಅವರಿಗೆ ಗೊತ್ತಿದೆ ಎಂದು ನಾನು ಅಂದುಕೊಂಡಿದ್ದೆ. ಬಹುಶಃ ಗೊತ್ತಿಲ್ಲದಿದ್ದರೆ

ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ್ದು ದೊಡ್ಡ ಹಗರಣವಾಗಿ ಸಿ.ಬಿ.ಐ.ವರೆಗೆ ಹೋಯಿತು. ಸಿ.ಬಿ.ಐ.ನವರು ಹೌದು, ಅವರು ತಪ್ಪು ಮಾಡಿದ್ದಾರೆ ಎಂದ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮುಂದುವರೆದಿದ್ದೇವೆ. ಬಿಜಾಪುರ ವಿಶ್ವವಿದ್ಯಾನಿಲಯದ್ದು ಮೇಲಿಂದ ಮೇಲೆ ದೂರುಗಳು chancellor ಆಗಿರತಕ್ಕ ಘನತೆವೆತ್ತ ರಾಜ್ಯಪಾಲರಿಗೆ ಹೋಯಿತು. ಅವರು enquiryಗೆ ಮಾಡಿದ್ದು. ಸರ್ಕಾರ ನಾವು ಆಮೇಲೆ ಮಾಡಿದ್ದು. ತುಮಕೂರು ವಿಶ್ವದ್ಯಾನಿಲಯದ್ದು ಸಹ ರಾಜ್ಯಪಾಲರಿಗೆ ದೂರುಗಳು ಹೋದ ಹಿನ್ನೆಲೆಯಲ್ಲಿ ಅವರು ಇನ್‌ಷಿಯೇಟ್ ಮಾಡಿ ಎಂದು ನನಗೆ ಸೂಚನೆ ಕೊಟ್ಟಮೇಲೆ ನಾನು ಅದನ್ನು ಇನ್‌ಷಿಯೇಟ್ ಮಾಡಿದ್ದೇ ಹೊರತು ನಾವಾಗೇ ಮಾಡಿಲ್ಲ. ಇಲ್ಲಿ ಏನೂ ಮಾಡುವುದಿಲ್ಲವೆ, ಬಿಟ್ಟುಬಿಡುತ್ತೀರಾ, ಯಾರೋ ತಪ್ಪು ಮಾಡಿದರು, ಬೇರೆ ಏನೇ ತಪ್ಪು ಮಾಡಿದರೂ ಬಿಟ್ಟುಬಿಡುತ್ತೀರಾ, ಖಂಡಿತಾ ಇಲ್ಲ. ದೂರುಗಳು ಏನದೆ, ಅದು ಬರಲಿ. ನೋಡುತ್ತೇನೆ ಪರಿಶೀಲಿಸುತ್ತೇನೆ. ಒಂದು side ಕೇಳಿ ಯಾರನ್ನೋ ಒಬ್ಬರನ್ನ ಶೂಲಕ್ಕೆ ಏರಿಸಲು ಆಗುವುದಿಲ್ಲ. ಸರ್ಕಾರ ನಮ್ಮದು. ನಾವು ಸರಿಯಾದ ನಿರ್ಣಯಗಳನ್ನು ಮಾಡಬೇಕಾಗುತ್ತದೆ. ಖಂಡಿತವಾಗಿ ವಿಷಯ ಸಂಗ್ರಹ ಮಾಡಿ ವಿಷಯ ಪೂರ್ತಿ ಬಂದ ಮೇಲೆ ನಾನು action ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನೀವು ಏನೂ ಕೇಳಲಿಲ್ಲ. ಬಂದು ಏನೋ ಉತ್ತರ ಕೊಟ್ಟರೆ ಹೇಗೆ?

ಶ್ರೀ ಸಿದ್ದರಾಮಯ್ಯ:- ಇಲ್ಲಿ ಆಗಿರುವ ಚರ್ಚೆಯ ವಿವರವನ್ನೆಲ್ಲ ನಾವು ಕೊಡುತ್ತೇವೆ.

ಶ್ರೀ ಡಿ.ಹೆಚ್.ಶಂಕರಮೂರ್ತಿ: ಕೊಡಿ. ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಸಿ.ಮಹದೇವಪ್ಪ: ನಾನು 2.7.2007 ರಂದು ಮಾನ್ಯ ಶಂಕರಮೂರ್ತಿ, ಉನ್ನತ ಶಿಕ್ಷಣ ಸಚಿವರಿಗೆ ಈ ವಿಶ್ವವಿದ್ಯಾನಿಲಯದ recruitment, promotions ಮತ್ತು confirmationಗೆ ಸಂಬಂಧಪಟ್ಟಂತೆ detail ಆಗಿ ಎಲ್ಲಾ ಮಾಹಿತಿಯುಳ್ಳ ಪತ್ರವನ್ನು ಇದೆಲ್ಲಾ ಲಗತ್ತಿಸಿ ಬರೆದಿದ್ದೇನೆ. ಅವರ ಕಛೇರಿಯಲ್ಲಿ 8.7.2007 ರಂದು receive ಆಗಿದೆಯೆಂದು ಬಂದಿದೆ. ಅದನ್ನು ಕೊಟ್ಟು ಒಂದು ತಿಂಗಳ ಮೇಲೆ ಆಗಿದೆ. ನಾನು ಮುಖ್ಯಮಂತ್ರಿಯವರು, ಉಪಮುಖ್ಯಮಂತ್ರಿಯವರು, ಶಿಕ್ಷಣ ಸಚಿವರಿಗೆ, ಘನತೆವೆತ್ತ ರಾಜ್ಯಪಾಲರಿಗೆ ಅಷ್ಟೂ ಜನರಿಗೂ 2.7.2007 ರಂದು ಈ ಎಲ್ಲಾ ಅವ್ಯವಹಾರಗಳ ಬಗ್ಗೆ

ಕಾನೂನು ಬಾಹಿರವಾದ ನೇಮಕಾತಿಯ ಬಗ್ಗೆ ಸಂಪೂರ್ಣವಾದ ಮಾಹಿತಿ ಇರುವ ಪಟ್ಟಿಯನ್ನು ಅವರಿಗೆ ಕೊಟ್ಟಿದ್ದೆನೆ. ಅವರು 8 ನೇ ತಾರೀಖು ಅದನ್ನು receive ಮಾಡಿಕೊಂಡಿದ್ದು ನನಗೆ ಒಬ್ಬರೂ ಅದರ ಬಗ್ಗೆ ಪತ್ರವನ್ನೂ ಬರೆದಿಲ್ಲ. ಅವರ ಕಛೇರಿಯಲ್ಲಿ receive ಆಗಿರುವುದು ಇಲ್ಲಿದೆ. ಕೋರ್ಟ್ 6 ಜನರಿಗೆ confirm ಮಾಡಿ ಎಂದು ನಿರ್ದೇಶನ ಕೊಟ್ಟಿತ್ತು. ಕುಲಸಚಿವರು ಮಾಡಬೇಕು ಎಂದು ಹೇಳಿದರು. ಯಾರಿಗೆ confirm ಮಾಡಲು ಅರ್ಹತೆ ಇಲ್ಲವೋ ಅಂಥವರಿಗೆ 32 ಜನರಲ್ಲಿ 22 ಜನರಿಗೆ ಮಾಡಿದ್ದಾರೆ. ಕುಲಪತಿಗಳ ಅವಧಿ ಇರುವುದು ಇನ್ನು 6 ತಿಂಗಳು. 6 ತಿಂಗಳಿನಲ್ಲಿ ಯಾವುದೇ recruitment ಆಗಬಾರದು ಎಂದು ಇದೆ. ಆ ನಿಯಮ ಇದ್ದರೂ ಅವರು recruitment ಮಾಡಿದ್ದಾರೆ. ಕೋರ್ಟ್‌ನ ಆದೇಶವನ್ನು ಉಲ್ಲಂಘನೆ ಮಾಡಿದ್ದಾರೆ. confirm ಮಾಡುವಾಗ ಅಲ್ಲಿರುವ 151 ಜನರಲ್ಲಿ 30 ಜನರಿಗೆ ಮಾತ್ರ ಹತ್ತು ವರ್ಷದ ಸುಪ್ರಿಂ ಕೋರ್ಟ್‌ನ ತೀರ್ಪಿನ ಪ್ರಕಾರ confirm ಮಾಡಲು ಬರುವುದು. 115 ಜನರನ್ನು ಮಾಡಲು ಬರುವುದಿಲ್ಲ. 25% ಮೀಸಲಾತಿ ಅಲ್ಲಿ ಇಲ್ಲ. ಈ ಎಲ್ಲ ಹಿನ್ನೆಲೆಯಲ್ಲಿ ಇವರು ಸಂವಿಧಾನವನ್ನು, ನ್ಯಾಯಾಂಗವನ್ನು ಎಲ್ಲಾ ನಿಯಮಾವಳಿಗಳನ್ನು ಸ್ವಾಯತ್ತತೆಯನ್ನು ಲಾಭವನ್ನು ಮೀಸಲಾತಿಯ ಉಲ್ಲಂಘನೆ ಮಾಡಿ ಇಂಥ ಕ್ರಮವನ್ನು ಎಸಗಿದ್ದಾರೆ. ಅಕ್ರಮವಾಗಿರತಕ್ಕಂಥ ನೇಮಕಾತಿಯನ್ನು abeyanceನಲ್ಲಿಟ್ಟು, ತನಿಖೆ ಮಾಡಿ ಶಿಕ್ಷೆಯನ್ನು ಕೊಡಬೇಕೆಂದು ಸರ್ಕಾರವನ್ನು ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಸಾಕಷ್ಟು ವಿಷಯಗಳನ್ನು ನನ್ನ ಎದುರಿಗೆ ಕೊಟ್ಟಿದ್ದಾರೆ. ಇನ್ನಷ್ಟು ಮಾಹಿತಿಯನ್ನು ಕೊಡುವುದಕ್ಕೆ ತಯಾರಿದ್ದೇವೆಂದು ಹೇಳುತ್ತಿದಾರೆ. ನನ್ನ ಕಛೇರಿಗೆ ಪತ್ರ ಬರೆದಿದ್ದಾರೆ. ಅವರು ಪತ್ರ ಬರೆದಿಲ್ಲವೆಂದು ನಾನು ಹೇಳಲಿಲ್ಲ. ಅವರ ಪತ್ರಕ್ಕೆ ನನ್ನ ಕಛೇರಿ acknowledgement ಅನ್ನೇ ನೀಡಿದೆ. ಮಾಹಿತಿಯನ್ನು ಪೂರ್ತಿಯಾಗಿ ತರಿಸಿಕೊಂಡು, ಅದನ್ನು ನಾನು ನೋಡುತ್ತೇನೆ. ಮಾಹಿತಿ ಸಂಗ್ರಹ ಮಾಡಿ ನೋಡಿದ ಮೇಲೆ, ಅದರಲ್ಲಿ ಏನಾದರೂ ತಪ್ಪು ಮಾಡಿದ್ದರೆ ಶಿಕ್ಷೆ ಕೊಡಬೇಕೊ ಅಥವಾ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ತಪ್ಪು ಯಾವುದೂ ಆಗಿಲ್ಲವೆಂದರೆ ಅದನ್ನು ಅಲ್ಲಿಗೇ ಮುಕ್ತಾಯಗೊಳಿಸುತ್ತೇವೆ. ಸರ್ಕಾರಕ್ಕೆ ನಿಂತಲ್ಲೇ ಏನಾದರೂ ಹೇಳಬೇಕೆಂದರೆ ಆಗುವುದಿಲ್ಲ. ಖಂಡಿತವಾಗಿಯೂ ಅದಕ್ಕೆ ಸಂಬಂಧಿಸಿದ ಫೈಲ್ ಅನ್ನು ನಾನು ಪೂರ್ತಿಯಾಗಿ ಗಮನಿಸುತ್ತೇನೆ ಮತ್ತು ಸ್ಟಡಿ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಆಯಿತು ಬಿಡಿ. ಈಗ....

ಶ್ರೀ ಜೆ.ಸಿ.ಮಾಧುಸ್ವಾಮಿ: what else we are asking? ಒಂದು enquiry ಮಾಡಿಸಿ ಎಂದಷ್ಟೇ ನಾವು ಕೇಳುತ್ತಿದ್ದೇವೆ. ಶಿಕ್ಷೆ ಮಾಡಿ ಎಂದು ನಾವು ಹೇಳಿಲ್ಲ. ನಾವ್ಯಾರೂ ಶಿಕ್ಷೆ ಮಾಡಿ ಎಂದು ಹೇಳಿಲ್ಲ...

(ಗೊಂದಲ)

ಅಧ್ಯಕ್ಷರು: ಮಾನ್ಯ ಮಾಧುಸ್ವಾಮಿಯವರೆ ಮತ್ತು ಮಾನ್ಯ ಸಿದ್ದರಾಮಯ್ಯನವರೆ, ದಯವಿಟ್ಟು ನಾನು ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಾವೇನು ಅವರಿಗೆ ಶಿಕ್ಷೆ ಮಾಡಿ ಎಂದು ಹೇಳಿದೆವೇ?

(ಗೊಂದಲ)

ಅಧ್ಯಕ್ಷರು: ದಯವಿಟ್ಟು ನನ್ನ ಮಾತು ಕೇಳಿ. ಸರ್ಕಾರದ ಪರವಾಗಿ ಅವರು ಉತ್ತರ ಹೇಳಿದ್ದಾರೆ. ಮತ್ತೆ ಈಗ ಇದನ್ನು ಎಳೆದುಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಇದನ್ನು ಇಲ್ಲಿಗೆ ನಿಲ್ಲಿಸೋಣ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: we are demanding an enquiry. He must say. ನಾವು ಇಷ್ಟೆಲ್ಲಾ ಮಾತನಾಡಿ...

(ಗೊಂದಲ)

ಶ್ರೀ ಡಿ.ಹೆಚ್. ಶಂಕರಮೂರ್ತಿ: I should be convinced.

(ಗೊಂದಲ)

ಅಧ್ಯಕ್ಷರು: ಮಾನ್ಯ ಮಾಧುಸ್ವಾಮಿಯವರೆ, ನೀವು ಎಲ್ಲಾ ವಿಚಾರಗಳನ್ನು ಹೇಳಿದ್ದೀರಿ. ಎಲ್ಲವನ್ನೂ ಸರ್ಕಾರದ ಗಮನಕ್ಕೆ ತಂದಿದ್ದೀರಿ. ಸರ್ಕಾರದ ಪರವಾಗಿ ಅವರು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ನಾವು ಮುಂದೆ ಹೋಗೋಣ.

(ಗೊಂದಲ)

ಜೆ.ಸಿ.ಮಾಧುಸ್ವಾಮಿ: ... ಈ House convince ಆಗಿದೆ ಎಂದು ನಾವು ತಿಳಿದುಕೊಂಡಿದ್ದೇವೆ. ಸನ್ಮಾನ್ಯ ಸಚಿವರು ಸಭೆಯಲ್ಲಿ ಇಲ್ಲದಿದ್ದುದ್ದರಿಂದ ಈ ಗೊಂದಲ ಸೃಷ್ಟಿಯಾಗಿದೆ. ನಾವು ಸಾಕಷ್ಟು ಮಾಹಿತಿಯನ್ನು ಹೌಸ್ ಮುಂದೆ ಹೇಳಿದ್ದೇವೆ. ಅದರ extracts ತರಿಸಿಕೊಳ್ಳಿ. ಅದರ ಬಗ್ಗೆ ಒಂದು ತನಿಖೆ ಮಾಡಿ. ಅವರು ತಪ್ಪಿತಸ್ಥರಲ್ಲ ಎಂದರೆ ಬಿಡಿ, ನಮಗೇನಾಗಬೇಕು?

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಸಭಾಧ್ಯಕ್ಷರೆ, ಸದನದ ನಡವಳಿಕೆಗಳ extract ಅನ್ನು ತರಿಸಿಕೊಂಡು, ಗೌರವಾನ್ವಿತ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ಯಾವುದೇ ವಿಷಯಗಳಿರಲಿ, ಅದನ್ನು ಸ್ಟಡಿ ಮಾಡುತ್ತೇನೆ. ಅಕಸ್ಮಾತ್ ಪೂರ್ತಿ ದಾಖಲೆಗಳನ್ನು ಇಲ್ಲಿ ತಾವು ಕೊಟ್ಟಿಲ್ಲದಿದ್ದರೆ, ಅದನ್ನೂ ತಮ್ಮಿಂದ ತೆಗೆದುಕೊಂಡು, ನಾನು ಅದನ್ನು ನೋಡಿ, ನಂತರ ಅದರ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಇದರ ಬಗ್ಗೆ ತನಿಖೆ ಮಾಡಲೇಬೇಕು...

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರು ಎಲ್ಲವನ್ನೂ ನೋಡಿ ನಿರ್ಧಾರ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅಗತ್ಯವಿರುವ information ಗಳನ್ನೆಲ್ಲಾ ನಾವು ಕೊಟ್ಟಿದ್ದೇವೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ: I should be convinced.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಶಂಕರಮೂರ್ತಿಯವರೆ, ನಾವು documents ಗಳನ್ನೆಲ್ಲಾ ಕೊಟ್ಟಿದ್ದೇವೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ನೀವು ಕೊಟ್ಟಿರುವ ದಾಖಲಾತಿಗಳನ್ನು ನಾನು ನೋಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಸರ್ಕಾರ ಅದನ್ನು ನೋಡಲಿಕ್ಕೆ ಬರುವುದಿಲ್ಲ. ಅದರ ಬಗ್ಗೆ enquiry ಮಾಡಿಸಬೇಕು.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಎಲ್ಲವನ್ನೂ ನೋಡದೇ enquiry ಮಾಡಿಸಲಿಕ್ಕಾಗುತ್ತದೆಯೇ? ಆ ರೀತಿ ಆಗುವುದಿಲ್ಲ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ನೀವು punish ಮಾಡಿ ಎಂದು ನಾವು ಕೇಳಿಲ್ಲ. enquiry ಮಾಡಿ ಎಂದು ನಾವು ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಾಳೆಯೇ ಅವರನ್ನು suspend ಮಾಡಿ punish ಮಾಡಿ ಎಂದು ನಾವು ಹೇಳಿದೆವೇ?

(ಗೊಂದಲ)

ಅಧ್ಯಕ್ಷರು: Parliamentary Affairs Ministerರವರೆ, ಈಗ ಏನು ಮಾಡುತ್ತೀರಿ? ಬಿಲ್‌ಗಳನ್ನು ತೆಗೆದುಕೊಳ್ಳುತ್ತೀರಾ? ಹೇಗೆ?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ... ಇದರ ಬಗ್ಗೆ ನೀವು ಒಂದು enquiry ಸಹ ಮಾಡಿಸುವುದಿಲ್ಲವೆಂದರೆ ಹೇಗೆ?

ಶ್ರೀ ಡಿ.ಹೆಚ್. ಶಂಕರಮೂರ್ತಿ: enquiry ಮಾಡಿಸುವುದಕ್ಕೂ prima-facie ಬೇಕು.

ಶ್ರೀ ಸಿದ್ದರಾಮಯ್ಯ: prima-facie ಇದೆ.

(ಗೊಂದಲ)

ಶ್ರೀಡಿ.ಹೆಚ್. ಶಂಕರಮೂರ್ತಿ: ಅದನ್ನು ನಾನು ತೆಗೆದು ನೋಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೆ ಮತ್ತು ಮಾನ್ಯ ಮಾಧುಸ್ವಾಮಿಯವರೆ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ತಾವೇ ಹೇಳಿ ಸಾರ್.

ಅಧ್ಯಕ್ಷರು: ಸರ್ಕಾರದ ಪರವಾಗಿ ಹೀಗೆಯೇ ಉತ್ತರ ಕೊಡಿ ಎಂದು ನಾನು ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವು charge ಮಾಡಿರುವುದರ ಬಗ್ಗೆ ಇಲ್ಲಿ ತನಿಖೆಯಾಗಲಿ. ತಪ್ಪಿಲ್ಲವೆಂದರೆ ತಪ್ಪಿಲ್ಲವೆಂದು ಹೇಳಲಿ.

ಅಧ್ಯಕ್ಷರು: ಹೀಗೆಯೇ ಮಾಡಿ, ಹಾಗೆಯೇ ಮಾಡಿ ಎಂದು ನಾನು ಸರ್ಕಾರಕ್ಕೆ ಹೇಳುವುದಕ್ಕಾಗುತ್ತದೆಯೇ?

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವು ತನಿಖೆ ಮಾಡಿ ಎಂದು ಕೇಳುತ್ತಿದ್ದೇವೆ. It is our right.

ಅಧ್ಯಕ್ಷರು: Everybody has to leave it to his conscience. ಏನು ಕರೆಕ್ಟಾಗಿ ಮಾಡಬೇಕೋ ಅದನ್ನು ಮಾಡಲಿ.

(ಗೊಂದಲ)

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್: ... ರಾಜ್ಯದ ಜನತೆ ಇದನ್ನು ನೋಡುತ್ತಿದ್ದಾರೆ. ನಾವು ಇದನ್ನು ಒಪ್ಪಲಿಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಎಲ್ಲಾ ವಿಚಾರಗಳನ್ನೂ ಗಣನೆಗೆ ತೆಗೆದುಕೊಂಡು, ಪರಿಶೀಲನೆ ಮಾಡಿ ಮಾಡುತ್ತೇನೆಂದು ಅವರು ಹೇಳಿದ ಮೇಲೆ ಇನ್ನೇನಿದೆ?

(ಗೊಂದಲ)

[ಈ ಹಂತದಲ್ಲಿ ಮಾನ್ಯ ಸದಸ್ಯಯರಾದ ಶ್ರೀ ಜೆ.ಸಿ.ಮಾಧುಸ್ವಾಮಿ, ಡಾ: ಹೆಚ್.ಸಿ.ಮಹಾದೇವಪ್ಪ, ಶ್ರೀ ಮಹದೇವ್ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸದಸ್ಯರುಗಳು ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾದರು]

(ಗೊಂದಲ)

ಶ್ರೀ ಜಿ.ಟಿ.ದೇವೆಗೌಡ: ಕಡತ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆಂದು ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಹೇಳಿದ್ದಾರೆ. ಅವರು ಫೈಲ್ ಅನ್ನು ನೋಡಬೇಡವೇ? ನೀವು ಹೇಳಿದ ತಕ್ಷಣ ಅದನ್ನೇ ಮಾಡಲಿಕ್ಕಾಗುತ್ತದೆಯೇ?...

(ಗೊಂದಲ)

[ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತ ಸದಸ್ಯರು ಮಾತನಾಡುತ್ತಿದ್ದರು]

ಅಧ್ಯಕ್ಷರು: ಸುಮ್ಮನೆ ನಿಂತುಕೊಳ್ಳಿ, ನೀವು ಮಾತನಾಡಬಾರದು.

(ಗೊಂದಲ)

ಶ್ರೀ ಬಸವರಾಜ್ ಎಸ್ ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾಹಿತಿಗಳನ್ನು ಕೊಟ್ಟಿದ್ದಾರೆ. ಅದು ಕೇವಲ one side ಕೇಳಿದಂತಾಗುತ್ತದೆ. ಆದ್ದರಿಂದ ಸರ್ಕಾರದ ವತಿಯಿಂದ ಮಾಹಿತಿ ತರಿಸುವುದು ಅವಶ್ಯಕವಾಗಿದೆ. ಸದನದ ಗೌರವಾನ್ವಿತ ಸದಸ್ಯರು ತಮ್ಮ ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ authenticated records ತರಿಸಬೇಕಲ್ಲವೇ? ನೀವು ಮಾಹಿತಿ ಕೊಟ್ಟಿದ್ದೀರಿ. ಆ ಮಾಹಿತಿ ಕೊಟ್ಟಿದ್ದರ ಬಗ್ಗೆ ನಮಗೆ ಅಪನಂಬಿಕೆ ಇದೆ ಎಂದಲ್ಲ. ಮಾನ್ಯ ಸದಸ್ಯರು ಮಾಹಿತಿ ಕೊಟ್ಟರೂ ಸಹಿತ ಸರ್ಕಾರದಿಂದ ಮಾಹಿತಿ ತರಿಸಬೇಕಾಗುತ್ತದೆ. ನಾನೂ ಸಹ ವಿಶ್ವವಿದ್ಯಾನಿಲಯದಲ್ಲಿ Syndicate member ಆಗಿ ಕೆಲಸ ಮಾಡಿದ್ದೇನೆ.

(ಗೊಂದಲ)

ಯಾರೇ ಮಾಹಿತಿ ಕೊಟ್ಟರೂ ಕೂಡ authenticated ಮಾಹಿತಿಯನ್ನು Vice Chancellorರವರಿಂದ ತರಿಸಬೇಕಾಗುತ್ತದೆ. ವಿಶ್ವವಿದ್ಯಾನಿಲಯದಿಂದ ಮಾಹಿತಿ ಬಂದ ನಂತರ, ಅದನ್ನು ಪರಿಶೀಲಿಸಿ ನಾವು enquiry ಮಾಡುವ ಬಗ್ಗೆ ನಿರ್ಧರಿಸಬೇಕಾಗುತ್ತದೆ...

(ಗೊಂದಲ)

ಅಧ್ಯಕ್ಷರು: ಸರ್ಕಾರದ ಪರವಾಗಿ ಅವರು ಉತ್ತರ ಕೊಟ್ಟಿದ್ದಾರೆ. ಅವರು ನೀವು ಕೊಟ್ಟಿರತಕ್ಕಂಥ ದಾಖಲೆಗಳು, ನೀವು ಇಲ್ಲಿ ಮಾತನಾಡಿರುವುದು, ಎಲ್ಲಾ

ಪರಿಶೀಲನೆ ಮಾಡಿ ನಾನು ಒಂದು ಯೋಗ್ಯವಾದ ನಿರ್ಧಾರ ತೆಗೆದುಕೊಳ್ಳುತ್ತೇನೆ, ತನಿಖೆ ಮಾಡಿಸುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಅವರೂ ನೋಡಬೇಕಲ್ಲವೇ? He has to convince himself.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ: ಸಾರ್, ಮಾನ್ಯ ಮಂತ್ರಿಗಳು ಹೀಗೆಯೇ ಹೇಳಬೇಕು, ಹೀಗೆಯೇ ಮಾಡಬೇಕು ಎಂದು ನಿಬಂಧನೆ ಹಾಕಲಿಕ್ಕೆ ಬರುವುದಿಲ್ಲ....

(ಗೊಂದಲ)

ಶ್ರೀ ಬಸವರಾಜ್ ಎಸ್.ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇವತ್ತು ಮಾಹಿತಿ ಕೊಟ್ಟಿದ್ದಾರೆ. ಅವರು ಕೊಟ್ಟಿದ್ದನ್ನೇ authenticated ಎಂದು ಹೇಳುವ ಹಾಗಿಲ್ಲ. ಆದರೆ ಸರ್ಕಾರದ ನಿಯಮಗಳ ಪ್ರಕಾರ ಸಂಬಂಧಪಟ್ಟಂತಹ ವಿಶ್ವವಿದ್ಯಾನಿಲಯ ದಿಂದ ಕಡತವನ್ನು ತರಿಸಬೇಕಾಗುತ್ತದೆ. ಇವರು ಕೊಟ್ಟಿದ್ದನ್ನು ನಾವು ತಪ್ಪು ಎಂದು ಹೇಳುವಂತಿಲ್ಲ ಅಥವಾ ಆ ಮಾಹಿತಿ ತಪ್ಪು ಇದೆ ಎಂದು ಹೇಳುವಂತಿಲ್ಲ. ಆದರೂ ಸರ್ಕಾರದ ನಿಯಮದ ಪ್ರಕಾರ ಸರ್ಕಾರ ಮಾಹಿತಿಯನ್ನು ತರಿಸಬೇಕಾಗುತ್ತದೆ. ಆ ಬಗ್ಗೆ University ಯವರು ಸಂಪೂರ್ಣವಾದಂತಹ ಮಾಹಿತಿಯನ್ನು ಕೊಡಬೇಕಾಗುತ್ತದೆ. ಮಾಹಿತಿ ಬಂದ ನಂತರ, ತಪ್ಪಿದ್ದರೆ enquiry ಮಾಡಿಸುತ್ತಾರೆ. ನೀವು ಹೇಳಿದ ತಕ್ಷಣವೇ ಹೇಗೆ ತನಿಖೆ ಮಾಡಿಸಲಿಕ್ಕಾಗುತ್ತದೆ? ತನಿಖೆ ಮಾಡುವುದಕ್ಕೆ ಮಾಹಿತಿ ಬೇಕಲ್ಲವೇ? ನೀವು ಕೊಟ್ಟಿದ್ದೀರಿ, ಅದು one sided ಮಾಹಿತಿಯಾಗುತ್ತದೆ. University is an autonomous body. ಮಾಹಿತಿ ಬಂದ ನಂತರ, ತಪ್ಪಿದ್ದರೆ ಸರ್ಕಾರ enquiry ಮಾಡಿಸುತ್ತದೆ. ನೀವು ಹೇಳಿದ ತಕ್ಷಣವೇ ಹೇಗೆ ತನಿಖೆ ಮಾಡಿಸಲಿಕ್ಕಾಗುತ್ತದೆ? ತನಿಖೆ ಮಾಡುವುದಕ್ಕೆ ಮಾಹಿತಿ ಬೇಕಲ್ಲವೇ? ನೀವು ಕೊಟ್ಟಿದ್ದೀರಿ, ಅದು one sided ಮಾಹಿತಿಯಾಗುತ್ತದೆ. University is an autonomous body. ಸರ್ಕಾರ ಇದನ್ನು ಮಾಡಲಿಕ್ಕೆ ಅಧಿಕಾರವಿಲ್ಲ. ಅದು ಅಟಾನಮಸ್ ಬಾಡಿ. Governor ರವರು ತನಿಖೆ ಮಾಡಿಸಬೇಕು. ಸರ್ಕಾರ ನೋಡಬೇಕಾಗುತ್ತದೆ. University is an autonomous body. ಅದು ಹೇಗೆ ತನಿಖೆ ಮಾಡುವುದಕ್ಕಾಗುತ್ತದೆಯೇ? ಅದರ ವಿಷಯವನ್ನು ಸರ್ಕಾರ ತನಿಖೆ ಮಾಡಲಿಕ್ಕಾಗುವುದಿಲ್ಲ

(ಗೊಂದಲ)

Governor ರವರಿಂದ ಸೂಚನೆ ಬಂದ ನಂತರ ಸರ್ಕಾರ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ಸುಮ್ಮನೆ ಕುಳಿತುಕೊಳ್ಳಿ. ವೆಲ್‌ನಲ್ಲಿ ಬಂದು ನೀವು ಮಾತನಾಡಬಾರದು.

(ಗೊಂದಲ)

[ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದವರಲ್ಲಿ ಕೆಲವು ಧಿಕ್ಕಾರ ಮತ್ತು ಘೋಷಣೆಗಳನ್ನು ಕೂಗುತ್ತಿದ್ದರು]

(ಗೊಂದಲ)

ಅಧ್ಯಕ್ಷರು: ನೀವು ವೆಲ್‌ನಲ್ಲಿ ಬಂದಿದ್ದೀರಿ. ಅಲ್ಲಿ ಸುಮ್ಮನೆ ನಿಂತುಕೊಳ್ಳಿ, ಅಷ್ಟೇ. ವೆಲ್‌ನಲ್ಲಿ ನಿಂತು ಈ ರೀತಿ ಘೋಷಣೆಗಳನ್ನು ಕೂಗಬೇಡಿ. ಅದು ಚೆನ್ನಾಗಿರುವುದಿಲ್ಲ.

(ಗೊಂದಲ)

ಸುಮ್ಮನೆ ನಿಂತುಕೊಳ್ಳಿ. ಅವರು ಏನು ಹೇಳುತ್ತಾರೋ, ಕೇಳೋಣ.

(ಗೊಂದಲ)

ಶ್ರೀ ಬಸವರಾಜ್ ಎಸ್ ಹೊರಟ್ಟಿ:- ಮಾನ್ಯ ಅಧ್ಯಕ್ಷರೆ, ನಾನು ಇನ್ನೊಂದು ಸಲ ಹೇಳುತ್ತೇನೆ. ಸರ್ಕಾರಕ್ಕೆ ತನಿಖೆ ಮಾಡಲಿಕ್ಕೆ ಏನೂ ಅಧಿಕಾರವಿಲ್ಲ. ಅದು autonomous body. Governor ರವರಿಂದ ಬಂದ ನಂತರವಷ್ಟೇ ಸರ್ಕಾರ ತನಿಖೆ ಮಾಡಲಿಕ್ಕೆ ಬರುತ್ತದೆ. Impossible ಬರುವುದಿಲ್ಲ.

(ಗೊಂದಲ)

ತಾವು ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದವರು...

(ಗೊಂದಲ)

ಅಧ್ಯಕ್ಷರು:- ಇನ್ನೂ ಕೆಲವು ವಿಚಾರಗಳ ಬಗ್ಗೆ ಸರ್ಕಾರದಿಂದ ಉತ್ತರ ಕೊಡಬೇಕಾಗಿದೆ. ಇನ್ನು ಕೆಲವೊಂದು ಪ್ರಮುಖವಾದಂತಹ ವಿಚಾರಗಳು ಚರ್ಚೆಯಾಗಬೇಕಾಗಿದೆ. ಎಲ್ಲರೂ ಇಲ್ಲಿಗೆ ಬಂದು ನಿಂತುಕೊಂಡರೆ ಏನೂ ಚರ್ಚೆಸುವುದಕ್ಕಾಗುವುದಿಲ್ಲ. ಎಲ್ಲಾ ಹೊರಟು ಹೋಗುತ್ತದೆ. ಅರ್ಧ ಗಂಟೆ ಚರ್ಚೆ ಹೋಯಿತು.

(ಗೊಂದಲ)

ಆಯಿತು, ನಿಂತುಕೊಳ್ಳಿ, ನಮ್ಮದೇನು?

(ಗೊಂದಲ)

ಶ್ರೀ ಬಸವರಾಜ್ ಎಸ್ ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ನಾಳೆ ಮಾನ್ಯ ಮಾಧುಸ್ವಾಮಿಯವರೇ autonomous body ಗೆ ಸೇರಿದ್ದನ್ನು ಸರ್ಕಾರ ಹೇಗೆ enquiry ಮಾಡಿಸಿತು ಎಂದು ಕೇಳುತ್ತಾರೆ.

(ಗೊಂದಲ)

ಇದು ಸಾಧ್ಯವಿಲ್ಲ, ಮಾಡಲಿಕ್ಕೆ ಬರುವುದಿಲ್ಲ.

(ಗೊಂದಲ)

ಸರ್ಕಾರ ಯಾವ ಕಾನೂನು ಅಥವಾ ನಿಯಮದ ಪ್ರಕಾರ enquiry ಮಾಡಿಸಬೇಕು ಎಂಬುದನ್ನು ಹೇಳಿ.

(ಗೊಂದಲ)

ಸರ್ಕಾರ suo-motu enquiry ಮಾಡಲಿಕ್ಕೆ ಬರುವುದಿಲ್ಲ. ನಾನು ಹೇಳುತ್ತಿದ್ದೇನೆ, ಅದು ಬರಲಿಕ್ಕೆ ಸಾಧ್ಯವೇ ಇಲ್ಲ.

(ಗೊಂದಲ)

ಅಧ್ಯಕ್ಷರು: ಇನ್ನು ಸರ್ಕಾರದಿಂದ ಉತ್ತರವಾಗಬೇಕು, ಪ್ರಮುಖವಾದ ವಿಚಾರಗಳ ಚರ್ಚೆಯಾಗಬೇಕು, ಇಲ್ಲಿ ಬಂದು ನಿಂತುಕೊಂಡರೆ ಏನು ಅರ್ಥವಾಗಬೇಕು, ಈಗ ಅರ್ಧಗಂಟೆಕಾಲದ ಚರ್ಚೆ ಹೋಯಿತು, ಎಲ್ಲಾ ಹೋಯಿತು, ಆಯಿತು ನಿಂತುಕೊಳ್ಳಿ ನಮಗೇನು..

(ಗೊಂದಲ)

ಶ್ರೀ ಬಿ. ಎಸ್. ಹೊರಟ್ಟಿ: ಅಧ್ಯಕ್ಷರೆ, ನಾಳೆಯ ದಿವಸ ಮಾಧುಸ್ವಾಮಿಯವರೆ, ಅಟನಾಮಸ್ ಬಾಡಿಯ ಮೇಲೆ ಸರ್ಕಾರ ಹೇಗೆ enquiry ಮಾಡುತ್ತಿರಿ ಎಂದು ಅವರೇ ಕೇಳುತ್ತಾರೆ, ಇದು ಸಾಧ್ಯವಿಲ್ಲ, ಮಾಡುವುದಕ್ಕೆ ಬರುವುದಿಲ್ಲ. ಸರ್ಕಾರ ಯಾವ ಕಾನೂನಿನ ಪ್ರಕಾರ ಯೂನಿವರ್ಸಿಟಿ ಆಕ್ಟ್ ಪ್ರಕಾರ enquiry ಮಾಡಬೇಕು ನೀವು ಹೇಳಿ. ಸರ್ಕಾರಕ್ಕೆ suo-motu enquiry ಮಾಡುವುದಕ್ಕೆ ಬರುವುದಿಲ್ಲ, ನಾನು ಹೇಳುತ್ತೇನೆ ಬರುವುದಕ್ಕೆ ಸಾಧ್ಯವೇ ಇಲ್ಲ, ಸರ್ಕಾರಕ್ಕೆ ಅಧಿಕಾರವಿಲ್ಲ...

(ಗೊಂದಲ)

ಅಧ್ಯಕ್ಷರು: ಮುಂದೆ ಅರ್ಧಗಂಟೆ ಕಾಲದ ಚರ್ಚೆ ಇದೆ, ಆಮೇಲೆ ಕಾಲಿಂಗ್ ಅಟೆನ್ಷನ್ಸ್ ಇವೆ, ಇನ್ನು ಹಲವಾರು ವಿಚಾರಗಳು ಚರ್ಚೆಯಾಗಬೇಕಾಗಿದೆ, ನಿಮಗೆ ಚರ್ಚೆ ಬೇಕೊ ಬೇಡವೊ ಹೇಳಿ ಅಷ್ಟೆ.

(ಗೊಂದಲ)

ಮಾನ್ಯ ಸದಸ್ಯರೊಬ್ಬರು [ಸದನದ ಬಾವಿಯಿಂದ]: ಅಧ್ಯಕ್ಷರೆ, ಸರ್ಕಾರ enquiry ಗೆ ಒಪ್ಪಿಕೊಳ್ಳುವುದಕ್ಕೆ ಹೇಳಿ.

ಅಧ್ಯಕ್ಷರು: ನೀವು ಒಪ್ಪಿಕೊಳ್ಳಲಿ ಎಂದರೆ ಸರ್ಕಾರ ಒಪ್ಪಿಕೊಳ್ಳುತ್ತದೆಯೆ, ಅವರಿಗೆ ಹೀಗೆ ಎಂದು ನಾನು ಹೇಳುವುದಕ್ಕಾಗುತ್ತದೆಯೆ? It is for the Government to come out.

ಶ್ರೀ ಮಹಾದೇವ್ (ಬಾವಿಯಿಂದ): ಅಧ್ಯಕ್ಷರೆ, ನಾವೇನು ಕಳ್ಳರೆಂದು ಹೇಳುತ್ತಿಲ್ಲ ಆದರೆ ಅದು ಸಾಬೀತಾಗುವುದಕ್ಕೆ enquiry ಆದರೂ ಆಗಬೇಕಲ್ಲ..

(ಗೊಂದಲ)

ಅಧ್ಯಕ್ಷರು: ಉನ್ನತ ಶಿಕ್ಷಣ ಸಚಿವರು ಹೇಳಿದರಲ್ಲ.

ಶ್ರೀ ಎಂ.ಪಿ.ಪ್ರಕಾಶ್[ಗೃಹ, ಕಾನೂನು ಮತ್ತು ಸಂಸದೀಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಸರ್ಕಾರದ ಉತ್ತರವನ್ನು ಮಾನ್ಯ ಪ್ರತಿಪಕ್ಷದ ನಾಯಕರೆಲ್ಲಾ ಬಯಸಿದರು. ಅದು ನಿಮಗೆ ಸಮಾಧಾನಕರವಾದ ಉತ್ತರವಾಗಿಲ್ಲದೆ ಇರಬಹುದು. ಯಾವುದಾದರೂ ಒಂದು ಫಿರ್ಯಾದು ಬಂದಂಥ ಸಂದರ್ಭದಲ್ಲಿ

ಆ ಬಗ್ಗೆ ತನಿಖೆ ನಡೆಸಿ ಎಂದು ಕೇಳುವ ಅಧಿಕಾರ ತಮಗಿದೆ ಅದನ್ನು ನಾನು ವಿಚಾರಣೆ ಮಾಡಿ, ತನಿಖೆಗೆ ಸೂಕ್ತವಾದುದೆಂದು ಭಾವಿಸಿದರೆ ತನಿಖೆಗೆ ನೇಮಕಾತಿಯನ್ನು ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದಾಗ, ನೀವು ಮಾಡಿರುವ ಪ್ರತಿಯೊಂದು ಅಪಾದನೆಗಳ ಕುರಿತಾಗಿ ಎಲ್ಲಾ ವಿಚಾರಗಳನ್ನು ತನಿಖೆ ಮಾಡುವುದು ಸೂಕ್ತವೆಂದು ಕಂಡುಬಂದರೆ, ಖಂಡಿತ ನಾನು ತನಿಖೆಯನ್ನು ಮಾಡಿಸುತ್ತೇನೆ, ಅದು ಸೂಕ್ತವಲ್ಲವೆನ್ನುವುದಾದರೆ ಮತ್ತೊಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಸರ್ಕಾರದ ಉತ್ತರ ಈಗ ನಾನು ಹೇಳಿದರೂ ಕೂಡ ಅವರು ಹೇಳಿದಂತೆಯೆ. ಆದುದರಿಂದ ಇವತ್ತು ತಾವು ಬಹಳ ಮುಖ್ಯವಾಗಿರುವ ಅನೇಕ ವಿಷಯಗಳನ್ನು ಎತ್ತಿದ್ದಿರಿ, ಕಾರ್ಪೋರೇಷನ್ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ತಾವು ಹೇಳಿದ್ದಿರಿ. ಆದುದರಿಂದ, ನಾನು ವಿನಯದಿಂದ ಎಲ್ಲಾ ಪ್ರತಿಪಕ್ಷದ ನಾಯಕರಿಗೆ ಕೇಳಿಕೊಳ್ಳುವುದು ಇಷ್ಟೆ, ತಾವು ತಮ್ಮ ಸ್ಥಾನವನ್ನು ಅಲಂಕರಿಸಿ, ಈ ಬಗ್ಗೆ ಅವರು ಸಂಪೂರ್ಣವಾಗಿ ನೋಡಿಕೊಂಡು ತನಿಖೆಗೆ ಅಗತ್ಯಬಿದ್ದರೆ ತನಿಖೆಯನ್ನು ಮಾಡಿಸುತ್ತಾರೆ. ಆದುದರಿಂದ, ತಾವು ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿ ಮಾಡುತ್ತೇನೆ.

(Interruptions)

If we say will look into the matter, It is not commitment. ಅವರು ಈಗಾಗಲೇ ಭರವಸೆಯನ್ನು ಕೊಟ್ಟಿದ್ದಾರೆ. You are an Educationist. He has promised to the House. ಮಾನ್ಯ ಸದಸ್ಯರಾದ ಕೃಷ್ಣಪ್ಪನವರೆ, ತಾವು ತಮ್ಮ ಸ್ಥಾನಕ್ಕೆ ತೆರಳಿ ತಮ್ಮ ಅಭಿಪ್ರಾಯವನ್ನು ಹೇಳಿ ಸರ್ ಈ ವಿಚಾರವನ್ನು ಇಲ್ಲಿಗೆ ಕೈಬಿಟ್ಟು, ತಮ್ಮ ಸ್ಥಾನಕ್ಕೆ ತೆರಳಿ.

(ಗೊಂದಲ)

[ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಎ.ಕೃಷ್ಣಪ್ಪ ಅವರು ಬಾವಿಯಿಂದ ತಮ್ಮ ಆಸನಕ್ಕೆ ತೆರಳಿದರು]

ಶ್ರೀ ಎ.ಕೃಷ್ಣಪ್ಪ ; ಮಾನ್ಯ ಪ್ರಕಾಶ್ ಅವರೆ, ಈಗಾಗಲೆ ಸುಪ್ರೀಂ ಕೋರ್ಟ್ ಆದೇಶವಿದೆ, ಅದನ್ನು ಉಲ್ಲಂಘನೆ ಮಾಡಿದ್ದೀರಿ. ರಿಸರ್ವೇಷನ್ ಪಾಲಿಸಿ ಇದೆ, ಅದನ್ನು ಉಲ್ಲಂಘನೆ ಮಾಡಿದ್ದೀರಿ. ಆ ಎರಡು ಇಸ್ಸ್ಯೂ ಮೇಲೆ you refer the case for enquiry. We are not demanding the Government

to hang him, we are not demanding the Government to send him to gallows. Our Minimum reqest is that please make an order for an enquiry on the basis of Supreme Court direction so also about the violation of mandatory direction of reservation policy.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಕೃಷ್ಣಪ್ಪನವರೆ, ತಾವು ಕೂಡ ಮಂತ್ರಿಗಳಾಗಿ ಕೆಲಸವನ್ನು ಮಾಡಿದ್ದೀರಿ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಪ್ರಕಾಶ್‌ರವರೆ, ತಮ್ಮನ್ನು ಕೇಳಿಕೊಂಡಿರುವ ಮತ್ತೊಂದು ವಿಷಯವೇನೆಂದರೆ, ಯಾವುದನ್ನು ಇಲ್ಲೀಗಲ್ ಆಗಿ ಸೆಲೆಕ್ಷನ್ ಮಾಡಿದ್ದಾರೆ, underserving people have been promoted. 3 ತಿಂಗಳಲ್ಲಿ 3 ಬಡ್ತಿಯನ್ನು ಕೊಟ್ಟಿದ್ದಾರೆ, ಅವರನ್ನು ಪೆಂಡಿಂಗ್ ಇಡಿ, ನಿಮಗೆ ನ್ಯಾಯ ಸಮ್ಮತವಾಗಿದೆ ಎಂದರೆ ಅವರಿಗೆ ಬಡ್ತಿ ಕೊಡಿ, ರೆಟ್ರಾಸ್ಪೆಕ್ಟಿವ್ ಡೇಟ್‌ನಿಂದ ಕೊಡಿ, ಸ್ಪೆಷಲ್ ಇಂಕ್ರಿಮೆಂಟ್ಸ್ ಕೊಡಿ. ಏಕೆಂದರೆ Nepotism, sectarianism, ಅದರಲ್ಲಿ ಎಷ್ಟು ತುಂಬಿ ತುಳುಕಿದೆ ಎಂದರೆ, ಆ ಬಗ್ಗೆ ನಮಗೆ ಎಷ್ಟು ಮನವರಿಕೆ ಮಾಡಿಕೊಟ್ಟರು ಅದನ್ನು ಎನ್‌ಕ್ವೈರಿಗೆ ರೆಫರ್ ಮಾಡುವುದಿಲ್ಲವೆಂದರೆ, Government has now come forward to protect some of the people who have violated every thing. There is vested interest. This is the final allegation, that we are making. It is demonstration of vested interest to protect some people. That is our conclusion.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರದ ನಿಲುವು ಬಹಳ ಸ್ಪಷ್ಟವಾಗಿದೆ. ಆಪಾದನೆಗಳನ್ನು ಮಾಡಿದ್ದೀರಿ, ಆಪಾದನೆಗಳ ಸತ್ಯಾಸತ್ಯೆತೆಗಳ ಬಗ್ಗೆಯೂ ಕೂಡ ಸುಪ್ರೀಂ ಕೋರ್ಟ್ ಮತ್ತೊಂದು ವಿಚಾರಗಳ ಬಗ್ಗೆ ನೋಡಬೇಕೆಂದು, ಮಾನ್ಯ ಸಚಿವರು ಹೇಳಿರುವ ಮಾತು ಇಷ್ಟೆ, ನೀವು ಮಾಡಿದಂಥ ಈ ಆಪಾದನೆಗಳ ಬಗ್ಗೆ ಆತ ನಿಸ್ಪಕ್ಷಪಾತವಾಗಿದ್ದಾನೆಂದು ಹೇಳುವುದಕ್ಕೆ ನಾವು ತಯಾರಿಲ್ಲ ಅಥವಾ ಎನ್‌ಕ್ವೈರಿ ಮಾಡುವುದಿಲ್ಲವೆನ್ನುವ ಮಾತನ್ನು ಕೂಡ ಅವರು ಹೇಳಿಲ್ಲ. ಅವರು ಹೇಳಿರತಕ್ಕಂಥದ್ದು, ಈ ಆಪಾದನೆಗಳನ್ನು ಕುರಿತಾಗಿ ನೋಡಿಕೊಂಡು ಅದರ ಪೂರ್ವಾಪರ ಮತ್ತು ಪರಿಣಾಮಗಳ ವಿಚಾರಗಳ ಬಗ್ಗೆ ವಿಚಾರ ಮಾಡಿ ಇದು ಯೋಗ್ಯವೋ ಸೂಕ್ತವೋ ಆದಂಥವು ಆದದ್ದೆಂದು ಕಂಡುಬಂದಲ್ಲಿ ನಾವು ಖಂಡಿತವಾಗಿಯೂ ತನಿಖೆ ಮಾಡುತ್ತೇವೆನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಅವರು ಆ ಮಾತನ್ನು ಹೇಳಿದ್ದಾರೆ. (ಗೊಂದಲ).

ಈಗ ಶಂಕರಮೂರ್ತಿಗಳು ಹೇಳಿದರೂ ಒಂದೇ, ನಾನು ಹೇಳಿದರೂ ಒಂದೇ ನಾನು ಸರ್ಕಾರದ ಪರವಾಗಿ ಹೇಳುತ್ತೇನೆ. ತಾವೆಲ್ಲಾ ಹಿರಿಯರಿದ್ದೀರಿ, ಸರ್ಕಾರ ಇದೇ ರೀತಿಯಾದ ಉತ್ತರವನ್ನು ಕೊಡಬೇಕೆಂದು ಒತ್ತಾಯ ಮಾಡುವುದಕ್ಕೆ ಸಾಧ್ಯವಿಲ್ಲ, ಸರ್ಕಾರದ ನಿಲುವನ್ನು ಆ ನಿಮಿಷದಲ್ಲೇ ಹೇಳಬೇಕೆಂಬುದು ಇಲ್ಲ. ತಾವು ಕೇಳಿರುವುದೆಲ್ಲವೂ ಕೂಡ ನಿಮ್ಮ ದೃಷ್ಟಿಕೋನದಿಂದ ಸರಿಯಾದುದ್ದೇ ಇರಬಹುದು. ಆದರೆ ಸನ್ಮಾನ್ಯ ಸಚಿವರು ಆ ಬಗ್ಗೆ ಪೂರ್ವಾಪರ ವಿಚಾರ ಮಾಡಿ, ಇದು ತನಿಖೆ ಮಾಡಲು ಯೋಗ್ಯವಾದುದೆಂದು ಪರಿಭಾವಿಸಿದರೆ ಖಂಡಿತವಾಗಿಯೂ ನಾವು ತನಿಖೆಯನ್ನು ಮಾಡುತ್ತೇವೆ, we will decide as to whether it requires an enquiry or not.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಗೃಹ ಮಂತ್ರಿಗಳು, ನಾವ್ಯಾರು ಹೇಳಿದ್ದನ್ನು ಕೇಳಬೇಡಿ, ಕೊನೆಯ ಪಕ್ಷ ಅವರಿಗೆ ಸುಪ್ರೀಂ ಕೋರ್ಟ್ ಏನು ರೆಫರೆನ್ಸ್ ಮಾಡಿದೆ, ಏನು ಡೈರೆಕ್ಷನ್ ಕೊಟ್ಟಿದೆ ಅದಕ್ಕಾದರೂ ಮಾನ್ಯತೆಯನ್ನು ಕೊಡಿ. ಸುಪ್ರೀಂ ಕೋರ್ಟ್, ಹೈಕೋರ್ಟ್ ಏನು ಹೇಳಿದೆ ಎಂದು ನೀವು ಗೌರವ ಕೊಡುವುದಕ್ಕೆ ತಯಾರಿಲ್ಲವೆಂದರೆ ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಇಲ್ಲ, ಸುಪ್ರೀಂಕೋರ್ಟ್ ಡಿಸಿಷನ್ ಆದರೂ ಕೂಡ ಅದನ್ನು ನೋಡಬೇಕಾಗುತ್ತದೆ. He has to consult the Law Department. ಆದುದರಿಂದ, ದಯಮಾಡಿ ಮಾನ್ಯ ಸದಸ್ಯರು ತಮ್ಮ ಆಸನಕ್ಕೆ ಮರಳಿ.

ಶ್ರೀ ಎ.ಕೃಷ್ಣಪ್ಪ: ಇಲ್ಲ, ಮಾನ್ಯ ಸಚಿವರು ಹೇಳಲಿ, ನಾವು ಇಲ್ಲೇ ಇರುತ್ತೇವೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಅಧ್ಯಕ್ಷರೆ, ಗೃಹ ಸಚಿವರಾಗಿರುವ ಎಂ.ಪಿ.ಪ್ರಕಾಶ್ ಅವರೇನು ಹೇಳಿದರು, ಇದು ಸರ್ಕಾರದ ನಿಲುವು. ಈ ಬಗ್ಗೆ ಪೂರ್ತಿ ಮಾಹಿತಿಯನ್ನು ತರಿಸಿಕೊಂಡು ನೋಡಿ, ಅದರಲ್ಲಿ, ಹೌದು, ತಪ್ಪಾಗಿದೆ ಎಂದು ಕಂಡುಬಂದರೆ ಖಂಡಿತವಾಗಿಯೂ ಸೂಕ್ತವಾಗಿರುವ enquiry ನಾವು ಮಾಡುತ್ತೇವೆ. ಆದರೆ ವಿಷಯ ಪೂರ್ತಿ ತೆಗೆದುಕೊಳ್ಳದೆ, enquiry ಮಾಡುತ್ತೇನೆ, ಶಿಕ್ಷೆ ಕೊಡುತ್ತೇನೆಂದು ಹೇಳುವುದಕ್ಕೆ ನಾನು ತಯಾರಿಲ್ಲ, ಅದಕ್ಕಾಗಿ ನೀವು ಕಳುಹಿಸಿಕೊಡಿ.

ಶ್ರೀ ಹೆಚ್.ಡಿ.ರೇವಣ್ಣ: ನನ್ನ ಮೇಲೆ 50 ಸೈಟುಗಳಿದ್ದಾವೆಂದು ಹೇಳಿದರು, ನೀವು ಏನು ಮಾಡಿದಿರಿ, ನಿಮಗೆ ನಾಚಿಕೆಯಾಗುವುದಿಲ್ಲವೇ, ನನಗೆ ಗೊತ್ತಿದೆ ಕುಳಿತುಕೊಳ್ಳಿ, ನೀವು ಹೇಳಿದ್ದನ್ನು ತಕ್ಷಣವೇ ಮಾಡಬೇಕೆಂದಿಲ್ಲ... (ಗೊಂದಲ)

ಅಧ್ಯಕ್ಷರು: ದಯಮಾಡಿ, ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ.

[ಸದನದ ಬಾವಿಯಲ್ಲಿ ಧರಣಿ ನಿರತ ಮಾನ್ಯ ಸದಸ್ಯರುಗಳೆಲ್ಲಾ ತಮ್ಮ ಆಸನಕ್ಕೆ ತೆರಳಿದರು]

ಶ್ರೀ ಸಿದ್ದರಾಮಯ್ಯ: ಅಧ್ಯಕ್ಷರೆ, ಇಲ್ಲಿ ಯಾವುದಕ್ಕೆ ಯಾವುದೋ ವಿಚಾರವನ್ನು ತೆಗೆದುಕೊಂಡು ಬರುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಮಾನ್ಯ ಸಚಿವರಾದ ಎಂ.ಪಿ.ಪ್ರಕಾಶ್ ಅವರು, ಎಲ್ಲಾ ದಾಖಲಾತಿಗಳನ್ನು ನೋಡಿ, ನ್ಯಾಯಾಂಗದ ಅಭಿಪ್ರಾಯಗಳನ್ನು ತೆಗೆದುಕೊಂಡು ನಾವು ತನಿಖೆ ಮಾಡಿಸುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ: ಚಾನ್ಸಲರ್ ಅನ್ನು ಕನ್ಸಲ್ಟ್ ಮಾಡಿ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದರೆ ಸಾಕು ಅಷ್ಟೆ.

ಅಧ್ಯಕ್ಷರು: ಅದನ್ನು ಅವರು ಹೇಳಿದ್ದಾರಲ್ಲ.

ಶ್ರೀ ಸಿದ್ದರಾಮಯ್ಯ: ಅವರು ಹೇಳಿಲ್ಲ.

ಅಧ್ಯಕ್ಷರು: ಈಗ ಪಾರ್ಲಿಮೆಂಟರಿ ಅಫೈರ್ಸ್ ಮಿನಿಸ್ಟರ್ ಹೇಳಿದ್ದಾರಲ್ಲ he answers.

ಶ್ರೀ ಸಿದ್ದರಾಮಯ್ಯ: ಪ್ರಕಾಶ್ ಅವರೆ, ಚಾನ್ಸಲರ್ ಅವರನ್ನು ಕನ್ಸಲ್ಟ್ ಮಾಡಿ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದಿರಾ? ಮತ್ತೆ ಅದನ್ನು ಹೇಳಿ.

ಶ್ರೀ ಆರಗ ಜ್ಞಾನೇಂದ್ರ: ಇಂಥ ಶಬ್ದವೇ ಹೇಳಬೇಕೆಂದು ಡಿಕ್ಟೇಟ್ ಮಾಡಿದರೆ ಹೇಗೆ ಸರ್?

ಶ್ರೀ ಸಿದ್ದರಾಮಯ್ಯ: ಡಿಕ್ಟೇಟ್ ಮಾಡುತ್ತಿಲ್ಲ...

ಶ್ರೀ ಹೆಚ್.ಡಿ.ರೇವಣ್ಣ: ಸರ್ಕಾರಕ್ಕೆ ಹೀಗೆ ಮಾಡಿ ಎಂದು ಡಿಕ್ಟೇಟ್ ಮಾಡುವುದಕ್ಕಾಗುವುದಿಲ್ಲ ಸರ್... (ಗೊಂದಲ)

ಶ್ರೀ ಸಿದ್ದರಾಮಯ್ಯ: ಉತ್ತರ ಕೇಳಿದರೆ ಡಿಕ್ಟೇಟ್ ಮಾಡಿದ ಹಾಗೆಯೇ? ಒಬ್ಬರು ನಮಗೆ ಅಧಿಕಾರವಿಲ್ಲವೆಂದು ಹೇಳುತ್ತಾರೆ, ಇನ್ನೊಬ್ಬರು ನಾನು ನೋಡಿಬಿಟ್ಟು ಎನ್‌ಕ್ವೈರಿ ಮಾಡುತ್ತೇನೆ ಎಂದು ಹೇಳುತ್ತಾರೆ, ಇದು ಯಾವ ತರಹ?

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೆ, ಅವರ ಸ್ಪಷ್ಟವಾಗಿ ಹೇಳಿದ್ದಾರೆ, ನೀವು ಅದನ್ನೆ ದೊಡ್ಡ ವಿಚಾರವನ್ನಾಗಿ ಮಾಡಿಕೊಳ್ಳಬೇಡಿ.

ಶ್ರೀ ಜಿ.ಟಿ.ದೇವೇಗೌಡ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ ಅವರು ಹೇಳಿದ್ದಕ್ಕೆ ಮಾನ್ಯ ಸಚಿವರು ಉತ್ತರವನ್ನು ಸ್ಪಷ್ಟವಾಗಿ ಕೊಟ್ಟಿದ್ದಾರೆ, ಇದನ್ನು ಯಾವುದೋ ದುರುದ್ದೇಶದಿಂದ ಹೇಳುತ್ತಿದ್ದಾರೆ, ಇದೆಲ್ಲಾ ದುರುದ್ದೇಶದಿಂದ ಹೇಳುತ್ತಿರುವುದು...

(ಗೊಂದಲ)

ಶ್ರೀ ಜಿ.ಟಿ.ದೇವೇಗೌಡ: ಇದೆಲ್ಲಾ ದುರುದ್ದೇಶದಿಂದ ಮಾಡುತ್ತಿರುವುದು. ಅವರು ಗೌರವದಿಂದ ಕೆಲಸ ಮಾಡುತ್ತಿದಾರೆ. ಮೈಸೂರು ಯೂನಿವರ್ಸಿಟಿಗೆ ಗೌರವ ತಂದು ಕೊಟ್ಟಿದ್ದಾರೆ. VCRಗೆ ಗೌರವ ತಂದು ಕೊಟ್ಟಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ತನಿಖೆ ಆಗಲಿ. ಏನು ಸಾರ್ ಹೀಗೆ ಮಾತನಾಡುತ್ತಾರೆ?

ಅಧ್ಯಕ್ಷರು: charged atmospherನಲ್ಲಿ ಏನೇನೋ ಮಾತನಾಡುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ ರಾಜೀವ್‌ಗಾಂಧಿ ಯೂನಿವರ್ಸಿಟಿಯಲ್ಲಿ Scheduled cast…

ಶ್ರೀ ಜಿ.ಟಿ.ದೇವೇಗೌಡ: ಒಂದೇ ಒಂದು ತಪ್ಪು ತೋರಿಸಲಿ.

ಅಧ್ಯಕ್ಷರು: ಮಹಾದೇವಪ್ಪನವರೇ ಕುಳಿತುಕೊಳ್ಳಿ. ಯಾವ ಮಟ್ಟಕ್ಕೆ ನೀವು ಹೋಗಿ ಬಿಟ್ಟಿದ್ದೀರಿ ಎಂದರೆ, ನಾನು ನಿಂತುಕೊಂಡಿದ್ದರೂ ಸಹ ಎಲ್ಲರೂ ನಿಂತು ಮಾತನಾಡುತ್ತಿದ್ದೀರಿ. Senior member ಗಳೇ ಎಲ್ಲಾ ರೂಲ್ಸ್‌ಗಳನ್ನು ವಯಲೇಟ್ ಮಾಡುತ್ತಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಎಲ್ಲಾ ತರಿಸಿ enquiry ಆಗಿ ಎಲ್ಲ ಹೊರಗೆ ಬರಲಿ.

ಶ್ರೀ ಜಿ.ಟಿ.ದೇವೇಗೌಡ: enquiry ನಡೆದು ಸಾಬೀತಾಗಲಿ. ಕೇಸ್ ಹಾಕಿ. ನಾಲ್ಕೈದು ವರ್ಷಗಳಿಂದ ಗೌರವದಿಂದ ಕೆಲಸ ಮಾಡಿದ್ದಾರೆ. ಇಡೀ ದೇಶದಲ್ಲಿ ಒಳ್ಳೆಯ ಯೂನಿವರ್ಸಿಟಿ ಎಂದು certificate ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು: ಬೇರೆ ವಿಚಾರಗಳನ್ನು ತೆಗೆದುಕೊಳ್ಳುವುದೋ ಬೇಡ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾವು ತನಿಖೆ ಮಾಡಿ ಎಂದು ಹೇಳಿದ್ದೇವೆ.

ಅಧ್ಯಕ್ಷರು: ದೇವೇಗೌಡರೇ ಕುಳಿತುಕೊಳ್ಳಿ. ನೀವು being a member of Cabinet ನೀವು ಕೂಗಾಡಿದರೆ ನಾನು ಸಹಿಸುವುದಿಲ್ಲ. ಎಲ್ಲದಕ್ಕೂ ಒಂದು ಮಿತಿ ಇದೆ. ಮಹಾದೇವಪ್ಪನವರೇ, ಕುಳಿತುಕೊಳ್ಳಿ. ಕೊನೇ ದಿವಸ ನಾನು ಹೊರಗಡೆ ಕಳುಹಿಸಿಬಿಡುತ್ತೇನೆ. ಸರಿ ಇರುವುದಿಲ್ಲ. ಇಲ್ಲಿಯವರೆಗೆ ನಾನು ಒಬ್ಬರಿಗೂ ಹೊರಗಡೆ ಕಳುಹಿಸಿಲ್ಲ. ಇವತ್ತು ಕಳುಹಿಸಿ ಬಿಡುತ್ತೇನೆ. ಮೊದಲು ನೀವು ಕುಳಿತುಕೊಳ್ಳಿ. ಎಲ್ಲಾ ನೀವೇ ಚಾಂಪಿಯನ್ಸ್. ನೀವು ಮೊದಲು ಕುಳಿತುಕೊಳ್ಳಿ. ಸರ್ಕಾರ ಉತ್ತರ ಕೊಟ್ಟಿದೆ, ಉತ್ತರ ಹೇಳಿರುವುದರಿಂದ ಬೇರೆ ವಿಚಾರಕ್ಕೆ ಹೋಗೋಣ. ಈಗ ಅರ್ಧಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳೋಣ. ಕೊನೆಯಲ್ಲಿ ಉತ್ತರ ಕೊಡಿಸುತ್ತೇನೆ. ಕೊನೆಯಲ್ಲಿ ಉತ್ತರ ಕೊಟ್ಟರೆ ಅವರು ಒಂದೆರಡು ಗಂಟೆ ಸದನದಲ್ಲಿ ಇದ್ದ ಹಾಗಾಗುತ್ತದೆ.

9.ಅರ್ಧಗಂಟೆ ಕಾಲಾವಧಿ ಚರ್ಚೆ

ವಿಷಯ: ತೆಂಗಿನ ಮರಗಳಿಗೆ ತಗುಲಿರುವ ನುಸಿ ಪೀಡೆ ಕುರಿತು.

ಶ್ರೀ ವಾಟಾಳ್ ನಾಗರಾಜ್: (ಚಾಮರಾಜ ನಗರ): ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ತೆಂಗಿಗೆ ನುಸಿ ಪೀಡೆ ತಗುಲಿರುವ ಬಗ್ಗೆ ನಾನು ಪ್ರಶ್ನೆ ಕಳುಹಿಸಿದ್ದೆ, ಅದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಆಗಬೇಕೆಂದು ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ತಾವು ಕಾಲಾವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ಅಭಿನಂದಿಸುತ್ತೇನೆ. ಈ ನುಸಿ ಪೀಡೆಗಿಂತ ಹೆಚ್ಚಾಗಿ ಇಲ್ಲಿ ನಡೆದಂಥಹ ವಾಗ್ವಾದಗಳನ್ನು ನೋಡಿದಾಗ ಯಾವ ಕಾಲದಲ್ಲಿ ಈ ಸಭೆ ಆರಂಭವಾಯಿತೋ ನನಗಂತೂ ಗೊತ್ತಿಲ್ಲ. 9.45 ಗಂಟೆಗೆ ಸದನ ಪ್ರಾರಂಭ ಮಾಡುವ ಬಗ್ಗೆ ತಮಗೆ ಯಾರಾದರೂ ಕೇಳಿದರೋ ಇಲ್ಲವೋ ಗೊತ್ತಿಲ್ಲ. ಸದನವನ್ನು ಯಾವ ಸಮಯಕ್ಕೆ ಕರೆಯೋಣವೆಂದು ಯಾರು ಹೇಳಿದರೋ ಗೊತ್ತಿಲ್ಲ.